ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 10 ಬುಧವಾರ 2022

ಸಂಪುಟ: 43 | ಸಂಚಿಕೆ: 116 | ಪುಟಗಳು: 10

₹4

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com

1947ರ ಕಾಂಗ್ರೆಸ್ ಸ್ವಾತಂತ್ರ್ಯ ತಂದು ಕೊಡ್ತು! ಈಗ ಕಾಂಗ್ರೆಸ್ ಸ್ವಾತಂತ್ರ್ಯ ಹರಣ ಮಾಡುತ್ತಿದೆ



ಬೆಂಗಳೂರು, ಆ.9 (ಕೆಎಂಶಿ)–ಕಾಂಗ್ರೆಸ್ ಪಕ್ಷ ಸ್ವಾತಂತ್ರ್ಯ ಹೋರಾಟ ಮಾಡಿದ್ದೇ ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಆಗಲಿ ಎಂಬ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಅಪ್ರಬುದ್ಧತೆಯ ಪ್ರತೀಕ ಮತ್ತು ಪರಮ ಬಾಲಿಶ ಎಂದು ಕುಮಾರಸ್ವಾಮಿ ಟೀಕಿಸಿದ್ದಾರೆ.

ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು ಗೊತ್ತಿರಲಿ, 1947ರ ಹಿಂದಿನ ಕಾಂಗ್ರೆಸ್ ಬೇರೆ, ಈಗಿನ ಸೋಗಲಾಡಿ ಸಿದ್ಧಹಸ್ತರು ಇರುವ ಕಾಂಗ್ರೆಸ್ಸೇ ಬೇರೆ. ಸಮಸ್ತ ಭಾರತೀಯರಿಗೆ ಸ್ವಾತಂತ್ರ್ಯ ತಂದುಕೊಡಲು ಮಹಾತ್ಮಗಾಂಧಿ ನೇತೃತ್ವದ ಕಾಂಗ್ರೆಸ್ ಹೋರಾಟ ಮಾಡಿತ್ತು. ನಂತರದ ಕಾಂಗ್ರೆಸ್ ಮಾಡಿದ್ದೇ ಸ್ವಾತಂತ್ರ್ಯದ ಮಾರಣಹೋಮ.

ಮಾಡಿದ ಪಾಪಕ್ಕೆ ಇವತ್ತಿನ ಕಾಂಗ್ರೆಸ್ ಶಾಸ್ತಿ ಅನುಭವಿಸುತ್ತಿದೆ. ನಾನು ಮುಖ್ಯಮಂತ್ರಿ ಆಗಿದ್ದು ಅಂದು ರಾಷ್ಟ್ರಪಿತರು ತಂದುಕೊಟ್ಟ ಸ್ವಾತಂತ್ರ್ಯ ಹಾಗೂ ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು ಕೊಟ್ಟ ಜಗತ್ ಮಾನ್ಯ ಸಂವಿಧಾನದ ಕಾರುಣ್ಯದಿಂದ. ಇದರಲ್ಲಿ ಕಾಂಗ್ರೆಸ್ ಪಾತ್ರ ಶೂನ್ಯ. ನಾನು ಪಂಡಿತ್ ನೆಹರು, ಲಾಲ್ ಬಹದ್ದೂರ ಶಾಸ್ತ್ರಿ ಅವರ ಬಗ್ಗೆ ಹಗುರವಾಗಿ ಮಾತನಾಡಲಾರೆ. ಅವರ ನಂತರ ಕಾಂಗ್ರೆಸ್ ಹೇಗೆಲ್ಲಾ ಹಾದಿತಪ್ಪಿ ಜನರ ಸ್ವಾತಂತ್ರ್ಯ ಹರಣ ಮಾಡಿತು ಎನ್ನುವುದನ್ನು ಡಿ.ಕೆ. ಶಿವಕುಮಾರ್ ಅವರು ಇತಿಹಾಸ ಓದಿದರೆ ಸತ್ಯ ಅರಿವಾಗುತ್ತದೆ. ಸಂವಿಧಾನ ಕೊಟ್ಟವರು, ದೇಶದ ಮೊದಲನೇ ಸಂಪುಟದಲ್ಲಿ ಸಚಿವರಾಗಿದ್ದವರು ಡಾ.ಬಿ.ಆರ್.ಅಂಬೇಡ್ಕರ್ ಅವರು. ಅಂಥ ಮಹನೀಯರನ್ನು ಸಂಸತ್ತಿಗೇ ಮತ್ತೆ ಬಾರದಂತೆ ತಡೆದು, ಭಾರತದ ದೀನದಲಿತರ ದನಿಯನ್ನು ನಿರ್ದಯವಾಗಿ ಅಡಗಿಸಿದ ಪಕ್ಷದ ನಾಯಕರು ಇವತ್ತು ಸ್ವಾತಂತ್ರ್ಯದ ಭಜನೆ ಮಾಡುತ್ತಿದ್ದಾರೆ. ಕಾಂಗ್ರೆಸ್ ಕೋಳಿ ಕೂಗಿದರೆ ಭಾರತದಲ್ಲಿ ಬೆಳಕು ಹರಿಯುತ್ತದೆ ಎನ್ನುವ ಕಾಲ ಹೋಯಿತು. ಶಿವಕುಮಾರ್ ಅವರು ಇದನ್ನು ಅರ್ಥ ಮಾಡಿಕೊಳ್ಳುತ್ತಾರೆ ಎಂಬ ನಂಬಿಕೆ ನನ್ನದು. ಅಲ್ಲದೆ, ಪಕ್ಷದಲ್ಲಿ ನಿಮ್ಮ ಸ್ವಾತಂತ್ರ್ಯಹರಣ ಮಾಡುತ್ತಿರುವವರ ಕಡೆ ಗಮನಹರಿಸಿ. ಈಗ ಸ್ವಾತಂತ್ರ್ಯೋತ್ಸವದ ನಡಿಗೆ ಎಂದು ಹೊರಟಿದ್ದೀರಿ. ಯಾರ ಸ್ವಾತಂತ್ರ್ಯಕ್ಕಾಗಿ ಎಂದು ಸ್ವಲ್ಪ ಬಿಡಿಸಿ ಹೇಳುವಿರಾ ಇದುವರೆಗೂ ಕಾಂಗ್ರೆಸ್ ನಡೆಸಿದ ಸ್ವಾತಂತ್ರ್ಯ ವಿರೋಧಿ ಕೃತ್ಯಗಳಿಗೆ ಉತ್ತರ ಕೊಡುವಿರಾ ಎಂದರು.

ಬ್ಯಾಡ್ಮಿಂಟನ್ ಮಿಕ್ಸೆಡ್‌ನಲ್ಲಿ ಬೆಳ್ಳಿ ಗೆದ್ದ ಕನ್ನಡತಿ ಅಶ್ವಿನಿ ಪೊನ್ನಪ್ಪಗೆ 15 ಲಕ್ಷ ಪುರಸ್ಕಾರ



ಬೆಂಗಳೂರು, ಆ.9 (ಕೆಎಂಶಿ)–ಬ್ಯಾಡ್ಮಿಂಟನ್ ಮಿಕ್ಸೆಡ್ ಡಬಲ್ಸ್‌ನಲ್ಲಿ ಬೆಳ್ಳಿ ಗೆದ್ದ ಕನ್ನಡತಿ ಅಶ್ವಿನಿ ಪೊನ್ನಪ್ಪ ಅವರಿಗೆ ರಾಜ್ಯ ಸರ್ಕಾರದಿಂದ 15 ಲಕ್ಷ ರೂ ನಗದು ಪುರಸ್ಕಾರವನ್ನು ಕ್ರೀಡಾ ಸಚಿವ ನಾರಾಯಣಗೌಡ ಇಂದಿಲ್ಲಿ ಘೋಷಿಸಿದ್ದಾರೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಈಗಾಗಲೇ ಕ್ರಿಕೆಟ್‌ನಲ್ಲಿ ಬೆಳ್ಳಿ ಪದಕ ವಿಜೇತೆ ರಾಜೇಶ್ವರಿ ಗಾಯಕ್ವಾಡ್ ಅವರಿಗೆ 15 ಲಕ್ಷ ಹಾಗೂ ವೇಟ್ ಲಿಫ್ಟಿಂಗ್‌ನಲ್ಲಿ ಕಂಚು ಗೆದ್ದ ಗುರುರಾಜ ಪೂಜಾರಿಗೆ 8 ಲಕ್ಷ ನಗದು ಪುರಸ್ಕಾರ ಘೋಷಿಸಲಾಗಿದೆ. ಇವರೆಲ್ಲರಿಗೂ ಶೀಘ್ರದಲ್ಲೇ ಮುಖ್ಯಮಂತ್ರಿಗಳ ಮೂಲಕ ನಗದು ಪುರಸ್ಕಾರ ನೀಡಿ ಗೌರವಿಸಲಾಗುವುದು. ಇದೇ ವೇಳೆ ಅಮೃತ ಕ್ರೀಡಾ ದತ್ತು ಯೋಜನೆಯಲ್ಲಿ ಆಯ್ಕೆಯಾಗಿರುವ ಕ್ರೀಡಾಪಟುಗಳನ್ನು ಸತ್ಕರಿಸಲಾಗುವುದು ಎಂದಿದ್ದಾರೆ. ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ನೀಡಲು ನಮ್ಮ ಸರ್ಕಾರ ಬದ್ಧವಾಗಿದೆ. ಅಮೃತ ಕ್ರೀಡಾ ದತ್ತು ಯೋಜನೆ ಮೂಲಕ ಕರ್ನಾಟಕದ ಕ್ರೀಡಾಪಟುಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಕರ್ನಾಟಕದ ಇನ್ನೂ ಹೆಚ್ಚಿನ ಕ್ರೀಡಾಪಟುಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಪ್ರತಿನಿಧಿಸಿ ಹೆಚ್ಚಿನ ಪದಕಗಳನ್ನು ತಂದು ಕೊಡುವ ವಿಶ್ವಾಸವಿದೆ. ಈ ನಿಟ್ಟಿನಲ್ಲಿ ಕ್ರೀಡಾಪಟುಗಳಿಗೆ ಅಗತ್ಯವಿರುವ ಎಲ್ಲಾ ರೀತಿಯ ಸೌಲಭ್ಯ ಹಾಗೂ ಪ್ರೋತ್ಸಾಹ ನೀಡಲು ನಮ್ಮ ಸರ್ಕಾರ ಸಿದ್ದವಿದೆ ಎಂದು ತಿಳಿಸಿದ್ದಾರೆ.

ಸರ್ಕಾರಿ ಸವಲತ್ತು ಸದುಪಯೋಗಪಡಿಸಿಕೊಳ್ಳಿ

ಶಾಸಕ ಎಲ್.ನಾಗೇಂದ್ರ ಕಿವಿಮಾತು



ಮೈಸೂರು. ಆ.9–ಸರ್ಕಾರ ಕೊಡುವ ಸವಲತ್ತುಗಳನ್ನು ಸದುಪಯೋಗಪಡಿಸಿಕೊಂಡು ಚೆನ್ನಾಗಿ ಓದಿ, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಂಡು ಉನ್ನತ ಅಧಿಕಾರಿಗಳಾಗಿ ಹೊರಹೊಮ್ಮಬೇಕೆಂದು ಶಾಸಕ ಎಲ್. ನಾಗೇಂದ್ರ ಕರೆ ನೀಡಿದರು.


ಗಂಗೋತ್ರಿಯಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಡಿ. ದೇವರಾಜ ಅರಸು ಸ್ನಾತಕೋತ್ತರ ಬಾಲಕರ ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿಗಳಿಗೆ 'ನಿರ್ಮಲ ಶುಚಿ ಸಂಭ್ರಮ ಸೋಪ್ ಕಿಟ್' ವಿತರಿಸಿ ಮಾತನಾಡಿದ ಅವರು. ಸರ್ಕಾರ ಹಿಂದುಳಿದ ವರ್ಗದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಕೋಟ್ಯಾಂತರ ರೂ.ಗಳು ಖರ್ಚು ಮಾಡುತ್ತಿದೆ. ಎಲ್ಲಾ ಸೌಲಭ್ಯಗಳನ್ನು ನೀಡಿದೆ. ನೀವೆಲ್ಲರು ಗ್ರಾಮೀಣ ಪ್ರದೇಶಗಳಿಂದ ಬಂದಿದ್ದೀರಿ, ನಿಮ್ಮ ತಂದೆ–ತಾಯಿಯರು ಕಷ್ಟಪಟ್ಟು ನಿಮ್ಮನ್ನು ಓದಲು ಕಳಿಸಿದ್ದಾರೆ. ಅದನ್ನು ಗಮನದಲ್ಲಿಟ್ಟುಕೊಂಡು, ಜೀವನದಲ್ಲಿ ಗುರಿ ಇಟ್ಟುಕೊಂಡು, ಸಾಧನೆ ಮಾಡಿ ಯಶಸ್ವಿಯಾಗಬೇಕೆಂದು ತಿಳಿಸಿದರು. ಈ ಸಂದರ್ಭದಲ್ಲಿ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಚಂದ್ರಕಲಾ, ವಿಸ್ತರಣಾಧಿಕಾರಿ ಸತೀಶ್ ನಿಲಯ ಪಾಲಕರಾದ ನಾಗೇಶ್ ಹಾಜರಿದ್ದರು.

ಆ.11ರಂದು ಉಚಿತ ಸಾಮೂಹಿಕ ಯಜುರುಪಾಕರ್ಮ

ಮೈಸೂರು, ಆ. 9– ಶ್ರೀರಾಮಚಂದ್ರಾಪುರ ಮಠದ ಮೈಸೂರು ವಲಯದಿಂದ ಉಚಿತ ಸಾಮೂಹಿಕ ಯಜುರುಪಾಕರ್ಮವನ್ನು ಆ. 11 ರಂದು ಬೆಳಗ್ಗೆ 8 ಗಂಟೆಗೆ ಮೈಸೂರಿನ ಬೋಗಾದಿಯಲ್ಲಿರುವ ಸಾಯಿ ಸರಸ್ವತಿ ವಿದ್ಯಾಕೇಂದ್ರದ ಆವರಣದಲ್ಲಿ ಆಯೋಜಿಸಲಾಗಿದೆ. ಆಸಕ್ತ ತ್ರಿಮತಸ್ಥ ಬ್ರಾಹ್ಮಣರು ಸದುಪಯೋಗಪಡಿಸಿಕೊಂಡು ಭಾಗವಹಿಸಬಹುದು. ಭಾಗವಹಿಸುವವರು ಮಠದ ಮೈಸೂರು ವಲಯದ ಕಾರ್ಯದರ್ಶಿ ರಾಕೇಶ್ ಭಟ್ ಅವರನ್ನು ದೂರವಾಣಿ ಸಂಖ್ಯೆ 9916221184 ಮೂಲಕ ಸಂಪರ್ಕಿಸಿ ನೋಂದಾಯಿಸಿಕೊಳ್ಳಲು ಕೋರುತ್ತೇವೆ. ಹೆಚ್ಚಿನ ಮಾಹಿತಿಗೆ ಮೊ: 9916221184 ಸಂಪರ್ಕಿಸಿ.

ಅಧ್ಯಾಪಕ ನಿರಂತರ ಅನ್ವೇಷಣೆ ನಡೆಸಬೇಕು

ನಿವೃತ್ತ ಪ್ರಾಧ್ಯಾಪಕಿ ಪ್ರೊ.ಆರ್.ಇಂದಿರಾ ಕಿವಿಮಾತು



ಮೈಸೂರು, ಆ.9(ಎಂಕೆ)– ಶೈಕ್ಷಣಿಕ ಪ್ರಪಂಚದಲ್ಲಿ ನಿರೀಕ್ಷೆಗಳು ಹೆಚ್ಚು ವಿಸ್ತಾರವಾಗುತ್ತಿದ್ದು, ಅಧ್ಯಾಪಕರು ನಿರಂತರ ಅನ್ವೇಷಣೆಯಲ್ಲಿ ತೊಡಗಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕಿ ಪ್ರೊ.ಆರ್.ಇಂದಿರಾ ಸಲಹೆ ನೀಡಿದರು. ಮೈಸೂರಿನ ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕಾವೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ 45 ದಿನಗಳ ಯುಜಿಸಿ–ನೆಟ್, ಕೆ–ಸೆಟ್ ಪರೀಕ್ಷಾ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಬೋಧನೆ ಮತ್ತು ಸಂಶೋಧನೆಗಳನ್ನು ವಿವಿಧ ದೃಷ್ಟಿಕೋನಗಳಲ್ಲಿ ಅರ್ಥೈಸಿಕೊಳ್ಳುವ ಶಕ್ತಿಯನ್ನು ಅಧ್ಯಾಪಕರು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಇಂದು ಜ್ಞಾನದ ಮೂಲಗಳು ಹೆಚ್ಚಾಗಿದ್ದು, ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳೂ ಹೆಚ್ಚಿವೆ. ಅಧ್ಯಾಪಕರು, ವಿದ್ಯಾರ್ಥಿಗಳು ತರಗತಿಯಲ್ಲಿ ಪಡೆದ ಜ್ಞಾನವನ್ನು ಬದುಕಿನ ವಾಸ್ತವಗಳಿಗೆ ಅನ್ವಯಿಸುವ ಸಾಮರ್ಥ್ಯವನ್ನು ಬೆಳೆಸಬೇಕು. ಜ್ಞಾನಾರ್ಜನೆಯನ್ನು ತರಗತಿಗಳಿಗೆ ಮಾತ್ರ ಸೀಮಿತಗೊಳಿಸದೆ ಹೊರ ಪ್ರಪಂಚದ ಅರಿವು ಹಾಗೂ ಅನುಭವಗಳನ್ನು ವಿದ್ಯಾರ್ಥಿಗಳಿಗೆ ನೀಡುವಂತಾಗಬೇಕು ಎಂದರು.

ನನಗೆ ಗೊತ್ತಿರೋದನ್ನೇ ಹೇಳ್ತಿನಿ ಅದನ್ನೇ ಸ್ವೀಕಾರ ಮಾಡಬೇಕೆಂದು ತಿಳಿದುಕೊಳ್ಳದೆ, ನನಗೆ ಗೊತ್ತಿಲ್ಲದೆ ಇರುವುದು ವಿದ್ಯಾರ್ಥಿಗಳಿಗೆ ಗೊತ್ತಿರಬಹುದೆಂದು ತಿಳಿದು ಬೋಧಿಸುವುದು ಒಳ್ಳೆಯ ಶಿಕ್ಷಕರ ಮೊದಲ ಲಕ್ಷಣ ಎಂದರಲ್ಲದೆ ಬೋಧನಾ ವಿಷಯದಲ್ಲಿ ಪರಿಣಿತ ಜ್ಞಾನವಿದ್ದರೆ ಸಾಲದು. ಇಂಟರ್ ನ್ಯಾಷನಲ್ ಅಕಾಡೆಮಿಕ್ ಸ್ಟ್ಯಾಂಡರ್ಡ್ ಪ್ರಕಾರ ಶಿಕ್ಷಕರ ಗುಣಮಟ್ಟವನ್ನು ಅಳೆಯುವುದು ಬೇರೆ ಬೇರೆ ವಿಷಯಗಳಲ್ಲಿ ಯಾವ ರೀತಿ ಜ್ಞಾನವನ್ನು ಹೊಂದಿದ್ದಾರೆ ಎಂಬುದರ ಮೌಲ್ಯಮಾಪನವಾಗಿರಲಿದೆ ಎಂದು ವಿವರಿಸಿದರು. ಇದೇ ವೇಳೆ 'ಮುಕ್ತಭಂಡಾರ ಅಧ್ಯಯನ ಪುಸ್ತಕ'ವನ್ನು ಕೆಎಸ್‌ಓಯು ಕುಲಸಚಿವ(ಪರೀಕ್ಷಾಂಗ) ಪ್ರೊ. ಕೆ.ಬಿ.ಪ್ರವೀಣ್ ಬಿಡುಗಡೆ ಮಾಡಿದರು. ಪ್ರಭಾರ ಕುಲಸಚಿವ ಡಾ.ಎ.ಖಾದರ್ ಪಾಷ, ಡೀನ್ ಪ್ರೊ.ಕಾಂಬ್ಳೆ ಅಶೋಕ್, ಪ್ರೊ.ರಾಮನಾಥಂ ನಾಯ್ಡು, ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ, ಬಿ.ಗಣೇಶ್ ಕೆ.ಜಿ.ಕೊಪ್ಪಲ್, ಸಿದ್ದೇಶ್ ಹೊನ್ನೂರ್ ಮತ್ತಿತರರಿದ್ದರು.

ಮೈಸೂರಲ್ಲಿ 'ಮಹಾರಾಜ ಟ್ರೋಫಿ' ಪಂದ್ಯಾವಳಿ

ಮನೀಶ್ ಪಾಂಡೆ ಬಿರುಸಿನ ಬ್ಯಾಟಿಂಗ್: ಗುಲ್ಬರ್ಗ ಮೈಸ್ಟಿಕ್ಸ್‌ಗೆ ಮೊದಲ ಜಯ



ಮೈಸೂರು, ಆ.9(ಎಂಕೆ)– ಜವಾಬ್ದಾರಿಯುತ ಬ್ಯಾಟಿಂಗ್ ಮಾಡಿದ ಗುಲ್ಬರ್ಗ ಮೈಸ್ಟಿಕ್ಸ್ ತಂಡದ ನಾಯಕ ಮನೀಶ್ ಪಾಂಡೆ ಆಕರ್ಷಕ ಅರ್ಧ ಶತಕ ಬಾರಿಸುವ ಮೂಲಕ 'ಮಹಾರಾಜ ಟ್ರೋಫಿ' ಪಂದ್ಯಾವಳಿಯಲ್ಲಿ ತಂಡಕ್ಕೆ ಮೊದಲ ಜಯ ತಂದುಕೊಟ್ಟರು.

ಮೈಸೂರಿನ ಮಾನಸ ಗಂಗೋತ್ರಿಯಲ್ಲಿರುವ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 'ಮಹಾರಾಜ ಟ್ರೋಫಿ' ಕೆಎಸ್‌ಸಿಎ ಟಿ20 ಪಂದ್ಯಾವಳಿಯ 3ನೇ ದಿನ ಶಿವಮೊಗ್ಗ ಸ್ಟ್ರೈಕರ್ಸ್ ವಿರುದ್ಧ ಗುಲ್ಬರ್ಗ ಮೈಸ್ಟಿಕ್ಸ್ 3 ವಿಕೆಟ್‌ಗಳ ಭರ್ಜರಿ ಜಯ ಗಳಿಸಿದೆ.

ಶಿವಮೊಗ್ಗ ತಂಡ ನೀಡಿದ 176 ರನ್‌ಗಳ ಗುರಿ ಬೆನ್ನತ್ತಿದ ಗುಲ್ಬರ್ಗ ಮೈಸ್ಟಿಕ್ಸ್ ಇನ್ನಿಂಗ್ಸ್ ಆರಂಭಿಸುತ್ತಿದ್ದಂತೆಯೇ ಭರವಸೆಯ ಆಟಗಾರ ದೇವದತ್ತ ಪಡಿಕ್ಕಲ್ 9 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಜೊತೆಯಾದ ಜೆಸ್ವತ್ ಆಚಾರ್ಯ (30) ಹಾಗೂ ರೋಹನ್ ಪಾಟೀಲ್ (28) ಉತ್ತಮ ಆರಂಭ ಕಲ್ಪಿಸಿದರು.

ಒಂದೆಡೆ ವಿಕೆಟ್ ಉರುಳುತ್ತಿದ್ದರೂ ಜವಾಬ್ದಾರಿಯುತ ಬ್ಯಾಟಿಂಗ್ ಮಾಡಿದ ಮನೀಶ್ ಪಾಂಡೆ 36 ಎಸೆತಗಳಲ್ಲಿ 2 ಬೌಂಡರಿ ಹಾಗೂ 3 ಸಿಕ್ಸರ್ ಮೂಲಕ 50 ರನ್ ಗಳಿಸಿ ತಂಡಕ್ಕೆ ಜಯದ ಹಾದಿ ತೋರಿಸಿದರು. ಅಂತಿಮ ಕ್ಷಣದಲ್ಲಿ ಕೋದಂಡ ಅಜಿತ್ ಕಾರ್ತಿಕ್ ಕೇವಲ 9 ಎಸೆತಗಳಲ್ಲಿ 2 ಬೌಂಡರಿ ಹಾಗೂ 1 ಸಿಕ್ಸರ್ ನೆರವಿನಿಂದ ಅಜೇಯ 22 ರನ್ ಸಿಡಿಸಿ ಇನ್ನೂ 5 ಎಸೆತ ಬಾಕಿ ಇರುವಾಗಲೇ ಗೆಲುವಿನ ದಡ ಸೇರಿಸಿದರು. ಶಿವಮೊಗ್ಗ ಸ್ಟ್ರೈಕರ್ಸ್ ಪರ ಡಿ.ಅವಿನಾಶ್ 40ಕ್ಕೆ 5 ವಿಕೆಟ್ ಗಳಿಸಿದರೂ ಯಾವುದೇ ಪ್ರಯೋಜನವಾಗಲಿಲ್ಲ.

ಶತಕದ ಜೊತೆಯಾಟ: ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಶಿವಮೊಗ್ಗ ಸ್ಟ್ರೈಕರ್ಸ್‌ನ ರೋಹನ್ ಕದಮ್ (53) ಮತ್ತು ಕೃಷ್ಣಮೂರ್ತಿ ಸಿದ್ದಾರ್ಥ್ (53) 108 ರನ್‌ಗಳ ಜೊತೆಯಾಟ ಆಡಿದರು. ಆರಂಭಿಕ ಆಟಗಾರ ಸ್ಟಾಲಿನ್ ಹೂವರ್ ಎದುರಿಸಿದ ಮೊದಲ ಎಸೆತದಲ್ಲೇ ವಿಕೆಟ್ ಒಪ್ಪಿಸಿ ಪೆವಿಲಿಯನ್ ಸೇರಿದರು. ಆದರೆ, ಬಳಿಕ ಜೊತೆಯಾದ ರೋಹನ್ ಹಾಗೂ ಸಿದ್ಧಾರ್ಥ್ ಶತಕದ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ರೋಹನ್ 41 ಎಸೆತಗಳಲ್ಲಿ 3 ಬೌಂಡರಿ ಮತ್ತು 2 ಸಿಕ್ಸರ್ ನೆರವಿನಿಂದ 53 ರನ್ ಸಿಡಿಸಿ ಅರ್ಧ ಶತಕ ಪೂರ್ಣಗೊಳಿಸಿದರೆ, ಸಿದ್ಧಾರ್ಥ್ 51 ಎಸೆತಗಳಲ್ಲಿ 4 ಬೌಂಡರಿ ಮತ್ತು 1 ಸಿಕ್ಸರ್ ನೆರವಿನಿಂದ 53 ರನ್ ಗಳಿಸಿ ಟೂರ್ನಿ ಮೊದಲ ಅರ್ಧ ಶತಕ ದಾಖಲಿಸಿದರು.

ಗೌತಮ್ ಮಿಂಚಿನ ಬ್ಯಾಟಿಂಗ್: 6 ಕ್ರಮಾಂಕದಲ್ಲಿ ಬ್ಯಾಟ್ ಬೀಸಿದ ಶಿವಮೊಗ್ಗ ಸ್ಟ್ರೈಕರ್ಸ್ ತಂಡದ ನಾಯಕ ಕೆ.ಗೌತಮ್ ಕ್ರಿಕೆಟ್ ಅಂಗಳದಲ್ಲಿ ಮಿಂಚಿನ ಸ್ಪರ್ಶ ನೀಡಿದರು. ಒಂದೇ ಓವರ್‌ನಲ್ಲಿ 3 ಸಿಕ್ಸರ್ ಮತ್ತು 1 ಬೌಂಡರಿ ಸಿಡಿಸಿ ಅಭಿಮಾನಿಗಳನ್ನು ರಂಜಿಸಿದರಲ್ಲದೆ ತಂಡದ ಮೊತ್ತ 150ರ ಗಡಿ ತಲುಪಲು ನೆರವಾದರು. ಅಂತಿಮವಾಗಿ ಶಿವಮೊಗ್ಗ ಸ್ಟ್ರೈಕರ್ಸ್ 8 ವಿಕೆಟ್ ನಷ್ಟಕ್ಕೆ 175 ರನ್ ಗಳಿಸಿತು. ಗುಲ್ಬರ್ಗ ಮೈಸ್ಟಿಕ್ಸ್ ಪರ ವಿದ್ವತ್ ಕಾವೇರಪ್ಪ 2 ವಿಕೆಟ್ ಗಳಿಸಿ, 48 ರನ್ ನೀಡಿ ದುಬಾರಿ ಬೌಲರ್ ಎನಿಸಿದರು. ಕೋದಂಡ ಅಜಿತ್ ಕಾರ್ತಿಕ್ 29ಕ್ಕೆ 3 ವಿಕೆಟ್ ಗಳಿಸಿದರು. ಮನೋಜ್ ಭಾಂಡ, ರಿತೇಶ್ ಶ್ರೀಜಿತ್ ತಲಾ 1 ವಿಕೆಟ್ ಗಳಿಸಿದರು. ಗುಲ್ಬರ್ಗ ಮೈಸ್ಟಿಕ್ಸ್ ತಂಡದ ನಾಯಕ ಮನೀಶ್ ಪಾಂಡೆ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಇಂದಿನ ಪಂದ್ಯ...

ಸಮಯ ಮಧ್ಯಾಹ್ನ 3ಕ್ಕೆ
ಮೈಸೂರು ವಾರಿಯರ್ಸ್ / ಹುಬ್ಬಳ್ಳಿ ಟೈಗರ್ಸ್
ಸಮಯ ಸಂಜೆ 7ಕ್ಕೆ
ಮಂಗಳೂರು ಯುನೈಟೆಡ್ / ಶಿವಮೊಗ್ಗ ಸ್ಟ್ರೈಕರ್ಸ್

ಶಿವಮೊಗ್ಗ ಸ್ಟ್ರೈಕರ್ಸ್

20 ಓವರ್‌ಗಳಲ್ಲಿ 8 ವಿಕೆಟ್‌ಗೆ 175 (ರೋಹನ್ ಕದಮ್ 53, ಕೃಷ್ಣಮೂರ್ತಿ ಸಿದ್ದಾರ್ಥ್ 53, ಕೆ. ಗೌತಮ್ 23, ಡಿ.ಅವಿನಾಶ್ 19, ವಿದ್ವತ್ ಕಾವೇರಪ್ಪ 48ಕ್ಕೆ2, ಕೋದಂಡ ಅಜಿತ್ ಕಾರ್ತಿಕ್ 29ಕ್ಕೆ 3). **ಗುಲ್ಬರ್ಗ ಮೈಸ್ಟಿಕ್ಸ್:** 19.1 ಓವರ್‌ಗಳಲ್ಲಿ 7 ವಿಕೆಟ್‌ಗೆ 177 (ಜಸ್ವತ್ ಆಚಾರ್ಯ 30, ರೋಹನ್ ಪಾಟೀಲ್ 28, ಮನೀಶ್‌ಪಾಂಡೆ 50, ಕೋದಂಡ ಅಜಿತ್ ಕಾರ್ತಿಕ್ 22*, ಡಿ. ಅವಿನಾಶ್ 40ಕ್ಕೆ 5)

ಬೆಂಗಳೂರು ಬ್ಲಾಸ್ಟರ್ಸ್

16 ಓವರ್‌ಗಳಿಗೆ 5 ವಿಕೆಟ್ ನಷ್ಟಕ್ಕೆ 119(ಮಯಾಂಕ್ ಅಗರ್ವಾಲ್ 43, ಸೂರಜ್ ಅಹುಜಾ 20, ಸೌರವ್ ಶ್ರೀವತ್ಸವ್ 31ಕ್ಕೆ 2) **ಹುಬ್ಬಳ್ಳಿ ಟೈಗರ್ಸ್:** 15.5 ಓವರ್‌ಗಳಿಗೆ 6 ವಿಕೆಟ್ ನಷ್ಟಕ್ಕೆ 139(ಅಭಿಮನ್ಯು ಮಿಥುನ್ 51, ಬಿಯು ಶಿವಕುಮಾರ್ 30, ಜಗದೀಶ್ ಸುಚಿತ್ 21ಕ್ಕೆ 2)

ಹುಬ್ಬಳ್ಳಿ ಟೈಗರ್ಸ್‌ಗೆ ಚೊಚ್ಚಲ ಗೆಲುವು

ಅಭಿಮನ್ಯು ಮಿಥುನ್ ಸ್ಫೋಟಕ ಬ್ಯಾಟಿಂಗ್



ಮಳೆಯ ಕಾಟದಿಂದ 16 ಓವರ್‌ಗಳಿಗೆ ಸೀಮಿತವಾದ ಪಂದ್ಯದಲ್ಲಿ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನ ನೀಡಿದ ಅಭಿಮನ್ಯು ಮಿಥುನ್ ತಂಡದ ಚೊಚ್ಚಲ ಗೆಲುವಿಗೆ ಕಾರಣರಾದರು. ಈ ಮೂಲಕ ಬೆಂಗಳೂರು ಬ್ಲಾಸ್ಟರ್ಸ್ ವಿರುದ್ಧ ಹುಬ್ಬಳ್ಳಿ ಟೈಗರ್ಸ್ 4 ವಿಕೆಟ್‌ಗಳ ಭರ್ಜರಿ ಜಯ ಗಳಿಸಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಆರಂಭಿಸಿದ ಬೆಂಗಳೂರು ಬ್ಲಾಸ್ಟರ್ಸ್ 16 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 119 ರನ್‌ಗಳ ಗುರಿ ನೀಡಿತು. ನಾಯಕ ಮಯಾಂಕ್ ಅಗರ್ವಾಲ್ 43, ಸೂರಜ್ ಅಹುಜಾ 20, ಶಿವಕುಮಾರ್ ರಕ್ಷಿತ್ 15, ಅನಿಶ್ ಕೆವಿ 14 ರನ್ ಗಳಿಸಿದರು. 16ನೇ ಓವರ್ ವೇಳೆ ಬಂದ ಕಾರಣ ಮೊದಲ ಇನ್ನಿಂಗ್ ಅನ್ನು ಸ್ಥಗಿತಗೊಳಿಸಲಾಯಿತು. ಹುಬ್ಬಳ್ಳಿ ಟೈಗರ್ಸ್ ಪರ ಸೌರವ್ ಶ್ರೀವತ್ಸವ್ 2, ವಿ ಕೌಶಿಕ್, ಬಿಯು ಶಿವಕುಮಾರ್ ಹಾಗೂ ಫಾರೂಕ್ ತಲಾ ಒಂದೊಂದು ವಿಕೆಟ್ ಪಡೆದರು. ವಿಜೆಡಿ ನಿಯದನ್ವಯ 137 ರನ್‌ಗಳ ಗುರಿ ಪಡೆದ ಹುಬ್ಬಳ್ಳಿ ಟೈಗರ್ಸ್‌ಗೆ ಆರಂಭಿಕ ಆಘಾತ ಎದುರಾಯಿತು. ತಂಡದ ಮೊತ್ತ 18 ರನ್‌ಗಳಾಗುವಷ್ಟರಲ್ಲೇ ಪ್ರಮುಖ 3 ವಿಕೆಟ್‌ಗಳನ್ನು ಕಳೆದುಕೊಂಡಿತು. ಲುವ್ನಿತ್ ಸಿಸೋಡಿಯಾ 6 ರನ್, ಲಿಯಾನ್ ಖಾನ್ 6 ರನ್ ಗಳಿಸಿದರೆ, ತುಷಾರ್ ಸಿಂಗ್ ಶೂನ್ಯಕ್ಕೆ ರನ್ ಔಟಾದರು. ಈ ವೇಳೆ ಬಿಯು ಶಿವಕುಮಾರ್ 28 ಎಸೆತಗಳಲ್ಲಿ 4 ಬೌಡರಿ ಸಹಿತ 30 ರನ್ ಗಳಿಸಿ ತಂಡಕ್ಕೆ ಸ್ವಲ್ಪ ಚೇತರಿಕೆ ನೀಡುವ ಪ್ರಯತ್ನ ಮಾಡಿದರು. ಕಡೆಯ ಹಂತದಲ್ಲಿ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನ ನೀಡಿದ ನಾಯಕ ಅಭಿಮನ್ಯು ಮಿಥುನ್ ಕೇವಲ 22 ಎಸೆತಗಳಲ್ಲಿ 2 ಬೌಂಡರಿ, 5 ಸಿಕ್ಸರ್ ಮೂಲಕ 51 ರನ್ ಸಿಡಿಸಿ ಚೊಚ್ಚಲ ಜಯ ತಂದಿಟ್ಟರು. ಅಂತಿಮವಾಗಿ ಹುಬ್ಬಳ್ಳಿ 15.5 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 139ರನ್ ಗಳಿಸಿ ಜಯದ ನಗೆಬೀರಿತು. ಬೆಂಗಳೂರು ಪರ ಜಗದೀಶ್ ಸುಚಿತ್ 2, ಕ್ರಾಂತಿ ಕುಮಾರ್, ರೋನಿತ್ ಮೊರೆ ತಲಾ ಒಂದೊಂದು ವಿಕೆಟ್ ಪಡೆದರು. ಅಭಿಮನ್ಯು ಮಿಥುನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಚೆಸ್ಕಾಂನಿಂದ ಮನೆ ಮನೆಗೂ 'ಆಜಾದಿ ಕಾ ಅಮೃತ' ಸಂದೇಶ

ಮೈಸೂರು, ಆ.9(ಎಂಕೆ)– 'ಪ್ರತಿ ಮನೆಯಲ್ಲೂ ರಾಷ್ಟ್ರಧ್ವಜ 13–15ನೇ ಆಗಸ್ಟ್ 2022' ಸಂದೇಶ ಪ್ರತೀ ಮನೆಗೂ ರಸೀದಿಯ ರೂಪದಲ್ಲಿ ತಲುಪಿದೆ...!


75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿಯವರು ನೀಡಿದ 'ಹರ್ ಘರ್ ತಿರಂಗಾ' ಸಂದೇಶವನ್ನು ಕನ್ನಡದಲ್ಲಿ ಭಾಷಾಂತರಿಸಿ ಮನೆ ಮನೆಗೂ ತಲುಪಿಸುವ ವಿಶೇಷ ಕಾರ್ಯದಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ(ಚೆಸ್ಕಾಂ) ತೊಡಗಿದೆ.



ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಹಾಗೂ ಕೊಡುಗು ಜಿಲ್ಲೆಯ ವ್ಯಾಪ್ತಿಯನ್ನೊಳಗೊಂಡಿರುವ ಚೆಸ್ಕಾಂ, ಅಮೃತ ಮಹೋತ್ಸವದ ಅಂಗವಾಗಿ ಪ್ರತಿಯೊಂದು ಮನೆಯಲ್ಲೂ ತ್ರಿವರ್ಣ ಧ್ವಜ ಹಾರಿಸುವಂತೆ ವಿದ್ಯುತ್ ಬಿಲ್‌ನಲ್ಲಿ ಮುದ್ರಿಸಿದೆ. '75 ಸ್ವಾತಂತ್ರ್ಯ ಅಮೃತ ಮಹೋತ್ಸವ(ಲೋಗೋ ಸಹಿತ)', 'ಅಜಾದಿ ಕಾ ಅಮೃತ ಮಹೋತ್ಸವ್ (ಇಂಗ್ಲಿಷ್‌ನಲ್ಲಿ)' ಮುದ್ರಿಸಿದ್ದು, ಅದರ ಕೆಲ ಭಾಗದಲ್ಲಿ 'ಪ್ರತಿ ಮನೆಯಲ್ಲೂ ರಾಷ್ಟ್ರಧ್ವಜ 13–15ನೇ ಆಗಸ್ಟ್ 2022' ಸಂದೇಶ ನೀಡಿದೆ. 75ನೇ ವರ್ಷದ ಅಂಗವಾಗಿ ಸರ್ಕಾರದ ಸೂಚನೆ ಮೇರೆಗೆ ಆಗಸ್ಟ್ ತಿಂಗಳಿನ ವಿದ್ಯುತ್ ಬಿಲ್‌ನಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂದೇಶವನ್ನು ವಿದ್ಯುತ್ ಬಿಲ್‌ನಲ್ಲಿ ಮುದ್ರಿಸಿ ನೀಡಲಾಗುತ್ತಿದೆ. ಜೊತೆಗೆ ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಇರುವುದರಿಂದ ಮುಂದಿನ ತಿಂಗಳು ಸರ್ಕಾರದ ಸೂಚನೆಯಂತೆ ವಿದ್ಯುತ್ ಬಿಲ್‌ನಲ್ಲಿ ಸಂದೇಶ ಮುದ್ರಿಸಲಾಗುವುದು ಎಂದು ಚೆಸ್ಕಾಂನ ಹಿರಿಯ ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ವಿಮಾನ ನಿಲ್ದಾಣದಲ್ಲಿ ಜಾಗೃತಿ: ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ. ಮಹಾತ್ಮ ಗಾಂಧೀಜಿ ಸೇರಿದಂತೆ ಸ್ವಾತಂತ್ರ್ಯ ಹೋರಾಟ ಗಾರರು, ಮೈಸೂರಿನ ಕಲೆ–ಸಂಸ್ಕೃತಿ ಜೊತೆಗೆ ಅಮೃತ ಮಹೋತ್ಸವದ ವರ್ಣರಂಜಿತ ನಾಮಫಲಕ(ಬೋರ್ಡ್)ಗಳನ್ನು ಪ್ರದರ್ಶನಕ್ಕಿಡುವ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ನಖಶಿಖಾಂತ–ಆರೋಗ್ಯ, ಸೌಂದರ್ಯಗಳ ವೈಜ್ಞಾನಿಕ ಮಾಹಿತಿ–ಡಾ. ಕೇಶವ ಕೊರಸೆ, 6.40 ಭಾವಗೀತೆ, 6.45 ರೈತರಿಗೆ ಸಲಹೆ, 6.50 ವನ ಮಹೋತ್ಸವ–ಅರಣ್ಯ ಇಲಾಖೆ ಪ್ರಾಯೋಜಿತ ಕಾರ್ಯಕ್ರಮ, 9.00 ಮನೋನಂದನ–ಪ್ರೇರಣಾ ಆಸ್ಪತ್ರೆ ಪ್ರಾಯೋಜಿತ ಕಾರ್ಯಕ್ರಮ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳುವಳಿಯ ಪಯಣ–ಬಾನುಲಿ ಸರಣಿ, 10.00 ಹಿಂದೂಸ್ಥಾನಿ ಸಂಗೀತ–ಬಾಲೇಖಾನ್–ಸಿತಾರ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ವೈ.ಎನ್. ಮದ್ವೇಶ್, 12.45 ಲಾಕ್‌ಡೌನ್ ಕಥಾ ನಾಟಕ, ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ "ಸೆಳೆತ", ಮೂಲಕಥೆ– ಮಾಲತಿ ಹೆಗಡೆ, ನಾಟಕರೂಪ–ಉಷಾನರಸಿಂಹ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್, 1.20 ಭಾವಗೀತೆ–ರಶ್ಮಿ ಬಿನು, 3.00 ಲಯ ಸಂಭ್ರಮ–ತಾಳ, ಲಯ ರಸಾಸ್ವಾದ, ಪರಿಕಲ್ಪನೆ ಮತ್ತು ಪ್ರಸ್ತುತಿ–ಎಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ–ಎಸ್.ಸುಬ್ರಹ್ಮಣ್ಯ, 4.00 ಮಹಿಳಾರಂಗ–ಸ್ತ್ರೀ ಚೇತನ–ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಲೇಖಕಿ ಕುಸುಮಾ ಆಯರಹಳ್ಳಿ, 4.30 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 4.45 ಹಿಂದಿ ಪಾಠ–ಕಿಶೋರ್ ಎಂ. ಕಾಕಡೆ, 6.50 ಕೃಷಿರಂಗ–ಕಿಸಾನ್‌ವಾಣಿ, ಹಣ್ಣಿನ ಮರಗಳ ಕೃಷಿ, ಉತ್ಪನ್ನಗಳ ಮೌಲ್ಯವರ್ಧನೆ ಹಾಗೂ ಮಾರಾಟದಲ್ಲಿನ ಅನುಭವ ಕುರಿತು ಕೆ.ಬಿ. ಪ್ರಭೋದ್ ಅವರೊಡನೆ ಸಂದರ್ಶನ, 9.05 ಕ್ಷಿತಿಜ–Literacy ಗುರು–ಸಾಹಿತ್ಯ ದಿಗ್ಗಜರೊಂದಿಗೆ ಸಂವಾದ, 10.00 ಹಳ್ಳಿ ಹಾಡು, ಭಾಗವಹಿಸುವವರು– ಬನ್ನೂರು ಕೆಂಪಮ್ಮ ಮತ್ತು ತಂಡ, ಪ್ರಸ್ತುತಿ– ಅಬ್ದುಲ್ ರಶೀದ್

ಇಂದಿನ ಪಂಚಾಂಗ

10.08.2022 ಬುಧವಾರ, ಮಳೆ ನಕ್ಷತ್ರ : ಆಶ್ಲೇಷ, 03.07.2022 ರಿಂದ 16.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ಶುಭಕೃತು ಋತು, ಶ್ರಾವಣ ಮಾಸ, ಶುಕ್ಲ ಪಕ್ಷ
ತಿಥಿ: ತ್ರಯೋದಶಿ, ನಕ್ಷತ್ರ : ಪೂಷಾ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿಯವರ 19ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವ, ಶ್ರೀ ದತ್ತ ವೆಂಕಟೇಶ್ವರಸ್ವಾಮಿಗೆ ಪವಿತ್ರೋತ್ಸವ ಪ್ರಾರಂಭ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ನಂಜನಗೂಡು ರಸ್ತೆ, ದತ್ತನಗರ.

■ **ಶಾರದಾ ವಿಲಾಸ ವಿದ್ಯಾ ಸಂಸ್ಥೆಗಳು :**75ನೇ ಸ್ವಾತಂತ್ರ್ಯೋತ್ಸವ 'ನಮ್ಮ ನಡಿಗೆ ರಾಷ್ಟ್ರೈಕ್ಯತೆಯೆಡೆಗೆ' ಕಾರ್ಯಕ್ರಮ, ಉದ್ಘಾಟನೆ : ಹಂಗಾಮಿ ಮೇಯರ್ ಸುನಂದ ಪಾಲನೇತ್ರ, ಮುಖ್ಯ ಅತಿಥಿಗಳು : ಶಾರದಾ ವಿಲಾಸ ವಿದ್ಯಾಸಂಸ್ಥೆ ಅಧ್ಯಕ್ಷ ಡಾ. ಬಿ.ಎಂ. ಸುಬ್ರಾಯ, ಮೈಸೂರು ಮೆಡಿಕಲ್ ಕಾಲೇಜು ಡೀನ್ ಡಾ. ಹೆಚ್.ಎನ್. ದಿನೇಶ್, ಶಾರದಾ ವಿಲಾಸ ವಿದ್ಯಾಸಂಸ್ಥೆ ಕಾರ್ಯದರ್ಶಿ ಎನ್.ಚಂದ್ರಶೇಖರ್, ಪಾಲಿಕೆ ಸದಸ್ಯೆ ಡಾ.ಜಿ. ರೂಪ, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಅರಮನೆ ಆವರಣ, ಬೆಳಗ್ಗೆ 9ಕ್ಕೆ.

■ **ಮೈಸೂರು ಮಕ್ಕಳ ಕೂಟ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾವಿದ್ಯಾಲಯ :** ಬೆಳಗ್ಗೆ 10ಕ್ಕೆ ಶ್ರೀಮತಿ ಲಕ್ಷ್ಮೀನಾಗರಾಜು ದತ್ತಿ ಸ್ಮಾರಕ ಅಂತರ ಕಾಲೇಜು ಕರ್ನಾಟಕ ಶಾಸ್ತ್ರೀಯ ಸಂಗೀತ ಸ್ಪರ್ಧೆ, ಮುಖ್ಯ ಅತಿಥಿಗಳು : ಖ್ಯಾತ ವಾಗ್ಮಿ ಡಾ. ಜ್ಯೋತಿಶಂಕರ್, ಅಧ್ಯಕ್ಷತೆ : ಪದವಿ ಕಾಲೇಜು ಪ್ರಾಂಶುಪಾಲ ಪ್ರೊ. ಸಾಯಿನಾಥ್ ಮಲ್ಲಿಗೆಮಾಡು, ವಿದುಷಿ ನಾರಾಯಣಿ ಬೊಳ್ಳಾವ ಅವರಿಂದ ಸಂಗೀತ ಕಾರ್ಯಕ್ರಮ, ಸಂಜೆ 4ಕ್ಕೆ ಬಹುಮಾನ ವಿತರಣೆ, ಅತಿಥಿಗಳು : ವಿದುಷಿ ಎನ್. ಭಾರತಿ, ವಿದ್ವಾನ್ ನಿತಿನ್ ರಾಜಾರಾಮ ಶಾಸ್ತ್ರಿ, ವಿದ್ವಾನ್ ಸಿ.ಎ.ಸಚಿನ್, ಅಧ್ಯಕ್ಷತೆ: ಪದವಿ ಕಾಲೇಜು ಪ್ರಾಂಶುಪಾಲ ಪ್ರೊ. ಸಾಯಿನಾಥ್ ಮಲ್ಲಿಗೆಮಾಡು, ಸ್ಥಳ: ಮಹಾವಿದ್ಯಾಲಯ ಆವರಣ, ಕೃಷ್ಣಮೂರ್ತಿಪುರಂ.

■ **ಕೌಶಲ್ಯ ಅಭಿವೃದ್ಧಿ ಸಂಸ್ಥೆ, ಶ್ರೀ ನಟರಾಜ ಮಹಿಳಾ ಪ್ರಥಮ ದರ್ಜೆ ಕಾಲೇಜು :** ಎಂಟರ್‌ಪ್ರೀನರ್‌ಶಿಪ್ ಜಾಗೃತಿ ಕಾರ್ಯಕ್ರಮ, ಉದ್ಘಾಟನೆ : ಎಸ್. ಜಗನ್ನಾಥ್, ಅಧ್ಯಕ್ಷತೆ : ಸಿಇಡಿಓಕೆ ಜಂಟಿ ನಿರ್ದೇಶಕ ಮಂಜುನಾಥಸ್ವಾಮಿ, ಗೌರವ ಅತಿಥಿಗಳು : ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಡಾ. ಎಸ್. ಶಿವರಾಜಪ್ಪ, ಸ್ಥಳ: ಕಾನ್ಫರೆನ್ಸ್ ಹಾಲ್, ಶ್ರೀ ನಟರಾಜ ಪ್ರತಿಷ್ಠಾನ, ಬೆಳಗ್ಗೆ 10.15ಕ್ಕೆ.

■ **ಶ್ರೀಕಾಂತ ವಿದ್ಯಾಸಂಸ್ಥೆಗಳು, ಶ್ರೀ ಕೆ.ಎನ್. ವರದರಾಜ ಅಯ್ಯಂಗಾರ್ ಮೆಮೋರಿಯಲ್ ಟ್ರಸ್ಟ್ :** ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಅಧ್ಯಕ್ಷತೆ : ಟ್ರಸ್ಟ್ ಅಧ್ಯಕ್ಷ ಆರ್.ಜಿ. ನರಸಿಂಹ ಅಯ್ಯಂಗಾರ್, ಉಪಸ್ಥಿತರು : ಟ್ರಸ್ಟ್ ಖಜಾಂಚಿ ಎನ್.ಎಸ್. ರಂಗರಾಜನ್, ಪ್ರಾಂಶುಪಾಲರಾದ ವಿ. ಸುಬ್ಬಲಕ್ಷ್ಮಿ, ಸ್ಥಳ: ವಿದ್ಯಾಸಂಸ್ಥೆ ಸಭಾಭವನ, ಶಂಕರ ಮಠ ಬಡಾವಣೆ, ಬೆಳಗ್ಗೆ 11ಕ್ಕೆ.

■ **ನೆಹರು ಯುವ ಕೇಂದ್ರ, ಮಹಾರಾಣಿ ಮಹಿಳಾ ಕಲಾ ಕಾಲೇಜು :** ಛಾಯಾಚಿತ್ರ ಪತ್ರಿಕೋದ್ಯಮ ಮತ್ತು ಕಿರುಚಿತ್ರಗಳ ನಿರ್ಮಾಣ, ವೃತ್ತಿ ತರಬೇತಿ, ಉದ್ಘಾಟನೆ : ನೆಹರು ಯುವ ಕೇಂದ್ರ ನಿರ್ದೇಶಕ ಎಂ.ಎನ್. ನಟರಾಜ್, ಜಿಲ್ಲಾ ಯುವಜನ ಅಧಿಕಾರಿ ವಿನಯಕುಮಾರ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ. ಶ್ರೀನಿವಾಸ, ಸ್ಥಳ: ಎಂ. ಜಯಲಕ್ಷ್ಮಣ್ಣಿ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.

■ **ಸ್ಪಂದನ ಟ್ರಸ್ಟ್, ಗಂಧದ ಗುಡಿ ಫೌಂಡೇಷನ್, ಮಾ ಫೌಂಡೇಷನ್ :** ಮೈ ಡ್ರೀಮ್ ಬುಕ್–2023, ನೋಟ್ ಬುಕ್ ಡೊನೇಷನ್ ಡ್ರೈವ್ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ, ಚಾಲನೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಉಪಸ್ಥಿತರು : ಸ್ಪಂದನಾ ಟ್ರಸ್ಟ್ ಅಧ್ಯಕ್ಷ ಅಭಿನಂದನ್ ಅರಸ್, ಗಂಧದಗುಡಿ ಫೌಂಡೇಷನ್ ರಾಜ್ಯಾಧ್ಯಕ್ಷ ಆರ್ಯನ್ ಗಂಧದಗುಡಿ, ಮಾ ಫೌಂಡೇಷನ್ ಖಜಾಂಚಿ ಮನು ಹೊಯ್ಸಳ್, ಸ್ಥಳ: ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಮಧ್ಯಾಹ್ನ 12ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ :** ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆ ಮತ್ತು ಬಹುಮಾನ ವಿತರಣಾ ಸಮಾರಂಭ, ಬಹುಮಾನ ವಿತರಣೆ : ಮೈಸೂರು ವಿವಿ ಕುಲಪತಿ ಪ್ರೊ. ಜಿ. ಹೇಮಂತಕುಮಾರ್, ಮುಖ್ಯ ಅತಿಥಿಗಳು : ಕುಲಸಚಿವ ಪ್ರೊ. ಆರ್. ಶಿವಪ್ಪ, ಪ್ರಾಸ್ತಾವಿಕ ನುಡಿ : ಗಾಂಧಿ ಭವನ ನಿರ್ದೇಶಕ ಪ್ರೊ. ಎಂ. ಶಂಕರ, ಸ್ಥಳ: ಗಾಂಧಿ ಭವನ ಆವರಣ, ಮಾನಸಗಂಗೋತ್ರಿ, ಸಂಜೆ 4ಕ್ಕೆ

■ **ಸೌತ್ ಸೆಂಟ್ರಲ್ ಜೋನ್ ಕಲ್ಚರಲ್ ಸೆಂಟರ್, ನಾಗ್ಪುರ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ರಂಗಾಯಣ, ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ :** ಆದಿವಾಸಿ ನೃತ್ಯ ಮಹೋತ್ಸವ, ಬೆಳಗ್ಗೆ 11 ಗಂಟೆಗೆ ವಿಚಾರ ಸಂಕಿರಣ ಹಾಗೂ ಕಾರ್ಯಾಗಾರ, ಉದ್ಘಾಟನೆ : ಸಂಗೀತ ವಿವಿ ಕುಲಪತಿ ಪ್ರೊ. ವಿ. ನಾಗೇಶ್ ಬೆಟ್ಟಕೋಟೆ, ಮುಖ್ಯ ಅತಿಥಿಗಳು : ಕರ್ನಾಟಕ ಜಾನಪದ ವಿವಿ ಕುಲಪತಿ ಪ್ರೊ. ಟಿ.ಎಂ. ಭಾಸ್ಕರ್, ಅಖಿಲ ಭಾರತ ಜಾನಪದ ಹಾಗೂ ಬುಡಕಟ್ಟು ಪರಿಷತ್ ರಾಷ್ಟ್ರೀಯ ಅಧ್ಯಕ್ಷೆ ನಿರ್ಮಲ್ ವೈದ್ಯ, ಕರ್ನಾಟಕ ಬುಡಕಟ್ಟು ಸಂಶೋಧನಾ ಸಂಸ್ಥೆ ನಿರ್ದೇಶಕ ರಾಜೇಶ್ ಜಿ. ಗೌಡ, ಸಂಗೀತ ವಿವಿ ಕುಲಸಚಿವ ಪ್ರೊ. ಟಿ.ಎಸ್. ದೇವರಾಜು, ಸಂಜೆ 5.30ಕ್ಕೆ ಆದಿವಾಸಿ ನೃತ್ಯ ಮಹೋತ್ಸವ, ಉದ್ಘಾಟನೆ : ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ, ಅಧ್ಯಕ್ಷತೆ: ಅಪರ ಜಿಲ್ಲಾಧಿಕಾರಿ ಡಾ. ಮಂಜುನಾಥಸ್ವಾಮಿ, ಅತಿಥಿಗಳು : ಕಾಡಾ ಅಧ್ಯಕ್ಷ ನಿಜಗುಣರಾಜ್, ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ಎಂ. ಶಿವಕುಮಾರ್, ಮೈಸೂರು ವಿವಿ ಕುಲಸಚಿವ ಪ್ರೊ. ಆರ್. ಶಿವಪ್ಪ, ರಂಗಾಯಣ ಉಪನಿರ್ದೇಶಕರಾದ ನಿರ್ಮಲ ಮಠಪತಿ, ಸ್ಥಳ: ಕಾವೇರಿ ಸಭಾಂಗಣ, ಮುಕ್ತ ಗಂಗೋತ್ರಿ.

■ **ಸಂಸ್ಕೃತ ಭಾರತಿ, ವಿದ್ವಾನ್ ಟಿ. ನಾರಾಯಣಶಾಸ್ತ್ರಿ ಪ್ರತಿಷ್ಠಾನಂ :** ಶುಕ್ಲ ಯಜುರ್ವೇದ, ಸಂಸ್ಕೃತ ಸಪ್ತಾಹ–2022, ಶ್ರೀಮತಿ ಸೌದಾಮಿನಿ ಅವರಿಂದ ಬ್ರಹ್ಮವಾದಿನಿಯರು ಕುರಿತು ಪ್ರವಚನ, ಸ್ಥಳ: ವಿಶ್ವಂ ಸಭಾಂಗಣ, 8ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಸಂಜೆ 5.50ಕ್ಕೆ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರವಚನ: ಕರ್ನಾಟಕ ಸಂಸ್ಕೃತಿ ಕುರಿತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ. ಬಿ.ವಿ. ವಸಂತಕುಮಾರ್ ಅವರಿಂದ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6 ಗಂಟೆಯಿಂದ.

ಸುತ್ತೂರಿನಲ್ಲಿಂದು

■ **ಶ್ರೀ ವೀರ ಸಿಂಹಾಸನ ಮಹಾ ಸಂಸ್ಥಾನ ಮಠ :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಜೆಎಸ್‌ಎಸ್ ಕಾಲೇಜು ಪ್ರಾಧ್ಯಾಪಕ ಪ್ರೊ. ಹೆಚ್.ಬಿ. ದೇವಣ್ಣ, ವಾಚನ: ಜೆಎಸ್‌ಎಸ್ ಪ್ರೌಢಶಾಲೆಯ ದೈಹಿಕ ಶಿಕ್ಷಕ ಡಿ.ಎಂ. ಸಿದ್ದಲಿಂಗಸ್ವಾಮಿ ಅವರಿಂದ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಸುತ್ತೂರು ಮಠ, ಸಂಜೆ 6.30ರಿಂದ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 10 ಬುಧವಾರ 2022

ಸಂಪುಟ: 43 | ಸಂಚಿಕೆ: 116 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ
Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಇಂದು ಅರಮನೆ ಆವರಣಕ್ಕೆ ಅಂಬಾರಿ ಆನೆ ಅಭಿಮನ್ಯು ನೇತೃತ್ವದ ಗಜಪಡೆ

ಅರಣ್ಯ ಭವನದ ಆವರಣದಿಂದ ಮೆರವಣಿಗೆಯಲ್ಲಿ ಬರುವ ಆನೆಗಳಿಗೆ ಜಯಮಾರ್ತಾಂಡ ದ್ವಾರದಲ್ಲಿ ವಿಧ್ಯುಕ್ತ ಸ್ವಾಗತ



ಮೈಸೂರು,ಆ.9(ಎಂಟಿವೈ)–ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಮೈಸೂರಿಗೆ ಆಗಮಿಸಿರುವ ಅಂಬಾರಿ ಆನೆ ಅಭಿಮನ್ಯು ನೇತೃತ್ವದ ಮೊದಲ ತಂಡದ 9 ಆನೆಗಳು ಬುಧವಾರ(ಆ.10) ಬೆಳಗ್ಗೆ 9.20ರಿಂದ 10 ಗಂಟೆಯೊಳಗೆ ಸಲ್ಲುವ ಕನ್ಯಾ ಲಗ್ನದಲ್ಲಿ ಜಯ ಮಾರ್ತಾಂಡ ದ್ವಾರದ ಮೂಲಕ ಅರಮನೆ ಆವರಣ ಪ್ರವೇಶಿಸಲಿವೆ.

ಪ್ರಸಕ್ತ ಸಾಲಿನ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು 14 ಆನೆಗಳನ್ನು ಆಯ್ಕೆ ಮಾಡಲಾಗಿದ್ದು, ಅವುಗಳಲ್ಲಿ ಮೊದಲ ತಂಡದಲ್ಲಿ ವಿವಿಧ ಆನೆ ಕ್ಯಾಂಪ್‌ಗಳಿಂದ 9 ಆನೆಗಳನ್ನು ಆ.7ರಂದು ನಾಗರಹೊಳೆ ಅಭಯಾರಣ್ಯದ ಕಾಡಂಚಿನ ಗ್ರಾಮ ವೀರನಹೊಸಳ್ಳಿ ಗೇಟ್‌ನಿಂದ ವಿಧಿ ವಿಧಾನದಂತೆ ಕರೆತರಲಾಗಿದೆ. ಆ.7ರ ಸಂಜೆಯಿಂದ ಮೈಸೂರಿನ ಅಶೋಕಪುರಂನ ಅರಣ್ಯ ಭವನದಲ್ಲಿ ಈ ಆನೆಗಳು ಬೀಡು ಬಿಟ್ಟಿವೆ. ಅರಮನೆ, ಒಂಟಿಕೊಪ್ಪಲ್ ಪಂಚಾಂಗದಂತೆ ದಸರಾ ಗಜಪಡೆಯ ಪ್ರವೇಶಕ್ಕೆ ರಾಜಮನೆತನ ನಿಗದಿಗೊಳಿಸಿದ ಶುಭ ಗಳಿಗೆ ಕನ್ಯಾ ಲಗ್ನದಲ್ಲಿ ಗಜಪಡೆ ಅರಮನೆ ಪ್ರವೇಶಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಅರಣ್ಯ ಇಲಾಖೆಯಿಂದ ಸಾಂಪ್ರದಾಯಿಕ ಪೂಜೆ: ಅರಣ್ಯ ಭವನದಲ್ಲಿ ಗಜಪಡೆಗೆ ಬುಧವಾರ ಬೆಳಗ್ಗೆ 6.30ರಿಂದ 7 ಗಂಟೆಯೊಳಗೆ ಅರಣ್ಯ ಇಲಾಖೆ ವತಿಯಿಂದ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ಅರಮನೆಗೆ ಕರೆತರಲಾಗುತ್ತದೆ.

ಮೆರವಣಿಗೆ: ಕೊರೊನಾ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷದಿಂದ ಸಾರ್ವಜನಿಕರನ್ನು ದೂರವಿಟ್ಟು ದಸರಾ ಗಜಪಡೆಯನ್ನು ಅರಣ್ಯ ಭವನದಿಂದ ಅರಮನೆಗೆ ಕರೆದೊಯ್ಯಲಾಗಿತ್ತು. ಈ ಬಾರಿ ವಿವಿಧ ಮಂಗಳವಾದ್ಯ, ಕಳಸ ಹೊತ್ತ ಮಹಿಳೆಯರು ಸೇರಿದಂತೆ ವಿವಿಧ ಜಾನಪದ ಕಲಾತಂಡಗಳೊಂದಿಗೆ ಆನೆಗಳನ್ನು ಮೆರವಣಿಗೆಯಲ್ಲಿ ಅಶೋಕಪುರಂನಿಂದ ರಾಮಸ್ವಾಮಿ ವೃತ್ತ, ಚಾಮರಾಜ ಜೋಡಿ ರಸ್ತೆ, ಪಾಠಶಾಲೆ ವೃತ್ತ, ಗನ್ ಹೌಸ್ ವೃತ್ತ, ಬಿ.ಎನ್.ರಸ್ತೆ ಮೂಲಕ ಅರಮನೆಯ ಜಯ ಮಾರ್ತಾಂಡ ದ್ವಾರದ ಬಳಿ ಕರೆತರಲಾಗುತ್ತದೆ.

ಅರಮನೆ ದ್ವಾರದಲ್ಲಿ ಪೂಜೆ: ಅರಮನೆಯ ಬಿಡದಿ ಬ್ಲಾಕ್‌ನಲ್ಲಿ 8.30ರಿಂದ 8.40ರೊಳಗೆ ಗಣಪತಿ ಪೂಜೆ ನೆರವೇರಿಸಿ, ಪೂರ್ಣಕುಂಭ ಹಸ್ತಾಂತರ ಮಾಡಲಾಗುತ್ತದೆ. 9.10ರಿಂದ 9.20ರೊಳಗೆ ಅರಮನೆ ಮಂಡಳಿ ಕಚೇರಿಯಿಂದ ಜಯ ಮಾರ್ತಾಂಡ ದ್ವಾರಕ್ಕೆ ಪೂಜಾ ಸಾಮಗ್ರಿಯನ್ನು ತರಲಾಗುತ್ತದೆ. ಬಳಿಕ 9.20ರಿಂದ ಗಜಪಡೆಗೆ ▶ 8ನೇ ಪುಟಕ್ಕೆ

ಬಿಹಾರದಲ್ಲಿ ಇಂದು ನೂತನ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಪ್ರಮಾಣ ವಚನ

ಪಟ್ನಾ: ಬಿಹಾರದಲ್ಲಿ ಹೊಸದಾಗಿ ಅಸ್ತಿತ್ವಕ್ಕೆ ಬರುತ್ತಿರುವ ಮಹಾಮೈತ್ರಿಕೂಟ (ಮಹಾಘಟಬಂಧನ) ಸರ್ಕಾರದ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಗಳು ನಾಳೆ (ಬುಧವಾರ) ಮಧ್ಯಾಹ್ನ 2 ಗಂಟೆಗೆ ರಾಜಭವನದಲ್ಲಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಲಾಲು ಪ್ರಸಾದ್ ನೇತೃತ್ವದ ಆರ್‌ಜೆಡಿಯು ಈ ವಿಷಯವನ್ನು ಸಾಮಾಜಿಕ ಮಾಧ್ಯಮ ಟ್ವೀಟರ್‌ನಲ್ಲಿ ಪ್ರಕಟಿಸಿದೆ. ನಿತೀಶ್‌ಕುಮಾರ್ ಅವರು ಮಂಗಳವಾರ ಬಿಹಾರ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಸರ್ಕಾರ ರಚಿಸಲು ಆರ್‌ಜೆಡಿ, ಕಾಂಗ್ರೆಸ್ ಬೆಂಬಲ ನೀಡಿವೆ.

ನೂತನ ಸರ್ಕಾರದಲ್ಲಿ ನಿತೀಶ್ ಕುಮಾರ್ ಅವರೇ ಮುಖ್ಯಮಂತ್ರಿಯಾಗಲಿದ್ದಾರೆ ಎನ್ನಲಾಗಿದ್ದು, ತೇಜಸ್ವಿ ಯಾದವ್ ಅವರು ಉಪ ಮುಖ್ಯಮಂತ್ರಿಯಾಗಲಿದ್ದಾರೆ ಎಂದು ಗೊತ್ತಾಗಿದೆ.

2014ರ ಲೋಕಸಭೆ ಚುನಾವಣೆಗೆ ನರೇಂದ್ರ ಮೋದಿ ಅವರನ್ನು ಪ್ರಧಾನಿ ಅಭ್ಯರ್ಥಿಯಾಗಿ ಬಿಜೆಪಿ 2013ರಲ್ಲಿ ಘೋಷಿಸಿತ್ತು ಈ ಹಿನ್ನೆಲೆಯಲ್ಲಿ ನಿತೀಶ್ ಎನ್‌ಡಿಎಯಿಂದ ಹೊರಬಂದಿದ್ದರು. ನಂತರ, ಆರ್‌ಜೆಡಿ ಮತ್ತು ಕಾಂಗ್ರೆಸ್‌ನೊಂದಿಗೆ ಮಹಾಮೈತ್ರಿಕೂಟ ರಚಿಸಿದ ನಿತೀಶ್, 2015ರಲ್ಲಿ ಮುಖ್ಯಮಂತ್ರಿಯಾಗಿದ್ದರು. 2017ರಲ್ಲಿ ಆರ್‌ಜೆಡಿ ವಿರುದ್ಧ ಭ್ರಷ್ಟಾಚಾರ ಆರೋಪ ಮಾಡಿ ಮೈತ್ರಿ ಮುರಿದು, ಮತ್ತೆ ಎನ್‌ಡಿಎ ಸೇರಿದ್ದರು.

ಬೆಂಗಳೂರು–ಮೈಸೂರು ದಶಪಥ ಹೆದ್ದಾರಿ ಪೂರ್ಣಗೊಳ್ಳಲು ಇನ್ನೂ 6 ತಿಂಗಳು ಬೇಕು

● ಅಕ್ಟೋಬರ್‌ನಲ್ಲಿ ಬೆಂಗಳೂರು–ನಿಡಘಟ್ಟ 54 ಕಿ.ಮೀ. ಕಾಮಗಾರಿ ಪೂರ್ಣ ● ವ್ಯಾಪಕ ಮಳೆ, ಗುತ್ತಿಗೆದಾರರ ವಿಳಂಬದಿಂದ ನಿಗದಿತ ವೇಳೆಗೆ ಮುಗಿಯದ ಕಾಮಗಾರಿ



ಬೆಂಗಳೂರು, ಆ.9(ಕೆಎಂಶಿ)–ಬೆಂಗಳೂರು–ಮೈಸೂರು ನಡುವಿನ ವಿಶ್ವದರ್ಜೆ ಗುಣಮಟ್ಟದ ರಾಷ್ಟ್ರೀಯ ಹೆದ್ದಾರಿಯ ಕಾಮಗಾರಿ ದಸರಾ ವೇಳೆಗೆ ಪೂರ್ಣಗೊಳ್ಳದು. ಡಿಸೆಂಬರ್ ಇಲ್ಲವೇ ಜನವರಿ 2023ಕ್ಕೆ ಈ ರಸ್ತೆ ಪೂರ್ಣಗೊಂಡು, ರಾಷ್ಟ್ರಕ್ಕೆ ಸಮರ್ಪಣೆಯಾಗಲಿದೆ.

ಮೊದಲು ಬೆಂಗಳೂರು–ಮದ್ದೂರಿನ ನಿಡಘಟ್ಟ 54 ಕಿಲೋ ಮೀಟರ್ ಉದ್ದದ ರಸ್ತೆ ಅಕ್ಟೋಬರ್ ಅಂತ್ಯದ ವೇಳೆಗೆ ಪೂರ್ಣಗೊಳ್ಳಲಿದೆ. ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ, ವಿಶ್ವವಿಖ್ಯಾತ ಮೈಸೂರು ದಸರಾ ವೇಳೆಗೆ ಈ ರಸ್ತೆಯನ್ನು ರಾಷ್ಟ್ರಕ್ಕೆ ಸಮರ್ಪಿಸುವುದಾಗಿ ಹೇಳಿಕೆ ನೀಡಿದ್ದರು. ಆದರೆ ಕಳೆದ ಮೂರು ತಿಂಗಳಿನಿಂದ ಬೀಳುತ್ತಿರುವ ಮಳೆ ಮತ್ತು ಗುತ್ತಿಗೆದಾರರ ವಿಳಂಬದಿಂದ ಈ ರಸ್ತೆ ಕಾಮಗಾರಿ ಕೇಂದ್ರ ಸಚಿವರ ಆಶಯದಂತೆ ಪೂರ್ಣಗೊಳ್ಳುತ್ತಿಲ್ಲ. ಆದರೆ ಆಗಸ್ಟ್ 15ರಂದು ಬೆಂಗಳೂರು ಹೊರ ವಲಯದ ಕ್ರೈಸ್ಟ್ ಕಾಲೇಜ್‌ನಿಂದ ನಿಡಘಟ್ಟದವರೆಗೆ ಒಂದು ಭಾಗದಲ್ಲಿ ಸಂಚಾರ ಆರಂಭಿಸುವ ಕಾಮಗಾರಿ ಪೂರ್ಣಗೊಳ್ಳಲಿದೆ. ಅಂದು ಗುತ್ತಿಗೆದಾರರು ಮತ್ತು ಸಂಸ್ಥೆಗಳು ದೊಡ್ಡ ಪ್ರಮಾಣದಲ್ಲಿ ರಾಷ್ಟ್ರಧ್ವಜ ಹಿಡಿದು, ರಸ್ತೆಯಲ್ಲಿ ಸಂಚರಿಸುವ ಮೂಲಕ ಸಾರ್ವಜನಿಕ ಓಡಾಟಕ್ಕೆ ಅವಕಾಶ ಮಾಡಿಕೊಡಲಿದ್ದಾರೆ.

ಬೆಂಗಳೂರು ನಿಡಘಟ್ಟದ ರಾಷ್ಟ್ರೀಯ ಹೆದ್ದಾರಿಯ ಆಸುಪಾಸಿನಲ್ಲಿ ನಿರ್ಮಾಣಗೊಳ್ಳುತ್ತಿರುವ ಸರ್ವೀಸ್ ರಸ್ತೆಗಳು ಇನ್ನೆರಡು ತಿಂಗಳಲ್ಲಿ ಪೂರ್ಣಗೊಳ್ಳಲಿವೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಶ್ರೀಧರ್, ರಸ್ತೆ ಕಾಮಗಾರಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ವರದಿ ನೀಡಿದ್ದಾರೆ. ದಸರಾ ವೇಳೆಗೆ ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗದು. ಇನ್ನು ನಾಲ್ಕು ಐದು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸಿ, ಸಂಚಾರಕ್ಕೆ ಮುಕ್ತ ಮಾಡಿಕೊಡಲಾಗುವುದು. ಗುತ್ತಿಗೆ ಪಡೆದಿರುವ ಸಂಸ್ಥೆಗಳಿಗೆ ರಸ್ತೆಯ ಕಾಮಗಾರಿ ತ್ವರಿತವಾಗಿ ▶ 8ನೇ ಪುಟಕ್ಕೆ

ಅಮಿತ್ ಶಾ ಬಂದು ಹೋದ ನಂತರ ಬಿಜೆಪಿಯಲ್ಲಿ ಮೋಡ ಕವಿದ ವಾತಾವರಣ; '3ನೇ ಸಿಎಂ' ಸೀಟು ಹತ್ತುವ ಕಾಲ ಸನ್ನಿಹಿತ!



ಬೆಂಗಳೂರು: ರಾಜ್ಯದ ಬಿಜೆಪಿ ನಾಯಕರು ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆಯಾಗಲಿದೆ ಎನ್ನುವ ಮಾತು ಗಣ್ನಾಡುತ್ತಿದ್ದು, ವಿಧಾನಸಭೆ ಚುನಾವಣೆಗೆ 8 ತಿಂಗಳಷ್ಟೇ ಬಾಕಿ ಇರುವಾಗ ಈ ಗುಸುಗುಸು ಪ್ರಾಮುಖ್ಯತೆ ಪಡೆದುಕೊಂಡಿದೆ. ಈ ಸಂಬಂಧ ರಾಜ್ಯ ಕಾಂಗ್ರೆಸ್ ಕೂಡ ಮುಖ್ಯಮಂತ್ರಿ ಬದಲಾವಣೆ ಕುರಿತು ವ್ಯಂಗ್ಯವಾಡಿದೆ.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ಕಾಂಗ್ರೆಸ್, ಅಮಿತ್ ಶಾ ಬಂದು ಹೋದ ನಂತರ ಬಿಜೆಪಿಯಲ್ಲಿ ಮೋಡ ಕವಿದ ವಾತಾವರಣವಿದೆ! 40% ಸರ್ಕಾರದಲ್ಲಿ '3ನೇ ಸಿಎಂ' ಸೀಟು ಹತ್ತುವ ಕಾಲ ಸನ್ನಿಹಿತವಾಗಿದೆ! ಬೊಮ್ಮಾಯಿ ಅವರ ಗೊಂಬೆಯಾಟ ಮುಗಿಯುವ ಹಂತಕ್ಕೆ ಬಂದಿದೆ. ಅಮಿತ್ ಶಾ ಅವರ ಭೇಟಿಯ ಬಗ್ಗೆ ಸರ್ಕಾರದ ಯಾವೊಬ್ಬ ಸಚಿವರು ಮಾತಾಡದಿರುವುದು, ಸಂಭ್ರಮವಿಲ್ಲದಿರುವುದೇ ಇದಕ್ಕೆ ನಿದರ್ಶನ ಎಂದು ಟೀಕಿಸಿದೆ. ಮುಂದುವರಿದು, ಎಷ್ಟು ಪ್ರಯತ್ನಿಸಿದರೂ ಜನತಾ ಪರಿವಾರಿಯಾಗಿದ್ದ ಬೊಮ್ಮಾಯಿ ಅವರನ್ನು ಕೇಶವ ಕೃಪಾದವರು 'ಸಂಘಪರಿವಾರಿ'ಯಾಗಿ ಸ್ವೀಕರಿಸಲು ಒಪ್ಪಲೇ ಇಲ್ಲ! ಆಡಿಸಿ ನೋಡು ಎಂದು ಗೊಂಬೆಯಂತಿದ್ದ #PuppetCM ಬೊಮ್ಮಾಯಿಯವರನ್ನು ಬೀಳಿಸಿ ನೋಡಲು ಹೊರಟಿದೆ ಹೈಕಮಾಂಡ್! ಈ ಬದಲಾವಣೆ ಯತ್ನ ಸರ್ಕಾರದ ವೈಫಲ್ಯಕ್ಕೋ, 3 ಸಿಎಂ ಎಂಬ ನಿಮ್ಮ ಸಂಪ್ರದಾಯಕ್ಕೋ ಎಂದು ಬಿಜೆಪಿ ಉತ್ತರಿಸಲಿ ಎಂದು ಕಾಂಗ್ರೆಸ್ ಕೇಳಿದೆ. ನಾನೂ ಕೂಡ ಸಿಎಂ ಆಕಾಂಕ್ಷಿ ಎಂದಿರುವ ಉಮೇಶ್ ಕತ್ತಿ ಅವರ ಹೇಳಿಕೆಯನ್ನು ಉಲ್ಲೇಖಿಸಿ ಟ್ವೀಟ್ ಮಾಡಿರುವ ಕಾಂಗ್ರೆಸ್, ಬೊಮ್ಮಾಯಿಯವರೇ, ಸಿಎಂ ಹುದ್ದೆಗೆ 'ಕತ್ತಿ ವರಸೆ' ▶ 7ನೇ ಪುಟಕ್ಕೆ

ಹುಟ್ಟುಹಬ್ಬದಂದೇ ಉಪನ್ಯಾಸಕಿ ನೇಣಿಗೆ ಶರಣು



ಚಂದನಾ

ಚಾಮರಾಜನಗರ, ಆ.9– ತನ್ನ ಹುಟ್ಟುಹಬ್ಬದಂದೇ ಕಾಲೇಜು ಉಪನ್ಯಾಸಕಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ದುರಂತ ನಗರದಲ್ಲಿ ನಡೆದಿದೆ. ಯಳಂದೂರು ತಾಲೂಕಿನ ಅಂಬಳೆಯ ನಿವಾಸಿ ಮಹದೇವಸ್ವಾಮಿ ಪುತ್ರಿ ಚಂದನಾ(26) ಆತ್ಮಹತ್ಯೆ ಮಾಡಿಕೊಂಡವರು. ಇವರು ನಗರದ ಖಾಸಗಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕಿಯಾಗಿದ್ದು, ಸಂಸ್ಥೆಯ ಹಾಸ್ಟೆಲ್‌ನಲ್ಲೇ ವಾಸ್ತವ್ಯ ಹೂಡಿದ್ದರು. ಮಂಗಳವಾರ ಚಂದನಾ ಹುಟ್ಟುಹಬ್ಬ. ಸ್ನೇಹಿತರು, ವಿದ್ಯಾರ್ಥಿಗಳು ಬೆಳಗ್ಗೆಯೇ ಶುಭಾಶಯ ಕೋರಿದ್ದಾರೆ. ತನ್ನ ರೂಂನ ಗೆಳತಿಯರು ಹೊರಹೋದ ನಂತರ ಬೆಳಗ್ಗೆ 10.30ರಲ್ಲಿ ಚಂದನಾ ಕೊಠಡಿಯ ಫ್ಯಾನ್‌ಗೆ ನೇಣು ಬಿಗಿದುಕೊಂಡಿದ್ದಾರೆ ಎನ್ನಲಾಗಿದೆ.

ಈಕೆಯ ತಂದೆ ಕೇಕ್ ಕಟ್ ಮಾಡಿಸಿ ಹುಟ್ಟುಹಬ್ಬ ಆಚರಿಸಲು ಸಿದ್ಧತೆ ಮಾಡಿಕೊಂಡಿದ್ದರು. ಸೋಮವಾರ ಸಂಜೆಯಷ್ಟೇ ಮಗಳೊಟ್ಟಿಗೆ ಪಾನಿಪೂರಿ ಸೇವಿಸಿ ಊರಿಗೆ ಬರುವಂತೆ ಹೇಳಿ ಹೋಗಿದ್ದರಂತೆ. ಮಂಗಳವಾರ ಬೆಳಗ್ಗೆ ಕರೆ ಮಾಡಿದಾಗ ಫೋನ್ ಸ್ವಿಚ್‌ಆಫ್ ಆಗಿದೆ. ಕೂಡಲೇ ಹಾಸ್ಟೆಲ್‌ನ ಸೆಕ್ಯೂರಿಟಿಗೆ ಕರೆ ಮಾಡಿ ಚಂದನಾ ಫೋನ್ ಎತ್ತದೆ ಇರುವುದನ್ನು ತಿಳಿಸಿದ್ದಾರೆ. ಈ ವೇಳೆ ಚಂದನಾ ಕೊಠಡಿ ಬಳಿ ಹೋದ ಸೆಕ್ಯೂರಿಟಿಗೆ ಚಂದನಾ ನೇಣು ಬಿಗಿದುಕೊಂಡಿರುವುದು ಕಂಡು ಬಂದಿದೆ. ಕೂಡಲೇ ಆತ ಹಾಸ್ಟೆಲ್‌ನ ಅಧಿಕಾರಿಗಳಿಗೆ ವಿಷಯ ಮುಟ್ಟಿಸಿದ್ದಾರೆ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲನೆ ನಡೆಸಿದರು. ▶ 7ನೇ ಪುಟಕ್ಕೆ

ರಿಯಲ್ ಎಸ್ಟೇಟ್ ಏಜೆಂಟ್ ಹತ್ಯೆ ಪ್ರಕರಣ

ಅಪ್ರಾಪ್ತ ಮಗನಿಂದಲೇ ತಂದೆಯ ಬರ್ಬರ ಹತ್ಯೆ

● ತಾಯಿಗೆ ಕಿರುಕುಳ ನೀಡಿ, ಕುಟುಂಬದ ನೆಮ್ಮದಿ ಹಾಳು ಮಾಡಿದ್ದಕ್ಕೆ ರಿವೇಂಜ್
● ಮೊದಲೇ ಸಿದ್ಧವಾಗಿಟ್ಟುಕೊಂಡಿದ್ದ ಕಬ್ಬಿಣದ ರಾಡಿನಿಂದ ಹೊಡೆದು ಕೊಲೆ





ಸಂಪತ್ ಕುಮಾರ್

ಮೈಸೂರು, ಆ. 9(ಆರ್‌ಕೆ)– ಅಪ್ರಾಪ್ತ ಮಗನೇ ಕಬ್ಬಿಣದ ರಾಡಿನಿಂದ ತಲೆಗೆ ಹೊಡೆದು ತಂದೆಯನ್ನು ಬರ್ಬರವಾಗಿ ಹತ್ಯೆಗೈದಿದ್ದಾನೆ. ಮೈಸೂರಿನ ಬೃಂದಾವನ ಬಡಾವಣೆ 1ನೇ ಹಂತ, 7ನೇ ಕ್ರಾಸ್ ನಿವಾಸಿಯಾದ ರಿಯಲ್ ಎಸ್ಟೇಟ್ ಏಜೆಂಟ್ ಸಂಪತ್‌ಕುಮಾರ್‌ನನ್ನು ಆತನ 16 ವರ್ಷದ ಪುತ್ರ, ಡಿಪ್ಲೊಮಾ ವಿದ್ಯಾರ್ಥಿ ಸೋಮವಾರ ಮಧ್ಯಾಹ್ನ 2.50ರ ವೇಳೆಗೆ ಕಬ್ಬಿಣದ ರಾಡಿನಿಂದ ತಲೆಗೆ ಹೊಡೆದು ಅಮಾನುಷವಾಗಿ ಕೊಲೆ ಮಾಡಿರುವುದು ವಿಚಾರಣೆಯಿಂದ ತಿಳಿದು ಬಂದಿದೆ ಎಂದು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು. ▶ 8ನೇ ಪುಟಕ್ಕೆ

ದೆವ್ವ ಬರುತ್ತವೆಂದು ಪಕ್ಕದಲ್ಲೇ ದೊಣ್ಣೆ ಇಟ್ಟುಕೊಂಡು ಮಲಗುತ್ತಿದ್ದ ಸಂಪತ್‌ಕುಮಾರ್

ಕಳೆದ 15 ವರ್ಷಗಳಿಂದ ಮನೆ ಕಸ ಗುಡಿಸಲೂ ಬಿಟ್ಟಿರಲಿಲ್ಲ

ಮೈಸೂರು, ಆ.9 (ಆರ್‌ಕೆ) –ಅಪ್ರಾಪ್ತ ಮಗನಿಂದಲೇ ಹತ್ಯೆಗೀಡಾದ ಸಂಪತ್ ಕುಮಾರ್, ಅಸಹಜ ಮನಸ್ಥಿತಿಯ ನಡವಳಿಕೆಯುವನಾಗಿದ್ದ ಎಂದು ತಿಳಿದು ಬಂದಿದೆ. ಖಾಸಗಿ ಶಾಲೆಯಲ್ಲಿ ಶಿಕ್ಷಕಿಯಾಗಿರುವ ಪತ್ನಿ, ಗಾಯತ್ರಿ ಅವರಿಗೆ ಬರುತ್ತಿದ್ದ ಕಡಿಮೆ ಸಂಬಳದ ಹಣವನ್ನೇ ಪೀಡಿಸಿ ಕಿತ್ತು ತಿನ್ನುತ್ತಿದ್ದ ಸಂಪತ್, ಆಳೆತ್ತರಕ್ಕೆ ಬೆಳೆದ ತನ್ನ ಮಗನ ಭವಿಷ್ಯದ ಬಗ್ಗೆ ಯೋಚನೆ ಮಾಡುವುದಿರಲಿ, ಆತ ನೆಮ್ಮದಿಯಿಂದಿರಲೂ ಬಿಡುತ್ತಿರಲಿಲ್ಲ ಎಂದು ತಂದೆಯನ್ನು ಹತ್ಯೆಗೈದ ಅಪ್ರಾಪ್ತ ಮಗ ಪೊಲೀಸರಿಗೆ ನೀಡಿರುವ ಹೇಳಿಕೆಯಲ್ಲಿ ತಿಳಿಸಿದ್ದಾನೆ. ನಿತ್ಯ ಏನಾದರೊಂದು ವಿಷಯಕ್ಕೆ ಜಗಳ ತೆಗೆಯುವುದು, ಹಣ ಕೊಡದಿದ್ದರೆ ಅಮ್ಮನಿಗೆ ಹೊಡೆಯುತ್ತಿದ್ದನಂತೆ. ಅನುಚಿತವಾಗಿ ವರ್ತಿಸುತ್ತಿದ್ದ ಅಪ್ಪನ ನಡವಳಿಕೆಯಿಂದಾಗಿ ನಮಗೆ ▶ 8ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹೆಂಡತಿ : "ಎಲ್ಲಾ ಮದುವೆಗಳಲ್ಲಿ ವಧು ಎಡಗಡೆಗೆ ಮತ್ತು ವರ ಬಲಗಡೆಗೆ ಯಾಕೆ ಕೂತಿರುತ್ತಾರೆ?"

ಗಂಡ : "ಲಾಭ ಮತ್ತು ನಷ್ಟದ ಸ್ಟೇಟ್‌ಮೆಂಟ್ ಅಕೌಂಟ್‌ನ ಪ್ರಕಾರ ಎಲ್ಲಾ ಆದಾಯ ಬಲ ಬದಿಗೆ ಇರುತ್ತದೆ ಮತ್ತು ಖರ್ಚುಗಳು ಎಡ ಬದಿಗೆ ಇರುತ್ತದೆ ಅದಕ್ಕೆ!"

ಮೈಸೂರು ಮಿತ್ರ

ಬುಧವಾರ, 10 ಆಗಸ್ಟ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಎಲ್ಲಾ ಮಹಾನ್ ಸಾಧನೆಗಳು ದಿಢೀರ್ ಎಂದು ಆಗುವುದಿಲ್ಲ. ಸಾಕಷ್ಟು ಸಮಯ ಬೇಕಾಗುತ್ತದೆ. ತಾಳ್ಮೆ ಮುಖ್ಯ. – ಮಾಯಾ ಏಂಜೆಲೊ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಮಗ ಸಣ್ಣವನಾದರೂ, ಮಾತು ಸಣ್ಣದಲ್ಲ

ನಿಮ್ಮ ಪತ್ರಗಳು

ಸಿಇಟಿಯ ಶ್ರೇಣಿ ಪ್ರಕಟಣೆ ದೋಷರಹಿತವಾಗಿರಲಿ

ಮಾನ್ಯರೆ,

ಶಿಕ್ಷಣ ಇಲಾಖೆ ಪಿಯು ವಿಜ್ಞಾನ ವಿಷಯಕ್ಕೆ ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆಯ(ಸಿಇಟಿ) ಶ್ರೇಣಿ (ರ್‍ಯಾಂಕಿಂಗ್) ಒಂದು ವಾರದ ಹಿಂದೆಯೇ ಪ್ರಕಟ ಮಾಡಿದ್ದರು. ಆದರೆ ಬಹುತೇಕ ಸಮಯ ತಾಂತ್ರಿಕ ದೋಷ ಎಂದು ಹೇಳಿ ಸುಮಾರು ಹತ್ತು ಸಾವಿರ ವಿದ್ಯಾರ್ಥಿಗಳ ಸಿಇಟಿ ಶ್ರೇಣಿ (ರ್‍ಯಾಂಕಿಂಗ್) ಸುಮಾರು ದಿನಗಳ ಕಾಲ ಪ್ರಕಟಿಸಿರಲಿಲ್ಲ (ತಡೆಹಿಡಿದಿದ್ದರು). ಇಂತಹ ವಿದ್ಯಾರ್ಥಿಗಳು ಮತ್ತವರ ಪಾಲಕರು ಸಂಬಂಧಿಸಿದ ಕಚೇರಿಗೆ ಮೂರು ನಾಲ್ಕು ದಿನ ತಿರುಗಿ ಕಂಗಾಲಾಗಿ ಬಸವಳಿದ ನಂತರ ಇತ್ತೀಚೆಗೆ ತಡೆಹಿಡಿದಿದ್ದ ಸಿಇಟಿ ಶ್ರೇಣಿ ಕೊನೆ ಘಳಿಗೆಯಲ್ಲಿ ಮಕ್ಕಳ ಕೈಸೇರಿದೆ. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಉತ್ತಮ ಶ್ರೇಣಿಯ ಅಂಕಗಳು ಬಂದರೂ ಸಿಇಟಿಯಲ್ಲಿ ಪ್ರತಿ ವಿಷಯದ ಅಂಕಗಳ ಪಟ್ಟಿ ಕೈಯ್ಯಲ್ಲಿದ್ದರೂ ಸಹ ಸಿಇಟಿಯ ಶ್ರೇಣಿ ಇಲ್ಲವಾದರೆ ಯಾವ ವಿದ್ಯಾರ್ಥಿಯಾದರೂ ವಿಚಲಿತಗೊಳ್ಳುತ್ತಾನೆ. ರಾಜ್ಯಾದ್ಯಂತ ಇಂತಹ ಸಮಸ್ಯೆಗಳಿಗೆ ಸಿಲುಕಿದರೆ ವಿದ್ಯಾರ್ಥಿಗಳ ಪಾಲಕರು ಸಹ ಚಿಂತಾಕ್ರಾಂತರಾಗುವುದು ಸಹಜ.

ಇನ್ನು ಕೆಲವೇ ಕೆಲವು ದಿನಗಳಲ್ಲಿ ಸಮಾಲೋಚನೆ (ಕೌನ್ಸೆಲಿಂಗ್) ಆರಂಭವಾಗುತ್ತದೆ ಎನ್ನುವ ಸಮಯದಲ್ಲಿ ತಾಂತ್ರಿಕ ದೋಷ ಸರಿಪಡಿಸಿ ತಡೆಹಿಡಿದ ಶ್ರೇಣಿ ಹಾಗೋ ಹೀಗೋ ಪ್ರಕಟ ಮಾಡಿದ್ದಾರೆ. ಇದು ಶಿಕ್ಷಣ ಇಲಾಖೆ ವ್ಯವಸ್ಥೆಯ ಲೋಪ ಎಂದರೆ ತಪ್ಪಾಗಲಾರದು. ಏಕೆಂದರೆ ಸುಮಾರು ಎರಡು ದಶಕದಿಂದ ಇಂತಹ ಸಮಸ್ಯೆ ಕಂಡುಬಂದಿರಲಿಲ್ಲ. ಇಂತಹ ಗಂಭೀರ ಸಮಸ್ಯೆ ಎದುರಾದರೂ ತಲೆ ಕೆಡಿಸಿಕೊಳ್ಳದ ಸಂಬಂಧಪಟ್ಟ ಅಧಿಕಾರಿ ವರ್ಗದವರು ಬೇಜವಾಬ್ದಾರಿ ಹೇಳಿಕೆಗಳ ನಾಲ್ಕೈದು ದಿನಗಳ ಕಾಲ ಕೊಡುತ್ತಾ ಬಂದಿದ್ದು ತರವಲ್ಲ. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಎಲ್ಲಾ ಸಿಇಟಿ ವಿದ್ಯಾರ್ಥಿಗಳು ತಮ್ಮ ತಮ್ಮ ಶ್ರೇಣಿ (ರ್‍ಯಾಂಕಿಂಗ್) ಅನುಸಾರ ಯಾವ ಕಾಲೇಜು ಮತ್ತು ಯಾವ ವಿಷಯ ಆಯ್ಕೆ ಮಾಡಬೇಕೆಂದು ಮೊದಲೇ ನಿರ್ಧಾರ ಮಾಡುತ್ತಾರೆ ಆದರೆ ಅವರಿಗೆ ಶ್ರೇಣಿಯ ಮಾಹಿತಿ ಇಲ್ಲವೆಂದರೆ ವಿದ್ಯಾರ್ಥಿಗಳು ಮುಂಚಿತವಾಗಿ ಯೋಜನೆ ಹೇಗೆ ಹಾಕಿಕೊಳ್ಳಬೇಕು? ರಾಜ್ಯದ ಪರೀಕ್ಷಾ ಮಂಡಳಿಯು ಹಳಿ ತಪ್ಪಿದ ರೈಲಿನಂತೆ ವರ್ತಿಸುತ್ತಿದೆ ಹಾಗೂ ಇದಕ್ಕೆ ಲಂಗು ಲಗಾಮು ಇಲ್ಲವೆಂದೇ ಅರ್ಥೈಸಬೇಕಾಗುತ್ತದೆ.

ಸಿಇಟಿ ಶ್ರೇಣಿ ಪ್ರಕಟಣೆ ವಿಳಂಬಗೊಂಡರೆ ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಚೆಲ್ಲಾಟವಾಡಿದಂತಾಗುತ್ತದೆ. ಆದುದರಿಂದ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಇಲಾಖೆ ತಕ್ಷಣ ಕಾರ್ಯಪ್ರವೃತ್ತರಾಗಿ ಇನ್ನು ಮುಂದೆ ಅರ್ಥಾತ್ ಬರುವ ವರುಷದಿಂದ ಈ ತರಹದ ಸಮಸ್ಯೆ ಬಾರದಂತೆ ಎಚ್ಚರವಹಿಸಬೇಕು.

–ಎಚ್.ಕೆ. ವಿಜಯಕುಮಾರ್, ರಾಯಚೂರು

ಬೀದಿ ನಾಯಿ ಕಾಟ ತಪ್ಪಿಸಿ

ಮಾನ್ಯರೆ,

ಕುವೆಂಪುನಗರದ ಲಲಿತಾದ್ರಿ ರಸ್ತೆಯಲ್ಲಿ ಬೀದಿನಾಯಿಗಳು ಹಗಲು ರಾತ್ರಿಯೆನ್ನದೇ ಬೊಗಳಿ ತೊಂದರೆ ಕೊಡುತ್ತಿವೆ. ರಸ್ತೆಯಲ್ಲಿ ಓಡಾಡುವ ಅದರಲ್ಲೂ ದ್ವಿಚಕ್ರ ವಾಹನ ಚಾಲಕರನ್ನು ಬೊಗಳುತ್ತಾ ಅಟ್ಟಿಸಿಕೊಂಡು ಬರುತ್ತವೆ. ಎಲ್ಲಿ ಕಚ್ಚುತ್ತವೋ ಎಂಬ ಭಯದಿಂದ ಚಾಲಕರು ಬಿದ್ದಿದ್ದೂ ಇದೆ. ಇದೇ ಬೀದಿಯಲ್ಲೇ ಮರಿಗಳನ್ನು ಹಾಕುತ್ತಾ ಅವುಗಳ ಸಂಖ್ಯೆ ಹೆಚ್ಚಾಗಿವೆ. ಸಂಬಂಧಪಟ್ಟವರು ನಾಯಿಗಳ ಕಾಟದಿಂದ ಮುಕ್ತಗೊಳಿಸಬೇಕೆಂದು ಮನವಿ.

–ಅಕ್ಕಿಹೆಬ್ಬಾಳು ವೆಂಕಟೇಶ್, ಕುವೆಂಪುನಗರ

ತೆರೆದಿರುವ ಮ್ಯಾನ್‌ಹೋಲ್ ಸರಿಪಡಿಸಿ



ಮಾನ್ಯರೆ,

ಮೈಸೂರಿನ ಬಿಇಎಂಎಲ್ 2ನೇ ಹಂತದಲ್ಲಿ ಕಳೆದ ಒಂದು ವಾರದಿಂದ ಮ್ಯಾನ್‌ಹೋಲ್ ತುಂಬಿಕೊಂಡು ಕಲುಷಿತ ನೀರು ರಸ್ತೆಯಲ್ಲೆಲ್ಲಾ ಹರಿಯುತ್ತಿದೆ. ಇದರಿಂದ ಇಲ್ಲಿನ ನಿವಾಸಿಗಳಿಗೆ ತುಂಬಾ ತೊಂದರೆಯಾಗಿರುವುದಲ್ಲದೆ, ದುರ್ನಾತದಿಂದ ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲದೆ ಮ್ಯಾನ್‌ಹೋಲ್ ತೆರೆದಿರುವುದರಿಂದ ಹಾಗೂ ಮಳೆ ನಿರಂತರವಾಗಿ ಸುರಿಯುತ್ತಿರುವುದರಿಂದ ಅನಾಹುತಕ್ಕೆ ಆಹ್ವಾನ ನೀಡಿದಂತಿದೆ. ಈ ಬಡಾವಣೆ ಪಾಲಿಕೆಗೆ ಹಸ್ತಾಂತರವಾಗದೇ ಇರುವುದರಿಂದ ಯಾವ ಅಧಿಕಾರಿಗಳೂ ಇದರ ಬಗ್ಗೆ ತಲೆಕೆಡಿಸಿ ಕೊಳ್ಳುತ್ತಿಲ್ಲ. ಹಾಗೂ ಸೊಸೈಟಿ ಅಧ್ಯಕ್ಷರು ಮತ್ತು ನಿರ್ದೇಶಕರ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ ಕೂಡಲೇ ಸಂಬಂಧಪಟ್ಟವರು ಮ್ಯಾನ್‌ಹೋಲ್ ಸರಿಪಡಿಸಿ, ಬಡಾವಣೆಯ ನಿವಾಸಿಗಳ ನೆಮ್ಮದಿ ಜೀವನಕ್ಕೆ ಅನುವು ಮಾಡಿಕೊಡಬೇಕಾಗಿ ಮನವಿ.

– ವಾಣಿ, ರಾಜರಾಜೇಶ್ವರಿನಗರ, ಬಿಇಎಂಎಲ್ 2ನೇ ಹಂತ, ಮೈಸೂರು.

ಮುರುಘಾ ಶರಣರ ಲಿಂಗಧಾರಣೆ ಕ್ರಮ ಸಮಂಜಸವಲ್ಲ

ಮಾನ್ಯರೆ,

ಮುರುಘಾ ಶರಣರು ಪ್ರಗತಿಪರ ಚಿಂತಕರು, ಅಂತಹವರು ವೀರಶೈವ ಲಿಂಗಾಯಿತರ ಓಟಿಗೋಸ್ಕರ ಬಂದಿರುವ ರಾಹುಲ್ ಗಾಂಧಿಗೆ ಲಿಂಗಧಾರಣೆಯನ್ನು ಕೂತ ಜಾಗದಲ್ಲೇ ಯಾವುದೇ ಕ್ರಮವಿಲ್ಲದೆ, ಕೊರಳಿಗೆ ಲಿಂಗಧಾರಣೆ ಮಾಡಿದ್ದು ಅಕ್ಷಮ್ಯ, ವೀರಶೈವರ ಲಿಂಗಧಾರಣೆಗೆ ಅಪಚಾರವೆಸಗಿದ್ದಾರೆ. ಇನ್ನು ವೀರಶೈವರು ಮತ್ತು ಇತರರು ಯಾವ ಕಾವಿಗೆ ಕಾಲಿಗೆರಗಿ ನಮಿಸುತ್ತಿದ್ದರೋ ಅಂತಹ ಸ್ವಾಮೀಜಿಗಳು ರಾಜಕೀಯ ನಾಯಕರ ಕಾಲ ಬುಡದಲ್ಲಿ ಕುಳಿತು ವೀರಶೈವ ಲಿಂಗಾಯಿತರಿಗೆ ಅಪಚಾರವೆಸಗಿದ್ದಾರೆ. ಇಂತಹ ಸಂದರ್ಭ ಸೃಷ್ಟಿ ಮಾಡಿದ ಮುರುಘಾಶರಣರು ಕ್ಷಮೆ ಕೇಳಬೇಕು. ಬಸವಣ್ಣನವರು ಲಾಂಛನಕ್ಕೆ ಶರಣೆಂಬೆ ಎಂದರು. ಆದರೆ ಆ ಲಾಂಛನ ಧರಿಸಿದವರು ಆ ಲಾಂಛನಕ್ಕೆ ಅಪಮಾನ ಮಾಡಿದರು. ವೀರಶೈವ ಲಿಂಗಾಯತ ಸಮುದಾಯ ಇದನ್ನು ಬಲವಾಗಿ ಖಂಡಿಸಬೇಕು.

–ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಪದಗತಿ–ಪದ ಸಂಸ್ಕೃತಿ

ಮೈಸೂರು ಆಕಾಶವಾಣಿಯಿಂದ ಪದಸಂಸ್ಕೃತಿ ಎಂಬ ಹತ್ತು ನಿಮಿಷಗಳ ಕಾರ್ಯಕ್ರಮ ಪ್ರಸಾರಗೊಳ್ಳುತ್ತಿತ್ತು. ಅದರಲ್ಲಿ ಹಲವು ವಿದ್ವಾಂಸರೂ ವಿದುಷಿಯರೂ ಕನ್ನಡದ ಪದಗಳ ವ್ಯುತ್ಪತ್ತಿ, ಅರ್ಥವ್ಯಾಪ್ತಿ, ಇತಿಹಾಸ ಮತ್ತು ಅವುಗಳ ಪ್ರಯೋಗದ ವೈಶಿಷ್ಟ್ಯವನ್ನು ನಿರೂಪಿಸುತ್ತಿದ್ದರು. ಕನ್ನಡವನ್ನು ಪ್ರೀತಿಸುತ್ತಿದ್ದ ಕೇಳುಗರಿಗೆ ಇದು ಪ್ರೀತಿಯ ಕಾರ್ಯಕ್ರಮವಾಗಿತ್ತು. ಇದರಲ್ಲಿ ಪ್ರೊ.ಕೆ.ಎಲ್. ಪದ್ಮಿನಿ ಹೆಗಡೆಯವರೂ ಭಾಗವಹಿಸಿ ತಮ್ಮ ಅರ್ಥವತ್ತಾದ ಮತ್ತು ಆಕರ್ಷಕ ನಿರೂಪಣೆಗಳಿಂದ ಕೇಳುಗರ ಮೆಚ್ಚುಗೆಗೆ ಪಾತ್ರರಾಗಿದ್ದರು. ಆ ಸಂದರ್ಭದಲ್ಲಿ ಅವರು ಬಳಸಿದ್ದ ಪದ್ಯಗಳ ಮತ್ತು ಹಾಡುಗಳ ವಿವರಣೆಗಳನ್ನು ಒಳಗೊಂಡಿರುವ ಪುಸ್ತಕ **ಪದಗತಿ–ಪದಸಂಸ್ಕೃತಿ**. 192 ಪುಟಗಳ ವಿಸ್ತಾರದ ಈ ಪುಸ್ತಕದಲ್ಲಿ 65 ಹಾಡುಗಳ ಆಧಾರದ ಪ್ರತಿಪಾದನೆ ಇದೆ. ಅವುಗಳನ್ನು ಮನುಷ್ಯತ್ವದ ಘನತೆ, ಭಗವಂತ, ಜೀವನ ರೀತಿ, ಭಾವಯಾನ ಎಂಬ ನಾಲ್ಕು ಶಿರೋನಾಮೆಗಳ ಅಡಿಯಲ್ಲಿ ಸಂಕಲಿಸಿದ್ದಾರೆ. ವಿಜ್ಞಾನದ ಮತ್ತು ತತ್ತ್ವಶಾಸ್ತ್ರದ ವಿದ್ಯಾರ್ಥಿನಿಯಾಗಿದ್ದು, ತತ್ತ್ವಶಾಸ್ತ್ರದ ಪ್ರಾಧ್ಯಾಪಕರಾಗಿ ದೀರ್ಘ ಪ್ರವಚನದಲ್ಲಿ ತೊಡಗಿಕೊಂಡಿದ್ದ ಶ್ರೀಮತಿ ಪದ್ಮಿನಿ ಹೆಗಡೆ ಅವರ ಪ್ರತಿಪಾದನೆಯಲ್ಲಿ ಅಚ್ಚುಕಟ್ಟುತನವಿದೆ. ವಿಚಾರ ಮಂಥನದಲ್ಲಿ ಖಚಿತತೆ ಇದೆ. ಜೀವನಾನುಭವದಲ್ಲಿ ಪಕ್ವತೆಯನ್ನು ಹೊಂದಿ ವಿಷಯಗಳನ್ನು ಅರ್ಥೈಸುವ ಮತ್ತು ಸಹೃದಯ ಮನಸ್ಸುಗಳಿಗೆ ಸಂವಹನ ಮಾಡಿಸುವ ಕಲೆ ಅವರಿಗೆ ಕರಗತವಾಗಿದೆ ಎಂಬುದು ಈ ಪುಸ್ತಕವನ್ನು ಓದಿದವರಿಗೆ ಸ್ಪಷ್ಟವಾಗುತ್ತದೆ. ವಿಶ್ಲೇಷಣೆಗೆ ಸ್ವೀಕರಿಸಿದ ಪದ್ಯ ಅಥವಾ ಹಾಡು ಇಂದಿನ ತಲೆಮಾರಿನ ಕವಿಗಳದ್ದಾಗಿರಬಹುದು. ಅಥವಾ ಕೆಲವು ಶತಮಾನಗಳ ಹಿಂದಿನ ಹರಿದಾಸರದ್ದಾಗಿರಬಹುದು. ಅದನ್ನು ಹಲವು ಆಯಾಮಗಳಲ್ಲಿ ಅರ್ಥಮಾಡಿಕೊಂಡು ಅದರ ವಾಚ್ಯಾರ್ಥವನ್ನೂ ಸೂಚ್ಯಾರ್ಥವನ್ನು ಶ್ರೀಮತಿ ಪದ್ಮಿನಿ ಹೆಗಡೆಯವರು ಬಿಚ್ಚಿದ ಮನಸ್ಸಿನಿಂದ ವಿವರಿಸಿ ಓದುಗರಿಗೆ ತಿಳಿಸುತ್ತಾರೆ. ಇಪ್ಪತ್ತನೆಯ ಶತಮಾನದಲ್ಲಿ ಕನ್ನಡ ಸಾಹಿತ್ಯಕ್ಕೆ ತಮ್ಮ ಪ್ರತಿಭೆಯ ರತ್ನ ಕಿರೀಟವನ್ನು ತೊಡಿಸಿದ ಕುವೆಂಪು ಅವರ **ಬಾ ಫಾಲ್ಗುಣ ರವಿ ದರ್ಶನಕೆ** ಎಂಬ ಕವಿತೆಯನ್ನು ಪದ್ಮಿನಿ ತುಂಬು ಅಭಿಮಾನದಿಂದ ವಿವರಣೆಗೆ ಎತ್ತಿಕೊಂಡಿದ್ದಾರೆ.

"ಶಿವಮಂದಿರಸಮವೆನೆ ಸುಂದರ
ಸಮಶೃಂಗಾರದ ಗಿರಿಶೃಂಗಕೆ ಬಾ ಫಾಲ್ಗುಣರವಿದರ್ಶನಕೆ"

ಎಂದು ಆರಂಭಗೊಳ್ಳುವ ಈ ಪದ್ಯ ಶಬ್ದವೈಭವದಿಂದಲೂ ಅರ್ಥವೈಪುಲ್ಯದಿಂದಲೂ ವಾಚಕರನ್ನು ತನ್ನತ್ತ ಸೆಳೆದು ನಿಜ ಸೌಂದರ್ಯೋಪಾಸನೆಯ ಊರ್ಧ್ವೋರ್ಧ್ವಲೋಕಕ್ಕೆ ಒಯ್ಯುತ್ತದೆ.

ವ್ಯಕ್ತಿತೆ ಮೈಮರೆವುದು
ಸೌಂದರ್ಯ ಸಮಾಧಿಂಯೊಳಾನಂದದ ಹೀರಿ
ಸರ್ವೇಂದ್ರಿಯ ಸುಖನಿಧಿಯಲ್ಲಿ
ಸರ್ವಾತ್ಮನ ಸನ್ನಿಧಿಯಲ್ಲಿ
ಸಕಲಾರಾಧನ ಬೋಧನ ಅನುಭವ
ರಸತಾನಹುದಲ್ಲಿ

ಎಂಬ ಸಾಲುಗಳನ್ನು ಬರೆಯುವಾಗ ರಸಋಷಿ ಕುವೆಂಪು ಎಂಥ ಭಾವಾವೇಶದಲ್ಲಿದ್ದರೋ! ಇದನ್ನು ಪದ್ಮಿನಿ ನಮಗೆ, ನಮ್ಮ ಮನಸ್ಸಿಗೆ ಹತ್ತಿರವಾಗುವಂತೆ ವಿವರಿಸುತ್ತಾರೆ.

"ಕುವೆಂಪುರವರ ಈ ಕವನ ಫಾಲ್ಗುಣ ಮಾಸದ ರವಿಯ ದರ್ಶನವನ್ನು ಪಡೆಯಲು ಆಹ್ವಾನಿಸುತ್ತಿದೆ. ಅದೇ ತಾನೆ ಉದಯಿಸುತ್ತಿರುವ ಸೂರ್ಯನನ್ನು ವರ್ಣಿಸುತ್ತಾ ಉದಯರವಿ ಉಂಟು ಮಾಡಬಹುದಾದ ಪರಿಣಾಮಗಳಿಗೆ ಇರುವ ವಿವಿಧ ಆಯಾಮಗಳನ್ನೂ ಗಮನಕ್ಕೆ ತರುತ್ತಿದೆ. ಈ ಆಯಾಮಗಳಿಗೂ ಫಾಲ್ಗುಣ ಮಾಸಕ್ಕೂ ಸಂಬಂಧವನ್ನು ಕಲ್ಪಿಸುತ್ತಿದೆ. ಫಾಲ್ಗುಣ ಚಾಂದ್ರಮಾನ ವರ್ಷದ ಕೊನೆಯ ತಿಂಗಳು ಮಾತ್ರವಲ್ಲದೆ ಇದು ಸೌರಮಾನ ವರ್ಷಕ್ಕೂ ಕೊನೆಯ ತಿಂಗಳು. ಈ ಮಾಸದಲ್ಲಿ ಸೂರ್ಯ ಕುಂಭ ರಾಶಿಯಿಂದ ಮೀನರಾಶಿಗೆ ಬರುತ್ತಾನೆ. ಸೌರಮಾನದ 12ರಾಶಿಗಳಲ್ಲಿ ಮೀನ ಕೊನೆಯದು. ಇದರ ನಂತರ ಚಾಂದ್ರಮಾನದ ಚೈತ್ರಮಾಸದೊಂದಿಗೆ, ಸೌರಮಾನದ ಮೇಷರಾಶಿಗೆ ಸೂರ್ಯನ ಆಗಮನವಾಗುವುದರೊಂದಿಗೆ ಹೊಸ ವರ್ಷಾರಂಭ...

ಈ ಎಲ್ಲಾ ಮಾಹಿತಿಗಳು ನಮಗೆ ಬೇರೆ ಎಲ್ಲಿ ಲಭ್ಯವಾಗುತ್ತವೆ? ಪದ್ಮಿನಿಯವರು ಇಂತಹ ಅಮೂಲ್ಯ ಮಾಹಿತಿಗಳ ಕಣಜ. ಈ ಪುಸ್ತಕ ಕನ್ನಡದ ಅತ್ಯುತ್ತಮ ಕವಿತೆಗಳ ಸಂಗ್ರಹವೆಂದೂ ಹೇಳಬೇಕು. ವಿ.ಕೃ. ಗೋಕಾಕ್, ಪು.ತಿ.ನ., ಜಿ.ಎಸ್. ಶಿವರುದ್ರಪ್ಪ, ದ.ರಾ. ಬೇಂದ್ರೆ ಮುಂತಾದನೇಕ ಕವಿವರ್ಯರ ಶ್ರೇಷ್ಠ ಕವನಗಳೂ ಇಲ್ಲಿವೆ. ಕನ್ನಡದ ಭಾವಗೀತೆ ವಿಶ್ವದ ಯಾವುದೇ ಭಾಷೆಯ ಗೀತೆಗಳಿಗೆ ಸರಿಮಿಗಿಲು ಎಂಬ ಭಾವನೆ ನಮ್ಮಲ್ಲಿ ಹುಟ್ಟುವಂತೆ ಮಾಡುತ್ತದೆ ಈ ಪುಸ್ತಕ. ಲಕ್ಷ್ಮೀನಾರಾಯಣ ಭಟ್ಟರ ಈ ಕವಿತೆಯನ್ನು ನೋಡೋಣ.

ಎಲ್ಲ ನಿನ್ನ ಲೀಲೆ ತಾಯೆ! ಎಲ್ಲ ನಿನ್ನ ಮಾಯೆ।
ನಿನ್ನ ಅಲ್ಲಗಳೆದ ನಮ್ಮ ! ಕರುಣೆಯಿಂದ ಕಾಯೆ।
ಕಾದಿರುಳನು ಸೀಳಿ ಬರುವ ನಿಗಿನಿಗಿ ಹರಳು ।
ನೀಲಿ ನಭದ ಹಾಸಿನಲ್ಲಿ ಮಣಿ ನೇಯುವ ಇರುಳು।
ಋತು ಮೀರದೆ ಮುಗಿಲಗಡಿಗೆ ಉರುಳಿ ಸುರಿದ ಜಲವು
ಎಲ್ಲ ನಿನ್ನ ಲೀಲೆ ತಾಯೆ ಎಲ್ಲ ನಿನ್ನ ಮಾಯೆ॥

ಇದಕ್ಕೆ ಪದ್ಮಿನಿಯವರು ಕೊಡುವ ವ್ಯಾಖ್ಯಾನ ಅದ್ಭುತವಾಗಿದೆ.

"ಲಕ್ಷ್ಮೀನಾರಾಯಣಭಟ್ಟರ ಈ ಕವಿತೆ ಪ್ರಕೃತಿಯನ್ನು ತಾಯಿ ಎಂದು ಭಾವಿಸುವುದರ ಜೊತೆಗೆ ಮಾಯೆಯೆಂದೂ ಇಲ್ಲಿ ಪರಿಕಲ್ಪಿಸುತ್ತಿದೆ. ಮಾಯೆ ಎನ್ನುವುದಕ್ಕೆ ಅರ್ಥವಾಗದ ವೈರುಧ್ಯತೆ ಎನ್ನುವ ಅರ್ಥವೂ ಇದೆ. ನಮಗೆ ಕಾಣುವ ಅದೇ ಆಕಾಶದಲ್ಲಿ ದಟ್ಟವಾದ ಕಪ್ಪಾದ ರಾತ್ರಿಯನ್ನು ಸೀಳಿಕೊಂಡು ಹೊರಬಂದ ಸೂರ್ಯ ನಿಗಿನಿಗಿ ಕೆಂಡದುಂಡೆಯಂತಹ ಹರಳಾಗಿ ಪ್ರಕಾಶಿಸುತ್ತಾನೆ. ಅದೇ ನೀಲಿ ನಭದ ಹಾಸಿನಲ್ಲಿ ಮಣಿಗಳಂತೆ ಹೊಳೆಯುವ ನಕ್ಷತ್ರ ಪುಂಜಗಳ ಇರುಳು ಶೋಭಾಯಮಾನವಾಗುತ್ತದೆ. ಶೀತೋಷ್ಣ, ಉರಿ ಬಿಸಿಲು ಬೆಳದಿಂಗಳುಗಳಿಗೆ, ಹಗಲು ರಾತ್ರಿಗಳಿಗೆ ಅದೇ ಆಕರ" ಹೀಗೆ ಹಲವು ದೃಷ್ಟಿಗಳಿಂದ ಈ ಕವಿತೆಯನ್ನು ವಿಮರ್ಶಿಸಿದ್ದಾರೆ ಪದ್ಮಿನಿಯವರು.

ಕೆ.ಎಸ್. ನರಸಿಂಹಸ್ವಾಮಿಯವರ **ದೀಪವು ನಿನ್ನದೇ ಗಾಳಿಯೂ ನಿನ್ನದೆ ಆರದಿರಲಿ ಬೆಳಕು** ಎಂಬ ಪದ್ಯವನ್ನು ಯಾವ ಕನ್ನಡಿಗನು ಕೇಳಿ ಆನಂದಿಸಿಲ್ಲ? ಇದನ್ನು ಪದ್ಮಿನಿ ಹೆಗಡೆಯವರು ಹೃದ್ಯವಾಗಿ ವಿಶದೀಕರಿಸಿದ್ದಾರೆ. ಅದರ ಕೆಲವು ವಾಕ್ಯಗಳು ಉಲ್ಲೇಖನೀಯವಾಗಿವೆ. "ಇಲ್ಲಿ 'ಮುಳುಗದಿರಲಿ ಬದುಕು' ಎಂಬುದು ಮುಖ್ಯವಾದದ್ದು. ನಮ್ಮ ಬದುಕನ್ನು ಮುಳುಗಿಸುವುದು ನಮ್ಮ ಆತಂಕಗಳು. ನಮ್ಮ ಮೂಗಿನ ನೇರಕ್ಕೆ ಇರುವ ನಮ್ಮ ನಿರೀಕ್ಷೆಗಳು, ಅತಿಶಯವಾದ ಆಶೋತ್ತರಗಳು, ನಮ್ಮ ಕೈಗೆಟುಕದ ಮಹತ್ವಾಕಾಂಕ್ಷೆಗಳು. ವಾಸ್ತವತೆ ನಮ್ಮ ಕೈಗೊಂಬೆ ಅಲ್ಲ. ಅದಕ್ಕೆ ಅದರದೇ ಆದ ರೀತಿ ನೀತಿ ಸ್ವರೂಪ ಸ್ವಭಾವಗಳು ಇವೆ ಎಂಬುದನ್ನು ಅರ್ಥ ಮಾಡಿಕೊಂಡಾಗ ಯಾವುದೂ ನಮ್ಮನ್ನು ವಿಚಲಿತಗೊಳಿಸುವುದಿಲ್ಲ. ಯಾವುದರಿಂದಲೂ ನಮ್ಮ ಮನಸ್ಸು ಅಸ್ವಸ್ಥ ಆಗುವುದಿಲ್ಲ. ಬದಲಿಗೆ ಸ್ನೇಹ–ಪ್ರೀತಿಯುತ ನೋಟ ನಮ್ಮದಾಗಿರುತ್ತದೆ. ಹೀಗೆ ಇದ್ದರೆ ಬದುಕು ಮುಳುಗುವುದರ ಬದಲಿಗೆ ಎಚ್ಚೆತ್ತ ಬದುಕು ಆಗಿರುತ್ತದೆ ಎನ್ನುತ್ತಿದೆ ಈ ಕವಿತೆ."

ಪುರಂದರದಾಸರು ಪಂಡಿತರಿಗೂ ಪಾಮರರಿಗೂ ಇಷ್ಟವಾದವರು. ಸಮಾಜದ ಓರೆಕೋರೆಗಳನ್ನು ಸರಿಪಡಿಸಲು ಅವರು ತಮ್ಮ ಪದಗಳಲ್ಲಿ ಟೀಕೆ ಟಿಪ್ಪಣಿಗಳನ್ನು ಮಾಡಿದರು. ಅಂಬಿಗ ನಾ ನಿನ್ನ ನಂಬಿದೆ ಎಂಬ ದೇವರನಾಮದಲ್ಲಿ ಅವರ ಮಾತುಗಳ ಅರ್ಥ ಸೂಚ್ಯವಾಗಿದೆ. ಆರು ತೆರೆಯ ನೋಡಂಬಿಗ ಎಂಬುದಕ್ಕೆ ಪದ್ಮಿನಿ ಹೆಗಡೆಯವರು "ಇಲ್ಲಿ ಹೇಳಿರುವ ಆರು ತೆರೆಗಳು ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೇ" ಎಂಬ ವಿವರಣೆಯನ್ನು ಕೊಟ್ಟಿರುವುದು ಜಿಜ್ಞಾಸುಗಳಿಗೆ ಉಪಕಾರಕವಾಗಿದೆ. ಕನಕದಾಸರ, ಶ್ರೀಪಾದರಾಯರ, ಇತರ ಹರಿದಾಸರ ಹಾಡುಗಳೇ ಅಲ್ಲದೆ ನಾವು ಚಿಕ್ಕಂದಿನಲ್ಲಿ ಶಾಲೆಗಳಲ್ಲಿ ಕಲಿಯುತ್ತಿದ್ದ, ವಿ.ಸೀ. ಅವರ **ಹೂವನು ಮಾರುತ ಹೂವಾಡಗಿತ್ತಿ ಹಾಡುತ ಬರುತಿಹಳು** ಮುಂತಾದ ಆಧುನಿಕ ಕನ್ನಡ ಗೀತೆಗಳ ಅರ್ಥವಿಶದೀಕರಣವೂ ಇದೆ.

ಭಾವಯಾನ ಎಂಬ ಭಾಗದಲ್ಲಿ ಎಚ್.ಎಸ್. ವೆಂಕಟೇಶಮೂರ್ತಿ ಅವರ ಒಂದು ಭಾವಗೀತೆಯಂತೂ ಮನಸ್ಸನ್ನು ಸೆರೆ ಹಿಡಿಯುತ್ತದೆ.

ಇಷ್ಟು ಕಾಲ ಒಟ್ಟಿಗಿದ್ದು ಎಷ್ಟು ಬೆರೆತರೂ
ಅರಿತೆವೇನು ನಾವು ನಮ್ಮ ಅಂತರಾಳವ?
ಕಡಲ ಮೇಲೆ ಸಾವಿರಾರು ಮೈಲಿ ಸಾಗಿಯೂ
ನೀರಿನಾಳ ತಿಳಿಯಿತೇನು ಹಾಯಿದೋಣಿಗೆ?
ಸದಾ ಕಾಲ ತಬ್ಬುವಂತೆ ಮೇಲೆ ಬಾಗಿಯೂ
ಮಣ್ಣು ಮುತ್ತು ದೊರೆಯಿತೇನು ನೀಲಿ ಬಾನಿಗೆ
ಸಾವಿರಾರು ಮುಖದ ಚೆಲುವ ಹಿಡಿದು ತೋರಿಯೂ
ಒಂದಾದರು ಉಳಿಯಿತೇ ಕನ್ನಡಿಯ ಪಾಲಿಗೆ?

ಈ ಕವಿತೆಯ ವಿವರಣ ಸಾಧ್ಯತೆಗಳು ಹಲವು. ಬದುಕಿನ ನೈಜತೆಯ ವ್ಯಾಖ್ಯಾನ ಇಲ್ಲಿ ಗಂಭೀರವಾಗಿ ಬಂದಿದೆ. ಹಾಯಿ ದೋಣಿ, ಮಣ್ಣು ಮುತ್ತು, ಕನ್ನಡಿ ಎಂಬ ರೂಪಕಗಳು ಇಲ್ಲಿ ಅಪಾರ ಸತ್ತ್ವವನ್ನು ಹೊಂದಿವೆ. ಇವುಗಳನ್ನು ವರ್ಣಿಸಲು ಪದ್ಮಿನಿ ಹೆಗಡೆ ಪ್ರಯತ್ನ ಮಾಡಿದ್ದಾರೆ. "ಈ ಕವನದಲ್ಲಿ ವ್ಯಾಪಕ ಅರ್ಥ ಸಾಧ್ಯತೆಯುಳ್ಳ ಒಂದು ರೂಪಕ ಕನ್ನಡಿಯ ಮುಂದಿರುವ ವ್ಯಕ್ತಿ" ಎಂಬುದು ಅವರ ಮಾತು. ಕವಿ ಇಲ್ಲಿ ರೂಪಿಸಿರುವುದು ಕನ್ನಡಿಯನ್ನೋ ಅದರಲ್ಲಿ ಬಿಂಬಿತನಾದ ವ್ಯಕ್ತಿಯನ್ನೋ ಅಥವಾ ಇಬ್ಬರನ್ನೋ ಎಂಬುದು ಚರ್ಚಾರ್ಹ ಅಂಶ.

ಹೀಗೆಯೇ ಎಸ್.ವಿ. ಪರಮೇಶ್ವರ ಭಟ್ಟರ **ತಿಳಿ ಮುಗಿಲ ತೊಟ್ಟಿಲಲಿ**, ದೊಡ್ಡರಂಗೇಗೌಡರ **ಅಸೀಮರೂಪಿ ಅಂಬರದಲ್ಲಿ**, ಕೆ.ಸಿ. ಶಿವಪ್ಪ ಅವರ **ಹೊಂಗೆ ಸೊಂಪಾಗಿ ಚಿಗುರುವುದು ಚಂದ ಚಂದ** ಇವೆಲ್ಲ ಉಲ್ಲಾಸವನ್ನು ಕೊಡುವುದರ ಜೊತೆಗೆ ಚಿಂತನೆಗೂ ದಾರಿ ಮಾಡಿಕೊಡುತ್ತವೆ. ಸುಂದರವಾದ ಜಾನಪದ ಗೀತೆಗಳೂ ಇಲ್ಲಿವೆ. ಇಂತಹ ಒಳ್ಳೆಯ ಸಾಹಿತ್ಯವನ್ನು ಆರಿಸಿಕೊಂಡಿರುವುದಕ್ಕೆ ಪದ್ಮಿನಿ ಅವರಿಗೆ ವಂದನೆಗಳು ಸಲ್ಲುತ್ತವೆ. ಈ ಪುಸ್ತಕ ಅವುಗಳ ಸ್ವಾರಸ್ಯವನ್ನು ತೆರೆದು ತೋರಿಸುವ ಪ್ರಾಮಾಣಿಕ ಪ್ರಯತ್ನ. ಇದನ್ನು ಬರೆದವರಿಗೂ, ಬೆಳಕಿಗೆ ತಂದ ಜಿ.ಎಸ್.ಎಲ್. ಪ್ರಕಾಶನಕ್ಕೂ ಕನ್ನಡಿಗರು ಋಣಿಗಳು.

ಸಾಗರದ ತಳದಲ್ಲಿ ರತ್ನಗಳ ಹುಡುಕಿದಿರಿ
ಆಗಸದಿ ತೇಜಸ್ವಿ ತಾರೆಗಳ ಕಂಡಿಹಿರಿ
ಮೂಗಿರುವ ಮನಸಿಂದ ರಸನದಿಯ ಹರಿಸಿಹಿರಿ
ಬಾಗಿ ನಮಿಸುವೆವಮ್ಮ ಪದ್ಮಿನಿಯೆ ನಿಮಗೆ.



ವಿಶ್ವರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾರತದ ಸಂವಿಧಾನ ಪ್ರತಿಯನ್ನು ಹ್ಯಾಟ್ರಿಕ್ ಹೀರೋ ಡಾ.ಶಿವರಾಜ್‌ಕುಮಾರ್ ಅವರಿಗೆ ಅಶೋಕಪುರಂ ಯುವ ಮುಖಂಡ ಮದನ್ ಇತ್ತೀಚೆಗೆ ನೀಡಿದರು. ಸಂವಿಧಾನದ ಮೂಲ ಆಶಯವನ್ನು ಭಾರತದ ಪ್ರತಿಯೊಬ್ಬ ಪ್ರಜೆಗೂ ಮನವರಿಕೆ ಮಾಡಿಕೊಡುವ ಉದ್ದೇಶದಿಂದ ಭಾರತ ಸಂವಿಧಾನದ ಸಾವಿರಾರು ಪ್ರತಿಯನ್ನು ವ್ಯಾಪಕವಾಗಿ ವಿತರಿಸಲಾಗುತ್ತಿದೆ.

ಬೆಂಗಳೂರು ಆಸಿಡ್ ದಾಳಿ ಪ್ರಕರಣ: ಇಂದು ಚಾರ್ಜ್‌ಶೀಟ್ ಸಲ್ಲಿಕೆ



ಬೆಂಗಳೂರು: ಸಿಲಿಕಾನ್ ಸಿಟಿಯಲ್ಲಿ ನಡೆದ ಆಸಿಡ್ ದಾಳಿ ಪ್ರಕರಣ ಸಂಬಂಧ ಕಾಮಾಕ್ಷಿಪಾಳ್ಯ ಪೊಲೀಸರು ನಾಳೆ (ಬುಧವಾರ) ನ್ಯಾಯಾಲಯಕ್ಕೆ ಚಾರ್ಜ್‌ಶೀಟನ್ನು ಸಲ್ಲಿಕೆ ಮಾಡಲಿದ್ದಾರೆ. ಆರೋಪಿ ನಾಗೇಶ್ ವಿರುದ್ಧ ಪ್ರಮುಖ ಸಾಕ್ಷ್ಯಗಳನ್ನು ಕಲೆ ಹಾಕಿದ್ದ ಪೊಲೀಸರು ಚಾರ್ಜ್‌ಶೀಟ್‌ನಲ್ಲಿ ಮಹತ್ವದ ಅಂಶಗಳನ್ನು ಉಲ್ಲೇಖ ಮಾಡಿದ್ದಾರೆ ಎಂದು ತಿಳಿದುಬಂದಿದೆ.

ಕಾಮಾಕ್ಷಿಪಾಳ್ಯ ಪೊಲೀಸರು ಮೂರು ತಿಂಗಳ ಸುದೀರ್ಘ ತನಿಖೆ ಬಳಿಕ 13 ನೇ ಎಸಿಎಂಎಂ ಕೋರ್ಟ್‌ಗೆ ಚಾರ್ಜ್‌ಶೀಟ್ ಸಲ್ಲಿಸಲಿದ್ದಾರೆ. ಇನ್ನು 770 ಪುಟಗಳ ಪ್ರಾಥಮಿಕ ಚಾರ್ಜ್‌ಶೀಟ್ ಇದಾಗಿದ್ದು, 92 ಸಾಕ್ಷಿಗಳನ್ನು ಉಲ್ಲೇಖಿಸಲಾಗಿದೆ. ಹಾಗೆಯೇ ಇಬ್ಬರು ಐ–ವಿಟ್ನೆಸ್‌ಗಳ ಸಿಆರ್‌ಪಿಸಿ 164 ಅಡಿ ಸ್ಟೇಟ್ಮೆಂಟ್ ಗಳನ್ನೂ ದಾಖಲಿಸಿಕೊಳ್ಳಲಾಗಿದೆ. ನಾಗೇಶ್ ಯುವತಿ ಮೇಲೆ ಆಸಿಡ್ ಎರಚಿದ ಮೇಲೆ ತನ್ನ ಸಹೋದರನಿಗೆ ಕರೆ ಮಾಡಿದ್ದ ಆಡಿಯೋ ಸೇರಿ ಹಲವು ವಾಯ್ಸ್ ರೆಕಾರ್ಡ್‌ಗಳನ್ನು ಎಫ್‌ಎಸ್‌ಎಲ್‌ಗೆ ರವಾನೆ ಮಾಡಲಾಗಿತ್ತು. ಈಗ ಅದು ನಾಗೇಶನ ಧ್ವನಿ ಎಂದು ಖಚಿತವಾಗಿದೆ. ಇನ್ನು ಈ ಹಿಂದೆ ನಾಗೇಶ್ ಹಾಗೂ ಸಂತ್ರಸ್ತೆಯ ನೀಡಿದ ಹೇಳಿಕೆಯ ಅಂಶಗಳು ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖವಾಗಿವೆ. ಇದೇ ವೇಳೆ ಸಾಕಷ್ಟು ಸಿಸಿಟಿವಿ ದೃಶ್ಯಾವಳಿಗಳನ್ನು ಕೂಡ ವಶಕ್ಕೆ ಪೊಲೀಸರು ಪಡೆಯಲಾಗಿದ್ದು, ಆ ಸಾಕ್ಷಿಗಳನ್ನು ಕೋರ್ಟ್‌ಗೆ ಸಲ್ಲಿಸಲಾಗುತ್ತದೆ.

ಪಿಎಸ್‌ಐ ಆಯ್ತು... ಇದೀಗ ಕೆಪಿಟಿಸಿಎಲ್‌ನಲ್ಲೂ ಗೋಲ್‌ಮಾಲ್

ಕಲಬುರಗಿ: ಜಿಲ್ಲೆಯಲ್ಲಿ ಮತ್ತೊಂದು ಪರೀಕ್ಷೆಯಲ್ಲಿ ಗೋಲ್ಮಾಲ್ ಆರೋಪ ಕೇಳಿ ಬಂದಿದೆ. ಎರಡು ದಿನದ ಹಿಂದೆ ನಡೆದ ಕೆಪಿಟಿಸಿಎಲ್ ಪರೀಕ್ಷೆಯಲ್ಲೂ ಅಕ್ರಮ ನಡೆದಿದ್ದು, ಬ್ಲೂಟೂತ್ ಮೂಲಕ ಅಭ್ಯರ್ಥಿಗಳಿಗೆ ಉತ್ತರ ರವಾನೆ ಮಾಡಲಾಗಿದೆ ಎನ್ನಲಾಗುತ್ತಿದೆ. ಕೆಪಿಟಿಸಿಎಲ್ ಪರೀಕ್ಷೆಯಲ್ಲಿ ನಡೆದ ಅಕ್ರಮವನ್ನು ಬೆಳಗಾವಿಯ ಗೋಕಾಕ್‌ನ ಕಿಂಗ್‌ಪಿನ್‌ಗಳೇ ಮಾಡಿರುವುದು ಗೊತ್ತಾಗಿದೆ. ಅತ್ತ ಕಲಬುರಗಿ ಪಿಎಸ್‌ಐ ಕಿಂಗ್‌ಪಿನ್‌ಗಳು ಅರೆಸ್ಟ್ ಆಗುತ್ತಿದ್ದಂತೆ, ಇತ್ತ ಗೋಕಾಕ್ ಕಿಂಗ್‌ಪಿನ್‌ಗಳು ಆಕ್ಟೀವ್ ಆಗಿ ಕಲಬುರಗಿಗೆ ಆಗಮಿಸಿ ಕೆಪಿಟಿಸಿಎಲ್ ಎಕ್ಸಾಂನಲ್ಲಿ ಗೋಲ್ಮಾಲ್ ಮಾಡಿದೆ.

ಘಟನೆ ಸಂಬಂಧಿಸಿ ಎಚ್ಚೆತ್ತ ಜಿಲ್ಲಾಡಳಿತ ಚಿಂಚೋಳಿ ಪರೀಕ್ಷಾ ಕೇಂದ್ರದ ಮೆಟಲ್ ಡಿಟೆಕ್ಟರ್, ಪೊಲೀಸರು, ಪರೀಕ್ಷಾ ಮೇಲ್ವಿಚಾರಕರನ್ನು ಅಕ್ರಮ ಪತ್ತೆ ಹಚ್ಚಲು ಮುಂದಾಗಿದೆ. ಜೊತೆಗೆ ಪರೀಕ್ಷಾ ಕೇಂದ್ರದಲ್ಲಿ ಬಿಗಿ ಭದ್ರತೆಯನ್ನು ಮಾಡಿದ್ದಾರೆ. ಇತ್ತ ಪೊಲೀಸ್ ಇಲಾಖೆ ಹೈ ಅಲರ್ಟ್ ಆಗುತ್ತಿದ್ದಂತೆ ಕಿಂಗ್‌ಪಿನ್‌ಗಳು ಮೊಬೈಲ್‌ನ್ನು ಸ್ವಿಚ್ ಆಫ್ ಮಾಡಿಕೊಂಡಿದ್ದಾರೆ. ಅಕ್ರಮ ನಡೆಸಲು ಬೆಳಗಾವಿಯಿಂದ ಕಲಬುರಗಿಗೆ ಆಗಮಿಸಿದ ಕಿಂಗ್‌ಪಿನ್‌ಗಳು, ಜೇವರ್ಗಿ ತಾಲೂಕು ಬಳಿ ಬಂದ ನಂತರ ಮೊಬೈಲ್ ಸ್ವೀಚ್‌ಆಫ್ ಮಾಡಿದ್ದಾರೆ. ಕಲಬುರಗಿ ಪೊಲೀಸರು, ಸಿಐಡಿ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ.

ಆಜಾದಿ ಕಾ ಅಮೃತ್: ಆ.14ರವರೆಗೆ ಕೆ.ಆರ್.ಕ್ಷೇತ್ರದಲ್ಲಿ ವಿಭಿನ್ನ ಕಾರ್ಯಕ್ರಮ

ಮೈಸೂರು,ಆ.9(ಎಂಟಿವೈ)–ದೇಶಕ್ಕೆ ಸ್ವಾತಂತ್ರ್ಯ ಲಭಿಸಿ 75 ವರ್ಷ ಸಂದ ಹಿನ್ನೆಲೆಯಲ್ಲಿ ದೇಶದಾದ್ಯಂತ ಆಜಾದಿ ಕಾ ಅಮೃತ ಮಹೋತ್ಸವವನ್ನು ಸಂಭ್ರಮದಿಂದ ಆಚರಿಸಲಾಗುತ್ತಿದೆ. ಕೆ.ಆರ್.ಕ್ಷೇತ್ರದಲ್ಲಿ ಆ.14ರವರೆಗೆ ಅಮೃತ ಮಹೋತ್ಸವ ಸಪ್ತಾಹದ ಮೂಲಕ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ಎಸ್.ಎ.ರಾಮದಾಸ್ ತಿಳಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆ.ಆರ್. ಕ್ಷೇತ್ರದಲ್ಲಿ ವಿಭಿನ್ನವಾಗಿ ಆಜಾದಿ ಕಾ ಅಮೃತ ಮಹೋತ್ಸವ ಆಚರಿಸಲಾಗುತ್ತಿದೆ. ದೇಶಭಕ್ತಿ ಮೂಡಿಸುವ ಕಾರ್ಯಕ್ರಮದೊಂದಿಗೆ ಸೇವಾ ಕಾರ್ಯಕ್ರಮ ನಡೆಸಲಾಗುತ್ತಿದೆ. ಅಮೃತ ಮಹೋತ್ಸವ ಸಪ್ತಾಹದ ಮೂಲಕ ಜನರಲ್ಲಿ ಸ್ವಾತಂತ್ರ್ಯದ ಮಹತ್ವದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಆ.8ರಂದು ಶ್ರೀರಾಂಪುರ ಮತ್ತು ಅರವಿಂದನಗರ ವಾರ್ಡ್‌ಗಳಿಗೆ ಹೊಂದಿಕೊಂಡಂತಿರುವ ಮುಡಾ ಅನುಮೋದಿತ 23 ಖಾಸಗಿ ಬಡಾವಣೆಗಳನ್ನು ಪಾಲಿಕೆ ವ್ಯಾಪ್ತಿಗೆ ತಂದು ಅಗತ್ಯ ಸೌಲಭ್ಯ ಕಲ್ಪಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ ಎಂದರು.

19 ವಾರ್ಡ್‌ಗಳಲ್ಲೂ ಕಾರ್ಯಕ್ರಮ: ಕೆ.ಆರ್.ಕ್ಷೇತ್ರದಲ್ಲಿ 19 ದೇಶಭಕ್ತಿಯ ಸಂಗೀತೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ರಾಷ್ಟ್ರಭಕ್ತಿ ಬಗ್ಗೆ ಅರಿವು ಮೂಡಿಸುವಂತಹ ಕಾರ್ಯಕ್ರಮಕ್ಕೆ ಆ.9ರಂದು ಚಾಮುಂಡಿಪುರಂ ವೃತ್ತದಲ್ಲಿ ಚಾಲನೆ ನೀಡಲಾಗಿದೆ. ಎಲ್ಲಾ ವಾರ್ಡ್‌ಗಳಲ್ಲೂ ಸಂಗೀತೋತ್ಸವ ನಡೆಸಲಾಗುತ್ತದೆ ಎಂದು ತಿಳಿಸಿದರು.

ಅಶೋಕಪುರಂ ಸಮಸ್ಯೆ ನಿವಾರಣೆ: ಮೈಸೂರಿನ ಅಶೋಕಪುರಂ ಬಡಾವಣೆ 107 ವರ್ಷಗಳ ಹಿಂದೆಯೇ ಮಹಾರಾಜರಿಂದ ದಾನವಾಗಿ ನೀಡಲಾದ ಜಾಗದಲ್ಲಿ ನಿರ್ಮಾಣವಾಗಿದೆ. ಆದರೆ ಅಲ್ಲಿರುವ ಮನೆಗಳಿಗೆ 1935ರಿಂದಲೂ ಖಾತೆ ಮಾಡಿಕೊಡಲು ಸಾಧ್ಯವಾಗಿರಲಿಲ್ಲ. ಇಲ್ಲಿರುವ 4 ಸಾವಿರ ನಿವೇಶನದಾರರಲ್ಲಿ 2800 ಮಂದಿಗೆ ದಾಖಲೆ ನೀಡಲು ಸಾಧ್ಯವಾಗಿರಲಿಲ್ಲ. ನಾಲ್ಕೈದು ತಲೆಮಾರುಗಳಿಂದ ವಾಸಿಸುತ್ತಿದ್ದರೂ ನಿವೇಶನದ ಹಕ್ಕನ್ನು ಪಡೆಯಲು ಸಾಧ್ಯವಾಗಿಲ್ಲ. ಈ ಸಮಸ್ಯೆ ನಿವಾರಿಸುವ ನಿಟ್ಟಿನಲ್ಲಿ ಮೈಸೂರು ಮೇಯರ್, ಆಯುಕ್ತರು, ಪಾಲಿಕೆ ಸದಸ್ಯರೊಂದಿಗೆ ಅಭಿಯಾನ ಆರಂಭಿಸಲಾಗುತ್ತದೆ. ಕಟ್ಟಕಡೆಯ ವ್ಯಕ್ತಿಗೂ ಖಾತೆ ಕಂದಾಯದ ಹಕ್ಕನ್ನು ನೀಡುವ ಕಾರ್ಯಕ್ರಮಕ್ಕೆ ಆ.11ರಂದು ಬೆಳಗ್ಗೆ 10.30ಕ್ಕೆ ಅಶೋಕಪುರಂನ ಡಾ.ಅಂಬೇಡ್ಕರ್ ಪಾರ್ಕ್ ಮುಂಭಾಗದ ಸರ್ಕಾರಿ ಶಾಲೆಯಲ್ಲಿ ಚಾಲನೆ ನೀಡಲಾಗುತ್ತದೆ ಎಂದು ತಿಳಿಸಿದರು.

ದೇಶಭಕ್ತಿ ಮೂಡಿಸುವುದು, ಸಂಗೀತ ಉತ್ಸವ, ಸೇವಾ ಕಾರ್ಯಕ್ರಮ ಆಯೋಜನೆ



ಮೆರವಣಿಗೆ: ಆ.12ರಂದು ಬೆ.9.30ಕ್ಕೆ ಕೆ.ಆರ್.ಕ್ಷೇತ್ರದಲ್ಲಿರುವ ಎಲ್ಲಾ ಸರ್ಕಾರಿ, ಖಾಸಗಿ ಮತ್ತು ಅನುದಾನಿತ ಶಾಲೆಗಳ 6ರಿಂದ 10ನೇ ತರಗತಿಯ 40 ಸಾವಿರ ವಿದ್ಯಾರ್ಥಿಗಳಿಂದ ರಾಷ್ಟ್ರಭಕ್ತಿ ಮೇಳೈಸುವ ಪ್ರಭಾತ್ ಫೇರಿಯನ್ನು(ಮೆರವಣಿಗೆ) ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ 9.30ಕ್ಕೆ ಅರಮನೆ ಮೈದಾನದಿಂದ ಆರಂಭವಾಗುವ ಮೆರವಣಿಗೆ ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿ, ವಿದ್ಯಾರಣ್ಯಪುರಂನ ಭೂತಾಳೆ ಮೈದಾನ ತಲುಪಲಿದೆ. ಅಲ್ಲದೇ ಶಾಲೆಗಳಲ್ಲಿ ಈಗಾಗಲೇ ದೇಶಭಕ್ತಿ ಮೆರೆಯುವ ವಿವಿಧ ಸ್ಪರ್ಧೆ ಆಯೋಜಿಸಿದೆ. ಅದರಲ್ಲಿ ಬಹುಮಾನ ಕೂಡ ನೀಡಲಾಗುತ್ತದೆ ಎಂದರು.

ಕ್ಷೇತ್ರದಲ್ಲಿ 50 ಸಾವಿರ ಧ್ವಜ ಹಾರಾಡಬೇಕು: ಪ್ರಧಾನಿ ಮೋದಿ ಅವರ ಸೂಚನೆಯಂತೆ 'ಹರ್ ಘರ್ ತಿರಂಗ' ಕಾರ್ಯಕ್ರಮದಲ್ಲಿ ಕೆ.ಆರ್. ಕ್ಷೇತ್ರದಲ್ಲಿ 50 ಸಾವಿರ ಧ್ವಜ ಹಾರಾಡಬೇಕೆಂಬ ಮಹದಾಸೆ ನಮ್ಮದಾಗಿದೆ. ಆ.13ರೊಳಗೆ ಎಲ್ಲಾ ವಾರ್ಡ್‌ಗಳಲ್ಲಿ ಕನಿಷ್ಠ 2000 ಧ್ವಜಗಳನ್ನು ಮನೆಗಳ ಮೇಲೆ ಹಾರಿಸಲು ಕ್ರಮ ಕೈಗೊಳ್ಳಲಾಗಿದೆ. ಎಲ್ಲಾ ಸರ್ಕಾರಿ ಶಾಲೆಗಳು, ಕಚೇರಿಗಳು ಹಾಗೂ ಎಲ್ಲಾ ವ್ಯಾಪಾರ ಕೇಂದ್ರಗಳಲ್ಲೂ ತ್ರಿವರ್ಣ ಧ್ವಜ ಹಾರಿಸುವಂತೆ ಮನವಿ ಮಾಡಲಾಗಿದೆ. ಅಲ್ಲದೆ, ಉದ್ಯಮಿಗಳು, ವ್ಯಾಪಾರಿಗಳ ಸಹಕಾರ ಕೋರಲಾಗಿದೆ. ಆ.15ರಂದು ಎಲ್ಲಾ ಮನೆಗಳ ಮೇಲೂ ತ್ರಿವರ್ಣ ಧ್ವಜ ಹಾರಿಸುವಂತೆ ಕೋರಲಾಗಿದೆ ಎಂದರು.

ಬೋರ್‌ವೆಲ್ ರಹಿತ ಕ್ಷೇತ್ರ: ಕ್ಷೇತ್ರದಲ್ಲಿ 19 ವಾರ್ಡ್‌ಗಳಿದ್ದು 520ಕ್ಕೂ ಹೆಚ್ಚು ಬೋರ್‌ವೆಲ್‌ಗಳಿವೆ. ಕೆಲ ಬೋರ್‌ವೆಲ್‌ನ ಕಲುಷಿತ ನೀರು ಸೇವನೆಯಿಂದಾಗಿ ಕ್ಯಾನ್ಸರ್ ಸೇರಿದಂತೆ ಇನ್ನಿತರ ಆರೋಗ್ಯ ಸಮಸ್ಯೆ ಕಾಡುತ್ತಿದೆ. ಸ್ವಾತಂತ್ರ್ಯ ಅಮೃತೋತ್ಸವದ ಸಂದರ್ಭದಲ್ಲಿ ಕ್ಷೇತ್ರದ ಜನರಿಗೆ ಆ.14ರಿಂದ ಬೋರ್‌ವೆಲ್ ನೀರು ಪೂರೈಸುವುದನ್ನು ಸ್ಥಗಿತಗೊಳಿಸಲಾಗುತ್ತದೆ. ಕಬಿನಿಯಿಂದ ಹೆಚ್ಚುವರಿ ನೀರು ಪೂರೈಕೆಗೆ ಕ್ರಮ ಕೈಗೊಳ್ಳಲಾಗಿದೆ. ಹಾಲಿ ಬೋರ್‌ವೆಲ್‌ಗಳ ನೀರನ್ನು ಉದ್ಯಾನವನಗಳಿಗೆ ಪೂರೈಸಲಾಗುತ್ತದೆ. ತಿಂಗಳೊಳಗೆ ಪೂರ್ಣ ಪ್ರಮಾಣದಲ್ಲಿ ಕಬಿನಿಯಿಂದ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ವಿವರಿಸಿದರು.

ಆ.14ರಂದು ಯುವ ಜನರಿಂದ ಬೈಕ್ ರ್‍ಯಾಲಿ: ಆ.14ರಂದು ಸಂಜೆ 5 ಗಂಟೆಗೆ ಕೆ.ಆರ್.ಕ್ಷೇತ್ರದ ವಿವಿಧ ವಾರ್ಡ್‌ಗಳಿಂದ ಯುವಜನರಿಂದ 19 ವಾರ್ಡ್‌ಗಳಿಂದ ದ್ವಿಚಕ್ರ ವಾಹನಗಳಲ್ಲಿ ತಿರಂಗ ಧ್ವಜವನ್ನು ಹಿಡಿದು ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಅಂದು ಸಂಜೆ 6ಕ್ಕೆ ಅರಮನೆಯ ಮೈದಾನ ತಲುಪಲಿದ್ದಾರೆ. ಆ.15ರಂದು ಸ್ವಾತಂತ್ರ್ಯ ದಿನಾಚರಣೆಯ ದಿನ ಕ್ಷೇತ್ರದ ಜನತೆ ಜಾತಿ ಮತ ಧರ್ಮ ಎಲ್ಲವನ್ನು ಮೀರಿ ರಾಷ್ಟ್ರಧ್ವಜವನ್ನು ಹಾರಿಸಿ, ತಮ್ಮ ಮನೆಯಲ್ಲೇ ಸಿಹಿ ತಯಾರಿಸಿ ಸಾರ್ವಜನಿಕರಿಗೆ ಹಂಚುವ ಮೂಲಕ ಹಬ್ಬವಾಗಿ ಆಚರಿಸುವಂತೆ ಕೋರಲಾಗಿದೆ ಎಂದರು. ಗೋಷ್ಠಿಯಲ್ಲಿ ಕೆ.ಆರ್.ಕ್ಷೇತ್ರದ ಬಿಜೆಪಿ ಅಧ್ಯಕ್ಷ ಎಂ.ವಡಿವೇಲು, ಮುಖಂಡರಾದ ಓಂಶ್ರೀನಿವಾಸನ್, ನಾಗೇಂದ್ರಕುಮಾರ್, ಪ್ರಸಾದ್‌ಬಾಬು, ಸಂತೋಷ್ ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಹರ್ ಘರ್ ತಿರಂಗಾ ವಿಷಯವೂ ವಿವಾದ

● ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ವಿಷಾದ ● ಭಾರತೀಯರ ಒಗ್ಗಟ್ಟು ಪ್ರಶ್ನಿಸುವವರ ಬಗ್ಗೆ ಬೇಸರ



ಮೈಸೂರು ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ(ಆಯಿಷ್)ಯ ನಾಲೆಡ್ಜ್ ಪಾರ್ಕ್‌ನ ಸೆಮಿನಾರ್ ಹಾಲ್‌ನಲ್ಲಿ ಸಂಸ್ಥೆಯ 57ನೇ ವಾರ್ಷಿಕೋತ್ಸವವನ್ನು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಉದ್ಘಾಟಿಸಿದರು. ಸಂಸ್ಥೆಯ ನಿರ್ದೇಶಕಿ ಡಾ.ಎಂ.ಪುಷ್ಪಾವತಿ, ಡಾ.ಎಂ.ಸಂತೋಷ್ ಉಪಸ್ಥಿತರಿದ್ದರು.

ಮೈಸೂರು,ಆ.9(ಎಸ್‌ಪಿಎನ್)– ಸುಳ್ಳಿನ ಇತಿಹಾಸದ ಮೇಲೆ ನೈಜ ರಾಷ್ಟ್ರೀಯತೆಯನ್ನು ಕಟ್ಟಲು ಸಾಧ್ಯವಿಲ್ಲ ಎಂದು ಹಿರಿಯ ಸಾಹಿತಿ ಡಾ.ಎಸ್.ಎಲ್.ಭೈರಪ್ಪನವರು ಅನೇಕ ಬಾರಿ ಸಾರ್ವಜನಿಕ ಸಭೆ–ಸಮಾರಂಭದಲ್ಲಿ ಉಲ್ಲೇಖ ಮಾಡಿದ್ದಾರೆ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ಅಭಿಪ್ರಾಯಪಟ್ಟರು.

ಮೈಸೂರು ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ(ಆಯಿಷ್)ಯ ನಾಲೆಡ್ಜ್ ಪಾರ್ಕ್‌ನ ಸೆಮಿನಾರ್ ಹಾಲ್‌ನಲ್ಲಿ ಸಂಸ್ಥೆಯ 57ನೇ ವಾರ್ಷಿಕೋತ್ಸವದಲ್ಲಿ ಭಾಗವಹಿಸಿ, ಮಾತನಾಡಿದರು.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾಗಿವೆ. ಇದರ ಸವಿನೆನಪಿಗಾಗಿ ದೇಶದ ಪ್ರತಿಯೊಬ್ಬರ ಮನೆಯ ಮೇಲೆ ರಾಷ್ಟ್ರಧ್ವಜ ಹಾರಿಸುವುದಕ್ಕೆ ಕೇಂದ್ರ ಸರ್ಕಾರ ಮನವಿ ಮಾಡಿದೆ. ಈ ಕಾರ್ಯಕ್ಕೂ ವಿವಾದ ಮಾಡುತ್ತಿರುವ ಬುದ್ಧಿಜೀವಿಗಳ ಆಲೋಚನೆ ಸರಿಯಿಲ್ಲ. ನಾನು ಫೀಲ್ಡ್ ಮಾರ್ಷಲ್ ಕಾರ್ಯಪ್ಪ, ಜನರಲ್ ತಿಮ್ಮಯ್ಯ ಅವರ ಆದರ್ಶ ಮೈಗೂಡಿಸಿಕೊಂಡಿದ್ದೇನೆ. ಅಲ್ಲದೆ, ನಾನು ಸ್ವತಃ ವಾರಿಯರ್ ಕುಟುಂಬದಿಂದ ಬಂದಿದ್ದು, ಯೋಧರ ಕುಟುಂಬಗಳ ನೋವು–ನಲಿವು ಎರಡನ್ನೂ ಹತ್ತಿರದಿಂದ ಬಲ್ಲೆ ಎಂದರು.

ಸೇನೆಯಲ್ಲಿದ್ದ ನನ್ನ ಸಹೋದರನೊಬ್ಬ ಕಾರ್ಗಿಲ್ ಯುದ್ಧದಲ್ಲಿ ಮಡಿದರು. ಹಾಗಾಗಿ ರಾಷ್ಟ್ರಪ್ರೇಮವನ್ನೇ ಮೈಗೂಡಿಸಿಕೊಂಡು ಕರ್ತವ್ಯ ನಿರ್ವಹಿಸುವ ಯೋಧರ ತ್ಯಾಗ–ಬಲಿದಾನದ ಬಗ್ಗೆ ಅಪಾರ ಗೌರವವಿದೆ. ನಮ್ಮ ಯೋಧರು ತಮ್ಮ ಪ್ರಾಣ ಒತ್ತೆಯಿಟ್ಟು ದೇಶದ ಗಡಿಯನ್ನು ಕಾಯುತ್ತಿದ್ದಾರೆ. ಕೊಡಗಿನಲ್ಲಿ ಪ್ರತಿ ಮನೆಯಲ್ಲೂ ಒಬ್ಬ ಯೋಧರಿದ್ದಾರೆ. ಆದರೆ, ದೇಶದೊಳಗೆ ಭಾರತೀಯರ ಒಗ್ಗಟ್ಟು ಕಡಿಮೆ ಮಾಡುವವರ ಮಾತುಗಳನ್ನು ಕೇಳಿದರೆ ನನಗೆ ಬೇಸರವಾಗುತ್ತದೆ ಎಂದು ಹೇಳಿದರು.

ನಮ್ಮ ನಾಡಿನಲ್ಲಿ ಅನೇಕ ಸಂಸ್ಥೆಗಳಿವೆ. ಆದರೆ, ಅವೆಲ್ಲಾ ಪ್ರಾದೇಶಿಕ ಅಸ್ಮಿತೆ ಬಗ್ಗೆ ಚಿಂತಿಸುತ್ತಿಲ್ಲ. ಆದರೆ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಗೆ ಜಾಗ ನೀಡಿದ್ದ ಮೈಸೂರು ಮಹಾರಾಜರನ್ನು ಸ್ಮರಿಸುತ್ತಿರುವುದು ಸಂತೋಷದ ಸಂಗತಿ. ಈ ಸಂಸ್ಥೆ ಮಾಜಿ ನಿರ್ದೇಶಕರಾದ ನಾ.ರತ್ನ ಅವರು, ಸ್ವತಃ ರಂಗಭೂಮಿಯಲ್ಲಿ ತೊಡಗಿಸಿಕೊಂಡವರು, ಸಮತೆಂತ್ತೋ ಸಂಸ್ಥೆ ಮೂಲಕ ನಾಟಕಗಳನ್ನು ಪ್ರದರ್ಶಿಸಿ ಹೆಸರುವಾಸಿಯಾಗಿದ್ದಾರೆ. ಅವರನ್ನು ಸೇರಿದಂತೆ 25 ವರ್ಷ ಈ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ ಸಿಬ್ಬಂದಿ ಹಾಗೂ ನಿವೃತ್ತಿ ಹೊಂದಿದ ಅಧಿಕಾರಿಗಳಿಗೆ ಈ ಸಮಾರಂಭದಲ್ಲಿ ಅಭಿನಂದಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದರು.

ಈ ಸಮಾರಂಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದೀರಿ, ನೀವು ಮೈಸೂರು ಅರಸರ ಕೊಡುಗೆಯನ್ನು ಓದಿ ತಿಳಿಯಬೇಕು, ಬೇರೆಯವರಿಗೂ ತಿಳಿಸಬೇಕು. ಅವರ ಆಡಳಿತದಲ್ಲಿ ಆಭರಣ ಮಾರಿ ಕೆಆರ್‌ಎಸ್ ಕಟ್ಟಿಸಿದವರು, ಮಹಿಳೆಯರ ಸಬಲೀಕರಣಕ್ಕಾಗಿ ಮಹಾರಾಣಿ ಕಾಲೇಜು, ನಾಡಿನ ಶೈಕ್ಷಣಿಕ ಪ್ರಗತಿಗಾಗಿ ಮೈಸೂರು ವಿವಿ ಹಾಗೂ ಸ್ಟೇಟ್ ಆಫ್ ಬ್ಯಾಂಕ್ ಮೈಸೂರು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರಿಗೆ ವಿದ್ಯುತ್ ಸರಬರಾಜು ಸೇರಿದಂತೆ ಅನೇಕ ಜನರಿಗೆ ಅನುಕೂಲವಾಗುವ ಸಂಸ್ಥೆಗಳನ್ನು ಸ್ಥಾಪಿಸಿ ಇಂದಿಗೂ ಜನ ಮನ್ನಣೆ ಗಳಿಸಿದ್ದಾರೆ ಎಂದರು.

ಅಲ್ಲದೆ, ಮೈಸೂರಿನ ಈಗಿನ ವಿಶಾಲ ರಸ್ತೆಗಳು ಮಹಾರಾಜರ ಕಾಲದಲ್ಲಿ ನಿರ್ಮಾಣವಾದವು. ಇದರ ಬಗ್ಗೆ ನಮ್ಮ ಇತಿಹಾಸಕಾರರು, ಶೈಕ್ಷಣಿಕ ಧುರೀಣರು, ಪಠ್ಯ–ಪುಸ್ತಕದಲ್ಲಿ ಅವರ ಸಾಧನೆ(ಮೈಸೂರು ಅರಸರು) ಬಗ್ಗೆ ಹೆಚ್ಚು ಉಲ್ಲೇಖ ಮಾಡಿಲ್ಲ. ಬದಲಾಗಿ ಲೂಟಿಕೋರರು, ದಾಳಿಕೋರರು, ದೇವಸ್ಥಾನಗಳನ್ನು ಒಡೆದವರ ಬಗ್ಗೆ ಹಾಗೂ ಈ ನೆಲದ ಬಗ್ಗೆ ಅವಹೇಳನ ಮಾಡಿದವರ ಬಗ್ಗೆ ಪುಟಗಟ್ಟಲೇ ಬರೆದು ವಿದ್ಯಾರ್ಥಿಗಳಿಗೆ ಪರಿಚಯಿಸುತ್ತಿರುವುದು ಬೇಸರದ ಸಂಗತಿ ಎಂದರು.

ಕಲಾಮಂದಿರದಲ್ಲಿ ಇತ್ತೀಚೆಗೆ ದೊಡ್ಡ ರಾಜಕಾರಣಿಯೊಬ್ಬರು ಕರಕುಶಲ ಕರ್ಮಿಗಳ ಸಭೆಯಲ್ಲಿ ಭಾಗವಹಿಸಿ, ಸಮಾಜವನ್ನು ಒಡೆಯುವಂತಹ ಮಾತಗಳನ್ನಾಡಿದ್ದಾರೆ. ಇದು ಅವರ ಘನತೆಗೆ ಶೋಭೆ ತರುವುದಿಲ್ಲ. ಅಲ್ಲದೆ, ಇತ್ತೀಚಿನ ರಾಜಕಾರಣಿಗಳು ಬಡವರಿಗೆ 10 ಕೆಜಿ ಅಕ್ಕಿ ಕೊಟ್ಟಿದ್ದೇ ಸಾಧನೆ ಎಂದು ಜಂಭ ಕೊಚ್ಚಿ ಕೊಳ್ಳುತ್ತಿದ್ದಾರೆ. ಹಾಗಾದರೆ, 10 ಕೆಜಿ ಉಚಿತ ಅಕ್ಕಿ ಪಡೆದ ಆ ಕುಟುಂಬಗಳು ಇನ್ಮುಂದೆ ಬದುಕಲಿಕ್ಕೆ ಕೆಲಸ ಮಾಡಬಾರದೇ? ಎಂದು ಪ್ರಶ್ನಿಸಿದರು.

ಹಾಗಾಗಿ ಮೈಸೂರಿನಲ್ಲಿ ನೆಲೆಸಿರುವವರು, ವಿವಿಧ ಸಂಸ್ಥೆಗಳಲ್ಲಿ ಕೆಲಸ ಮಾಡುವವರು ಮೈಸೂರು ಮಹಾರಾಜರ ಕೊಡುಗೆಗಳನ್ನು ನೆನೆಪಿಸಿಕೊಂಡು ಅವರ ಭಾವಚಿತ್ರಗಳನ್ನು ನಾವು–ನೀವೆಲ್ಲರೂ ತಮ್ಮತಮ್ಮ ಮನೆಗಳಲ್ಲಿಟ್ಟು ಪೂಜಿಸಬೇಕು ಎಂದ ಅವರು, ಮೈಸೂರಿನ ಯಾವುದೇ ಬಡಾವಣೆಗೆ ಹೋದರೂ ಕುವೆಂಪು, ತರಾಸು, ಸಿಪಿಕೆ ಹಾಗೂ ಇತರೆ ಕವಿಗಳ ಹೆಸರುಗಳನ್ನು ನಾಮಕರಣ ಮಾಡಿದ್ದಾರೆ. ಅದನ್ನು ನೋಡಿದರೆ ಮನಸ್ಸಿಗೆ ಮುದ ನೀಡುತ್ತದೆ. ಹಾಗಾಗಿ ಇಲ್ಲಿನವರು ಮೈಸೂರಿನ ನೆಲ–ಜಲ– ಕಲೆಯನ್ನು ಪ್ರೀತಿಸಿ ಎಂದು ಕಿವಿಮಾತು ಹೇಳಿದರು. ಈ ವೇಳೆ ಗೀತಾ ರಚನಾಕಾರ ವಾಸುಕಿ ವೈಭವ್, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕಿ ಡಾ.ಎಂ.ಪುಷ್ಪಾವತಿ, ಡಾ.ಎಂ. ಸಂತೋಷ್ ಉಪಸ್ಥಿತರಿದ್ದರು.



ಚಾಮರಾಜನಗರ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ 75ನೇ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮಂಗಳವಾರ ಸಂಜೆ ಜಯಲಕ್ಷ್ಮಿಪುರಂನಲ್ಲಿರುವ ಅವರ ಮನೆಗೆ ಜಂಗಲ್ ಲಾಡ್ಜ್ ಅಂಡ್ ರೆಸಾರ್ಟ್ ನಿಗಮದ ಮಾಜಿ ಅಧ್ಯಕ್ಷ ಎಂ.ಅಪ್ಪಣ್ಣ ಭೇಟಿ ನೀಡಿ, ಶುಭ ಕೋರಿದರು. ಈ ಸಂದರ್ಭದಲ್ಲಿ ಮುಖಂಡರಾದ ಲಕ್ಷ್ಮಣ್ ಸೋಮೇಶ್, ರವೀಂದ್ರ, ಜಗನ್ನಾಥ್, ಹೊನ್ನಳಿ ಮಂಜು, ಮಹದೇವಸ್ವಾಮಿ ಸೇರಿದಂತೆ ಹೆಚ್.ಡಿ.ಕೋಟೆ ತಾಲೂಕಿನ ಮುಖಂಡರು ಉಪಸ್ಥಿತರಿದ್ದರು.

ಬಿಜೆಪಿ ಜೊತೆಗಿನ ಮೈತ್ರಿ ಅಂತ್ಯ: ಬಿಹಾರ ಮುಖ್ಯಮಂತ್ರಿ ಸ್ಥಾನಕ್ಕೆ ನಿತೀಶ್‌ಕುಮಾರ್ ರಾಜೀನಾಮೆ



ಪಾಟ್ನಾ: ಬಿಹಾರದಲ್ಲಿ ತಲೆದೋರಿದ್ದ ರಾಜಕೀಯ ಬಿಕ್ಕಟ್ಟಿಗೆ ಬ್ರೇಕ್ ಬಿದ್ದಿದೆ. ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡುವ ಮೂಲಕ ನಿತೀಶ್‌ಕುಮಾರ್ ಎನ್‌ಡಿಎ ಮೈತ್ರಿಕೂಟದಿಂದ ಹೊರ ಬಂದಿದ್ದಾರೆ. ಜೆಡಿಯು ಸಂಸದರು ಮತ್ತು ಶಾಸಕರ ಸಭೆಯಲ್ಲಿ ಬಿಜೆಪಿ ಜೊತೆಗಿನ ಮೈತ್ರಿಯನ್ನು ಮುರಿದುಕೊಳ್ಳಲು ಪಕ್ಷವು ಸರ್ವಾನುಮತದಿಂದ ನಿರ್ಧಾರಕ್ಕೆ ಬಂದಿದ್ದು ನಂತರ ರಾಜ್ಯಪಾಲರನ್ನು ಭೇಟಿ ಮಾಡಿದ ನಿತೀಶ್‌ಕುಮಾರ್ ತಮ್ಮ ರಾಜೀನಾಮೆ ಪತ್ರವನ್ನು ಸಲ್ಲಿಸಿದ್ದಾರೆ. ಇದೇ ವೇಳೆ ತಮಗೆ 160 ಶಾಸಕರ ಬೆಂಬಲವಿರುವ ಪತ್ರವನ್ನು ರಾಜ್ಯಪಾಲ ಫಾಗು ಚೌಹಾಣ್ ಅವರಿಗೆ ನೀಡಿದ್ದಾರೆ. ಬಿಜೆಪಿ ಜೊತೆ ಮೈತ್ರಿ ಮುರಿದುಕೊಂಡಿರುವ ನಿತೀಶ್‌ಕುಮಾರ್ ಮತ್ತೊಮ್ಮೆ ಮಹಾಘಟಬಂಧನ್ ಮೂಲಕ ಹೊಸ ಸರ್ಕಾರ ರಚಿಸಲು ಮುಂದಾಗಿದ್ದಾರೆ. ರಾಜೀನಾಮೆ ಬಳಿಕ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರ ಮನೆಗೆ ತೆರಳಿದ ನಿತೀಶ್‌ಕುಮಾರ್ ಅವರು ಆರ್‌ಜೆಡಿ ಮುಖ್ಯಸ್ಥ ಲಾಲೂ ಪ್ರಸಾದ್ ಯಾದವ್ ಪತ್ನಿ ರಾಬ್ರಿದೇವಿ ಅವರನ್ನು ಭೇಟಿ ಮಾಡಿದರು. ಜಿತನ್‌ರಾಮ್ ಮಾಂಝಿ ನೇತೃತ್ವದ ಹಿಂದೂಸ್ತಾನಿ ಅವಾಮ್ ಮೋರ್ಚಾ ನಿತೀಶ್‌ಕುಮಾರ್ ಮತ್ತು ಮಹಾಘಟ ಬಂಧನ್‌ಗೆ ಬೇಷರತ್ ಬೆಂಬಲಿಸಿದ್ದಾರೆ.

18 ವರ್ಷ ಮೇಲ್ಪಟ್ಟವರಿಗೆ ಮುನ್ನೆಚ್ಚರಿಕೆ ಡೋಸ್ ಆಗಿ ಕೋರ್ಬೆವ್ಯಾಕ್ಸ್

ನವದೆಹಲಿ: 18 ವರ್ಷ ಮೇಲ್ಪಟ್ಟವರ ಪೈಕಿ ಕೋವಿಶೀಲ್ಡ್ ಅಥವಾ ಕೋವ್ಯಾಕ್ಸಿನ್ ಲಸಿಕೆಯ ಎರಡು ಡೋಸ್‌ಗಳನ್ನೂ ಪಡೆದುಕೊಂಡಿರುವವರಿಗೆ ಮುನ್ನೆಚ್ಚರಿಕೆ ಡೋಸ್ ಆಗಿ ಕೋರ್ಬೆವ್ಯಾಕ್ಸ್ ನೀಡಲು ಚಿಂತಿಸಲಾಗಿದ್ದು, ಕೇಂದ್ರ ಆರೋಗ್ಯ ಸಚಿವಾಲಯವು ಶೀಘ್ರವೇ ಇದಕ್ಕೆ ಅನುಮತಿ ನೀಡುವ ಸಾಧ್ಯತೆ ಇದೆ ಎಂದು ಮೂಲಗಳು ಮಂಗಳವಾರ ತಿಳಿಸಿವೆ.

ಕೋವಿಡ್–19 ಕುರಿತ ರಾಷ್ಟ್ರೀಯ ತಾಂತ್ರಿಕ ಸಲಹಾ ಸಮಿತಿಯು (ಎನ್‌ಟಿಎಜಿಐ) ಕೋರ್ಬೆವ್ಯಾಕ್ಸ್ ಲಸಿಕೆಯನ್ನು ಮುನ್ನೆಚ್ಚರಿಕೆ ಡೋಸ್ ಆಗಿ ನೀಡಲು ಶಿಫಾರಸು ಮಾಡಿದ್ದು, ಇದರ ಆಧಾರದಲ್ಲಿ ಆರೋಗ್ಯ ಸಚಿವಾಲಯ ಅನುಮತಿ ನೀಡುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ. ಕೋರ್ಬೆವ್ಯಾಕ್ಸ್ ಲಸಿಕೆಯನ್ನು ಸ್ಥಳೀಯವಾಗಿ ಅಭಿವೃದ್ಧಿಪಡಿಸಲಾಗಿದ್ದು, ಕೋವಿಡ್–19 ರೋಗ ನಿರೋಧಕ ಕಾರ್ಯಕ್ರಮದಡಿ ಸದ್ಯ 12ರಿಂದ 14 ವರ್ಷದ ಮಕ್ಕಳಿಗೆ ಇದನ್ನು ನೀಡಲಾಗುತ್ತಿದೆ. ಕೋವ್ಯಾಕ್ಸಿನ್ ಅಥವಾ ಕೋವಿಶೀಲ್ಡ್ ಪಡೆದಿದ್ದವರಿಗೆ ಪ್ರಾಯೋಗಿಕವಾಗಿ ಕೋರ್ಬೆವ್ಯಾಕ್ಸ್ ಲಸಿಕೆ ನೀಡಿದ್ದಾಗ ಅವರ ದೇಹದಲ್ಲಿ ಗಮನಾರ್ಹ ಪ್ರಮಾಣದಲ್ಲಿ ಪ್ರತಿಕಾಯಗಳು ವೃದ್ಧಿಯಾಗಿದ್ದನ್ನು ಕೋವಿಡ್–19 ಕಾರ್ಯಪಡೆ ಗಮನಿಸಿತ್ತು. ಈ ಲಸಿಕೆಯನ್ನು ಮುನ್ನೆಚ್ಚರಿಕೆ ಡೋಸ್ ಆಗಿ ನೀಡಲು ಭಾರತೀಯ ಔಷಧ ನಿಯಂತ್ರಣ ಮಹಾನಿರ್ದೇಶನಾಲಯ (ಡಿಸಿಜಿಐ) ಜೂನ್ 4ರಂದೇ ಒಪ್ಪಿಗೆ ನೀಡಿತ್ತು ಎಂದೂ ಮೂಲಗಳು ಮಾಹಿತಿ ನೀಡಿವೆ.



ಮೈಸೂರು ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕಿ(ಎಎಸ್ಪಿ)ಯಾಗಿ ಇತ್ತೀಚೆಗೆ ಅಧಿಕಾರ ವಹಿಸಿಕೊಂಡಿರುವ ಡಾ.ನಂದಿನಿ ಅವರನ್ನು ವಿಶ್ವಕರ್ಮ ಸಮಾಜದ ಮುಖಂಡರು, ಅರೆಮಾದನಹಳ್ಳಿ ಶಾಖಾ ಮಠದ ಕಾರ್ಯಾಧ್ಯಕ್ಷರೂ ಆದ ನಿವೃತ್ತ ಡಿವೈಎಸ್ಪಿ ಎಂ.ಸಿ.ಮರಿಸ್ವಾಮಿ ಮತ್ತಿತರ ಗಣ್ಯರು ಅಭಿನಂದಿಸಿದರು. ಈ ವೇಳೆ ನಾಗೇಂದ್ರ ಕುಮಾರ್, ರಂಗಪ್ಪ ಆಚಾರ್, ನಂಜುಂಡಸ್ವಾಮಿ, ಈಶ್ವರಾಚಾರ್, ರುದ್ರಣ್ಣ, ಪ್ರಭುಸ್ವಾಮಿ, ಶಾಂತರಾಜು, ಹಲ್ಲರೆ ಬಸವರಾಜು, ನಾಗರಾಜು, ಮಾವಿನಹಳ್ಳಿ ಲೋಕೇಶ್, ಗೌತಮ್, ಮಂಜುಳಾ, ಸೌಮ್ಯಾ ಅರುಣ್ ಇದ್ದರು.

ಬಾಲಚಂದರ್‌ಗೆ ಪಿಹೆಚ್.ಡಿ ಪದವಿ



ಮೈಸೂರು, ಆ.9–ಡಾ.ಎಸ್. ಶಿವಣ್ಣ ಅವರ ಮಾರ್ಗದರ್ಶನದಲ್ಲಿ ಎಂ.ಎಸ್. ಬಾಲಚಂದರ್ ಅರ್ಥಶಾಸ್ತ್ರ ವಿಷಯದಲ್ಲಿ ಸಂಶೋಧಿಸಿ ಸಾದರಪಡಿಸಿದ ಮಹಾಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾಲಯ ಪಿಹೆಚ್.ಡಿ ಪದವಿ ನೀಡಿದೆ.

ಎಂ.ಪುಟ್ಟಸ್ವಾಮಿ ನಿಧನ



ಮೈಸೂರು, ಆ.9– ಮೈಸೂರು ರೈಲ್ವೆ ಕಾರ್ಯಾಗಾರದ ನಿವೃತ್ತ ಉದ್ಯೋಗಿ ಹಾಗೂ ಕಬಡ್ಡಿ ಪಟು, ಮೈಸೂರಿನ ಅರವಿಂದನಗರದ 18ನೇ ಕ್ರಾಸ್ ನಿವಾಸಿ ಎಂ.ಪುಟ್ಟಸ್ವಾಮಿ(70) ಅವರು ಮಂಗಳವಾರ ನಿಧನರಾದರು. ಮೃತರು ಪತ್ನಿ ಕಲಾವತಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ(ಬುಧವಾರ) ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಲ್ಲಿರುವ ಹೂಳುವ ಸ್ಮಶಾನದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: 23/MYS/2022
ದಿನಾಂಕ: 04-08-2022

ಈ ಕೆಳ ಸೂಚಿಸಿರುವ ಕಾಮಗಾರಿಗಳಿಗೆ ಇ–ಟೆಂಡರ್ ಗಳನ್ನು ಆಹ್ವಾನಿಸಿದ್ದಾರೆ:

ಕ್ರಸಂ	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಸಹಾಯಕ ವಿಭಾಗೀಯ ಇಂಜಿನಿಯರ್ / ಅರಸೀಕೆರೆ ವಿಭಾಗದ ಬಿ–2 ವಲಯದ ಅಡಿಯಲ್ಲಿ ಸಂಪಿಗೆರೋಡ್(ಹೊರತುಪಡಿಸಿ) – ಬಿರೂರು (ಒಳಪಡಿಸಿ) 01.07.2022 ರಿಂದ 30.06.2023 ವರೆಗಿನ ಅವಧಿಯ ಕಾಲಕ್ಕೆ ಸಿಮೆಂಟ್, ಕಬ್ಬಿಣ ಹಾಗೂ ಇತರ ಸಾಮಗ್ರಿಗಳ ಪೂರೈಕೆ ಹಾಗೂ ಕೆಲಸಗಳಿಗಾಗಿ ವಲಯ ಗುತ್ತಿಗೆ.	ರೂ. 1,01,25,000/-
2	ಸಹಾಯಕ ವಿಭಾಗೀಯ ಇಂಜಿನಿಯರ್ / ಶಿವಮೊಗ್ಗ ಟೌನ್ ವಿಭಾಗದ ಬಿ–1 ವಲಯದ ಅಡಿಯಲ್ಲಿ ಬಿರೂರು (ಹೊರತುಪಡಿಸಿ) – ತಾಳಗುಪ್ಪ ಹಾಗೂ ಕಡೂರು (ಹೊರತುಪಡಿಸಿ) – ಚಿಕ್ಕಮಗಳೂರು 01.07.2022 ರಿಂದ 30.06.2023 ವರೆಗಿನ ಅವಧಿಯ ಕಾಲಕ್ಕೆ ಸಿಮೆಂಟ್, ಕಬ್ಬಿಣ ಹಾಗೂ ಇತರ ಸಾಮಗ್ರಿಗಳ ಪೂರೈಕೆ ಹಾಗೂ ಕೆಲಸಗಳಿಗಾಗಿ ವಲಯ ಗುತ್ತಿಗೆ.	ರೂ. 1,68,75,000/-
3	ಎ–6 ವಲಯದ ಅಡಿಯಲ್ಲಿ ಹಾಸನ (ಹೊರತುಪಡಿಸಿ) – ಹಾಡೀಲ್ (ಹೊರತುಪಡಿಸಿ) ಮತ್ತು ಎ–7 ವಲಯದ ಅಡಿಯಲ್ಲಿ (ಸಕಲೇಶಪುರ–ಸುಬ್ರಹ್ಮಣ್ಯ ರೋಡ್ ವಿಭಾಗ) 01.07.2022 ರಿಂದ 30.06.2023 ವರೆಗಿನ ಅವಧಿಯ ಕಾಲಕ್ಕೆ ಸಿಮೆಂಟ್, ಕಬ್ಬಿಣ ಹಾಗೂ ಇತರ ಸಾಮಗ್ರಿಗಳ ಪೂರೈಕೆ ಹಾಗೂ ಕೆಲಸಗಳಿಗಾಗಿ ವಲಯ ಗುತ್ತಿಗೆ.	ರೂ. 1,68,75,000/-
4	ಎ ವಲಯದ ಅಡಿಯಲ್ಲಿ (ಮೈಸೂರು ಹೆರಿಟೇಜ್ ಸಿಬ್ಬಂದಿ ಮತ್ತು ವಿಭಾಗೀಯ ಕಚೇರಿ) 01.07.2022 ರಿಂದ 30.06.2023 ವರೆಗಿನ ಅವಧಿಯ ಕಾಲಕ್ಕೆ ಸಿಮೆಂಟ್, ಕಬ್ಬಿಣ ಹಾಗೂ ಇತರ ಸಾಮಗ್ರಿಗಳ ಪೂರೈಕೆ ಹಾಗೂ ಕೆಲಸಗಳಿಗಾಗಿ ವಲಯ ಗುತ್ತಿಗೆ.	ರೂ. 1,01,25,000/-
5	ಉಪ–ಕಾಮಗಾರಿ–1: ಮೈಸೂರು– ಎಲಿಯೂರು ವಿಭಾಗ: ಎಲಿಯೂರು ಮತ್ತು ಪ್ಯಾಡರಹಳ್ಳಿ ನಿಲ್ದಾಣಗಳ ಎರಡೂ ಕಡೆಗಳಲ್ಲಿ ಬರುವ ಡೌನ್ ಲೈನ್‌ನಲ್ಲಿ ಕಿಮೀ. 104/200–105/700 ಮಧ್ಯದಲ್ಲಿ ವರ್ಟಿಕಲ್ ಕಟಿಂಗ್ ಮೇಲೆ ರಕ್ಷಣೆಯನ್ನು ಒದಗಿಸುವ ಕೆಲಸ. ಉಪ–ಕಾಮಗಾರಿ–2: ಎಲಿಯೂರು ಮತ್ತು ಪ್ಯಾಡರಹಳ್ಳಿ ನಿಲ್ದಾಣಗಳ ಎರಡೂ ಕಡೆಗಳಲ್ಲಿ ಬರುವ ಡೌನ್ ಲೈನ್‌ನಲ್ಲಿ ಕಿಮೀ. 104/200–105/700 ಮಧ್ಯದಲ್ಲಿ ಗ್ಯಾಲ್ವನೈಸ್ ಮಾಡಿದ ಸ್ಟೀಲ್ ವಯರ್ ರೋಪ್ ನೆಟ್‌ನೊಂದಿಗೆ ಚೈನ್–ಲಿಂಕ್ ಮೆಶ್ ನೆಟ್ಟಿಂಗ್ ಕೆಲಸ.	ರೂ. 2,27,25,820/-
6	ಅರಸೀಕೆರೆ: ಚಾಮರಾಜನಗರ ಇವನ್‌ನಿಯಲ್ಲಿ ಪ್ರಸ್ತಾಪಿಸಿದ ಕನೆಕ್ಟಿಂಗ್ ರಸ್ತೆ ನಂ. 4, 5 ರಿಂದ ಮುಖ್ಯ ರಸ್ತೆಯ ಕಡೆಗೆ ಹಾಗೂ ಅರಸೀಕೆರೆಯಲ್ಲಿ ಯಾರ್ಡ್ ಮರುವಿನ್ಯಾಸದ ಹೆಚ್ಚುವರಿ ಕೆಲಸದ ಅವಶ್ಯಕತೆ.	ರೂ. 4,16,97,949/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 26-08-2022, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಇಂಜಿನಿಯರ್/ಸಂಯೋಜನೆ ಮೈಸೂರು

PUB/287/AAD/PRB/SWR/2022-23

S.W.Railways　SWRRLY　SWRRLY



ಕತ್ರೋರ್ಜೆ ಬಳಿ ರಾಷ್ಟ್ರೀಯ ಹೆದ್ದಾರಿಗೆ ಬೆಟ್ಟ ಕುಸಿಯುವ ಆತಂಕ

ಮಡಿಕೇರಿ–ಮಂಗಳೂರು ಮಾರ್ಗ ಬಂದ್

● ಭಾರೀ ಬಿರುಕಿನೊಂದಿಗೆ ಎರಡು ಅಡಿ ಕುಸಿದಿರುವ ಬೆಟ್ಟ ● ತುರ್ತು ಪರಿಸ್ಥಿತಿಗೆ ಸಜ್ಜಾದ ಹಿಟಾಚಿ, ಲಾರಿಗಳು

ಮಡಿಕೇರಿ, ಆ.9– ಮಂಗಳೂರು ರಾಷ್ಟ್ರೀಯ ಹೆದ್ದಾರಿ ಕುಸಿಯುವ ಸಂಭವವಿರುವುದರಿಂದ ಮಂಗಳವಾರ ರಾತ್ರಿಯಿಂದ ವಾಹನ ಸಂಚಾರ ಬಂದ್ ಮಾಡಿ ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ್ ಮಂಗಳವಾರ ರಾತ್ರಿ ಆದೇಶ ಹೊರಡಿಸಿದ್ದಾರೆ.

ಹೆದ್ದಾರಿಯಲ್ಲಿ ಮಣ್ಣು ಕುಸಿತದ ಪರಿಣಾಮ ಮಡಿಕೇರಿ–ಮಂಗಳೂರು ರಸ್ತೆ ಸಂಚಾರವನ್ನು ರಾತ್ರಿ 9 ಗಂಟೆಯಿಂದ ನಾಳೆ (ಬುಧವಾರ) ಬೆಳಗ್ಗೆ 6.30 ಗಂಟೆವರೆಗೂ ಎಲ್ಲಾ ವಾಹನ ಸಂಚಾರ ಬಂದ್ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ. ಹೆದ್ದಾರಿ ಬಂದ್ ಮಾಡುವಂತೆ ರಾಷ್ಟ್ರೀಯ ಹೆದ್ದಾರಿ ಸಹಾಯಕ ಇಂಜಿನಿಯರ್ ಕೊಡಗು ಜಿಲ್ಲಾಧಿಕಾರಿಗೆ ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಈ ಆದೇಶ ಹೊರಡಿಸಲಾಗಿದೆ.

ಮದೆನಾಡು ಬಳಿ ಗುಡ್ಡ ಕುಸಿತದ ಆತಂಕವಿದ್ದು, ವಾಹನ ಪ್ರಯಾಣಿಕರಿಗೆ ಅಪಾಯ ಸಾಧ್ಯತೆ ಹಿನ್ನೆಲೆಯಲ್ಲಿ ರಸ್ತೆ ಸಂಚಾರ ಬಂದ್ ಮಾಡಿ ಆದೇಶ ಹೊರಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಆದೇಶದಲ್ಲಿ ತಿಳಿಸಿದ್ದಾರೆ. ಕೊಡಗು ಜಿಲ್ಲೆಯಲ್ಲಿ ಕಳೆದ ಒಂದು ವಾರದಿಂದ ಅಬ್ಬರಿಸಿದ್ದ ವರುಣ ಸ್ವಲ್ಪ ಶಾಂತವಾಗಿದೆಯಾದರೂ, ಮದೆನಾಡು ಸಮೀಪದ ಕತ್ರೋರ್ಜೆ ಬಳಿ ರಾಷ್ಟ್ರೀಯ ಹೆದ್ದಾರಿ ಬದಿ ಭಾರೀ ಬೆಟ್ಟ ಕುಸಿತವಾಗುವ ಸಾಧ್ಯತೆಗಳು ಹೆಚ್ಚಾಗಿರುವ ಕಾರಣ ಈ ನಿರ್ಧಾರ ಕೈಗೊಳ್ಳಲಾಗಿದೆ.

2018ರ ಮಳೆಗಾಲದಲ್ಲಿ ಭಾರೀ ಭೂ ಕುಸಿದು ರಾಷ್ಟ್ರೀಯ ಹೆದ್ದಾರಿ 275 ಸಂಪೂರ್ಣವಾಗಿ ಕೊಚ್ಚಿ ಹೋದ ಸ್ಥಳದಲ್ಲೇ ಇದೀಗ ಬೆಟ್ಟದಲ್ಲಿ ಭಾರೀ ಬಿರುಕು ಮೂಡಿ 2 ಅಡಿಗಳಷ್ಟು ಬೆಟ್ಟ ತಗ್ಗಲ್ಪಟ್ಟಿದೆ. ಕುಸಿದು ಬೀಳುವ ಹಂತದಲ್ಲಿರುವ ಬೆಟ್ಟದ ಕೆಳಭಾಗ ಅಲ್ಪ ಪ್ರಮಾಣದಲ್ಲಿ ಕುಸಿತವಾಗಿದ್ದು, ಹೆದ್ದಾರಿ ಬದಿಯ ಚರಂಡಿ ಮಣ್ಣಿನಿಂದ ಮುಚ್ಚಿ ಹೋಗಿದೆ. ಯಾವುದೇ ಕ್ಷಣದಲ್ಲೂ ಭಾರಿ ಭೂ ಕುಸಿಯುವ ಖಚಿತತೆ ಇರುವ ಕಾರಣ ಸ್ಥಳದಲ್ಲೇ ಬೃಹತ್ ಹಿಟಾಚಿ



ಯಂತ್ರಗಳನ್ನು ಸನ್ನದ್ಧ ಸ್ಥಿತಿಯಲ್ಲಿಡಲಾಗಿದೆ. ನೂರಾರು ಲೋಡ್‌ಗಳಷ್ಟು ಮಣ್ಣು ರಾಷ್ಟ್ರೀಯ ಹೆದ್ದಾರಿಗೆ ಬೀಳಲಿದ್ದು, ಕೆಲ ಕಾಲ ಹೆದ್ದಾರಿ ಸಂಚಾರ ಬಂದ್ ಆಗಲಿದೆ. ಹೀಗಾಗಿ ಮಣ್ಣು ಸಾಗಿಸಲು ಬೇಕಾದ ಲಾರಿಗಳನ್ನು ಕೂಡ ಸಿದ್ಧವಾಗಿರಿಸಲಾಗಿದೆ. ಭೂ ಕುಸಿಯುವ ಸ್ಥಳದಲ್ಲಿ ಹಾದು ಹೋಗಿರುವ ವಿದ್ಯುತ್ ಕಂಬಗಳನ್ನು ಚೆಸ್ಕಾಂ ಇಲಾಖೆ ತೆರವು ಮಾಡುತ್ತಿದ್ದು ಜೋಡುಪಾಲ, ಕತ್ರೋರ್ಜೆ, ಕೊಯನಾಡು ವ್ಯಾಪ್ತಿಯಲ್ಲಿ ವಿದ್ಯುತ್ ಸಂಚಾರ ಕಡಿತವಾಗಿದೆ.

ಚೆಕ್‌ಪೋಸ್ಟ್: ರಾಷ್ಟ್ರೀಯ ಹೆದ್ದಾರಿ 275 ಬದಿಯಲ್ಲೇ ಭೂ ಕುಸಿಯುವ ಸಾಧ್ಯತೆ ಇರುವ ಕಾರಣ ಬೆಟ್ಟದ ತಪ್ಪಲಿನಲ್ಲಿ ಪ್ರಸ್ತುತ ಬ್ಯಾರಿಕೇಡ್‌ಗಳನ್ನು ಅಳವಡಿಸಿ ವಾಹನ ಸವಾರರಿಗೆ ಮುನ್ನೆಚ್ಚರಿಕೆ ನೀಡಲಾಗುತ್ತಿದೆ. ಮುಂಜಾಗ್ರತಾ ಕ್ರಮವಾಗಿ ಗುಡ್ಡದ ಕೆಳಭಾಗದ ಎರಡೂ ಬದಿಯಲ್ಲಿ ಪೊಲೀಸ್ ಚೆಕ್‌ಪೋಸ್ಟ್ ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ. ಯಾವುದೇ ಕ್ಷಣದಲ್ಲೂ ಗುಡ್ಡ ಕುಸಿಯುವ ಹಂತದಲ್ಲಿರುವುದರಿಂದ ಸ್ಥಳದಲ್ಲಿ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿ ವಾಹನ ಸಂಚಾರವನ್ನು ತಡೆಹಿಡಿಯಲಾಗಿದೆ.

ಶಾಸಕ ಬೋಪಯ್ಯ ಭೇಟಿ: ಇದಕ್ಕೂ ಮುನ್ನ ಇಂದು ಬೆಳಗ್ಗೆ ಶಾಸಕ ಕೆ.ಜಿ. ಬೋಪಯ್ಯ ಅವರು ಭೂ ಕುಸಿಯುವ ಹಂತಕ್ಕೆ ತಲುಪಿರುವ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸ್ಥಳದಲ್ಲಿ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಗುಡ್ಡ ಕುಸಿದ ತಕ್ಷಣವೇ ಮಣ್ಣು ತೆರವು ಕಾರ್ಯಾಚರಣೆ ನಡೆಸಬೇಕು. ಅದಕ್ಕಾಗಿ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಹೈವೇ ಪ್ರಾಧಿಕಾರದ ಇಂಜಿನಿಯರ್‌ಗಳಿಗೆ ಸೂಚಿಸಿದರು.

ಪರ್ಯಾಯ ಮಾರ್ಗವಿಲ್ಲ: ಸುದ್ದಿಗಾರರೊಂದಿಗೆ ಮಾತನಾಡಿದ ಕೆ.ಜಿ. ಬೋಪಯ್ಯ, ಮಡಿಕೇರಿ–ಮಂಗಳೂರು ಹೆದ್ದಾರಿಯಲ್ಲಿ ಈ ಹಿಂದೆಯೇ ಭೂ ಕುಸಿತವಾಗಿತ್ತು. ಸಣ್ಣ ಪ್ರಮಾಣ ಗುಡ್ಡ ಕುಸಿದ ಹಿನ್ನೆಲೆಯಲ್ಲಿ ತಕ್ಷಣವೇ ಮಣ್ಣು ತೆರವು ಮಾಡಿ ವಾಹನಗಳ ಸಂಚಾರಕ್ಕೆ ಅವಕಾಶ ಮಾಡಲಾಗಿತ್ತು. ಆದರೆ ಇದೀಗ ಕತ್ರೋರ್ಜೆ ಬಳಿ ಕುಸಿಯುವ ಹಂತದಲ್ಲಿರುವ ಗುಡ್ಡ ಕುಸಿತವಾದಲ್ಲಿ ಅನಾಹುತ ಘಟಿಸುವ ಎಲ್ಲಾ ಸಾಧ್ಯತೆ ಇದೆ. ಎಷ್ಟು ಪ್ರಮಾಣದಲ್ಲಿ ಮಣ್ಣು ಕುಸಿಯಲಿದೆ ಎಂದು ಅಂದಾಜಿಸಲು ಸಾಧ್ಯವಾಗುತ್ತಿಲ್ಲ. ಭೂ ಕುಸಿದು ರಸ್ತೆ ಕೊಚ್ಚಿ ಹೋದಲ್ಲಿ ಪರ್ಯಾಯ ರಸ್ತೆಯೂ ಇಲ್ಲವಾಗುತ್ತದೆ. ಕರಿಕೆ ರಸ್ತೆಯಲ್ಲೂ 10 ಕಡೆಗಳಲ್ಲಿ ಭೂ ಕುಸಿತವಾಗಿದೆ. ಆ ರಸ್ತೆಯೂ ಅಪಾಯದಲ್ಲಿದೆ. ಇದರಿಂದ ಮಡಿಕೇರಿ–ಮಂಗಳೂರು ಕಡೆಗೆ ತೆರಳಲು ಬೇರೆ ಯಾವುದೇ ರಸ್ತೆ ಸಂಪರ್ಕ ಇಲ್ಲವಾಗುತ್ತದೆ ಎಂದು ಶಾಸಕ ಬೋಪಯ್ಯ ಆತಂಕ ವ್ಯಕ್ತಪಡಿಸಿದರು. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸಹಾಯಕ ಕಾರ್ಯಪಾಲಕ ಅಭಿಯಂತರ ಮುರುಗೇಶ್ ಮಾತನಾಡಿ, ಯಾವ ಕ್ಷಣದಲ್ಲಿ ಭೂ ಕುಸಿಯಲಿದೆ ಎಂದು ಹೇಳಲಾಗದು. ಹೀಗಾಗಿ ಸ್ಥಳದಲ್ಲಿ ಬ್ಯಾರಿಕೇಡ್ ಅಳವಡಿಸಲಾಗಿದೆ. ರಸ್ತೆ ಅಗಲವಾಗಿರುವ ಕಾರಣ ಭಯದ ಆತಂಕವಿಲ್ಲ ಎಂದರು. ಈ ಎಲ್ಲಾ ಕಾರಣಗಳಿಂದ ಜಿಲ್ಲಾಧಿಕಾರಿಗಳು ಮಂಗಳವಾರ ರಾತ್ರಿ ಈ ಆದೇಶ ಹೊರಡಿಸಿದ್ದು, ವಾಹನಗಳು ಸಾಲುಗಟ್ಟಿ ನಿಂತಿವೆ.

ಕೊಡಗಿನ ಮಳೆ ಹಾನಿ ಪ್ರದೇಶಗಳಿಗೆ ಸಣ್ಣ ನೀರಾವರಿ ಸಚಿವ ಜೆ.ಸಿ. ಮಾಧುಸ್ವಾಮಿ ಭೇಟಿ

ಶಾಸಕರು, ಅಧಿಕಾರಿಗಳಿಂದ ಮಾಹಿತಿ ಸಂಗ್ರಹ



ಮಡಿಕೇರಿ, ಆ.9– ಭಾರೀ ಮಳೆಯಿಂದ ಅತೀವ ಹಾನಿಗೆ ತುತ್ತಾಗಿರುವ ಮಡಿಕೇರಿ ತಾಲೂಕಿನ ವಿವಿಧ ಗ್ರಾಮಗಳಿಗೆ ಭೇಟಿ ನೀಡಿದ ಸಣ್ಣ ನೀರಾವರಿ ಸಚಿವ ಜೆ.ಸಿ. ಮಾಧುಸ್ವಾಮಿ ಪರಿಶೀಲನೆ ನಡೆಸಿದರು.

ಸಂಪಾಜೆ ಕೊಯನಾಡುನಲ್ಲಿರುವ ಕಿಂಡಿ ಅಣೆಕಟ್ಟು, ಮಾರ್ಪಡ್ಕ ಸಂಪರ್ಕ ಸೇತುವೆಯ ಮೋರಿ, ದಬ್ಬಡ್ಕ ಗ್ರಾಮ ಸೇತುವೆಗಳಿಗೆ ಆಗಿರುವ ಹಾನಿಯ ಕುರಿತು ಶಾಸಕರು, ಜಿಲ್ಲಾಧಿಕಾರಿಗಳು ಮತ್ತು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳಿಂದ ಅವರು ಮಾಹಿತಿ ಪಡೆದರು. ಕಿಂಡಿ ಅಣೆಕಟ್ಟೆಗೆ ಮೊದಲ ಮಹಾ ಮಳೆಗೆ ಭಾರೀ ಪ್ರಮಾಣದಲ್ಲಿ ಮರದ ದಿಮ್ಮಿಗಳು ಕೊಚ್ಚಿ ಬಂದು ಕೆಲವು ಮನೆಗಳಿಗೆ ನೀರು ಹರಿದಿದೆ. ಮರ ತೆರವು ಬಳಿಕ ನದಿ ನೀರು ಸರಾಗವಾಗಿ ಹರಿಯುತ್ತಿದೆ ಎಂದು ಶಾಸಕರು ಮಾಹಿತಿ ನೀಡಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಮಾಧುಸ್ವಾಮಿ, ಕೊಯನಾಡು ಪ್ರವಾಹಕ್ಕೆ ಕಿಂಡಿ ಅಣೆಕಟ್ಟು ಕಾರಣವಲ್ಲ, ನಿರೀಕ್ಷೆಗೂ ಮೀರಿ ಮಳೆ ಸುರಿದು ನದಿ ಉಕ್ಕಿ ಹರಿದಿದೆ. ಸಹಜವಾಗಿಯೇ ಅಲ್ಪ ಪ್ರಮಾಣದ ಹಾನಿಯಾಗಿದೆ. ಹೀಗಾಗಿ ನೀರು ಸರಾಗವಾಗಿ ಹರಿಯುವಂತೆ ಅಣೆಕಟ್ಟೆಯ ತಂತ್ರಜ್ಞಾನದಲ್ಲಿ ಬದಲಾವಣೆ ಮಾಡಲು ಸೂಚಿಸಲಾಗಿದೆ ಎಂದರು. ನೀರಿನ ಮೂಲಗಳಿಂದ ಕೆರೆಕಟ್ಟೆ ತುಂಬಿಸುವ ಯೋಜನೆ ಒಂದು ಹೊಸಗುತ್ತಿಯಲ್ಲಿ ನಡೆಯುತ್ತಿದೆ. 7 ಕೋಟಿ ರೂ. ವೆಚ್ಚದ ಯೋಜನೆ ಇದಾಗಿದೆ. ಜಿಲ್ಲೆಯ ಕೆರೆಗಳ ಅಭಿವೃದ್ಧಿಗೆ 10 ಕೋಟಿ ರೂ.ಗಳ ಅನುದಾನ ಬಿಡುಗಡೆ ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಶಾಸಕ ಅಪ್ಪಚ್ಚು ರಂಜನ್ ಮಾತನಾಡಿ, ಸೋಮವಾರಪೇಟೆ ತಾಲೂಕಿನ ಆಲೂರು ಸಿದ್ದಾಪುರ ಹೊಸಗುತ್ತಿಯಲ್ಲಿ ಕೆರೆಗೆ ನೀರು ತುಂಬಿಸುವ ಯೋಜನೆಗೆ 20 ವರ್ಷಗಳಿಂದ ಬೇಡಿಕೆ ಇತ್ತು. ಈ ಯೋಜನೆಯ ಅನುಷ್ಠಾನ ಸಚಿವರು ತಕ್ಷಣವೇ ಅನುಮೋದನೆ ನೀಡಿದ್ದಾರೆ. ಹೀಗಾಗಿ ಅವರಿಗೆ ಅಭಿನಂದನೆ ಸಲ್ಲಿಸುವುದಾಗಿ ಹೇಳಿದರು.

ಶಾಸಕ ಕೆ.ಜಿ.ಬೋಪಯ್ಯ ಮಾತನಾಡಿ, ಕೊಯನಾಡು ಕಿಂಡಿ ಅಣೆಕಟ್ಟೆಗೆ ಮರದ ದಿಮ್ಮಿಗಳು ತೇಲಿ ಬಂದು ನದಿ ನೀರು ಉಕ್ಕಿ ಹರಿಯುವಂತಾಗಿತ್ತು. ಇದೀಗ ಪರಿಸ್ಥಿತಿ ಸಹಜ ಸ್ಥಿತಿಯಲ್ಲಿದೆ ಎಂದು ಹೇಳಿದರು. ಕಲ್ಲುಗುಂಡಿಯಲ್ಲಿ ಯಾವುದೇ ಅಣೆಕಟ್ಟು ಇಲ್ಲ, ಹೀಗಿದ್ದರೂ ಕಲ್ಲುಗುಂಡಿ 3 ಬಾರಿ ಪ್ರವಾಹಕ್ಕೆ ತುತ್ತಾಯಿತು. ನಿರೀಕ್ಷೆಗೂ ಮೀರಿ ಮಳೆ ಸುರಿದು ನೀರು ಹರಿದ ಪರಿಣಾಮ ಪ್ರವಾಹ ಉಂಟಾಗಿದೆ ಎಂದು ಮಾಹಿತಿ ನೀಡಿದರು. ಮಳೆಹಾನಿ ಪ್ರದೇಶ ವೀಕ್ಷಣೆಯ ಸಂದರ್ಭ ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ, ಉಪ ವಿಭಾಗಾಧಿಕಾರಿ ಯತೀಶ್ ಉಲ್ಲಾಳ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಅಯ್ಯಪ್ಪ, ಮಡಿಕೇರಿ ತಹಶೀಲ್ದಾರ್ ಮಹೇಶ್, ನೀರಾವರಿ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ಜಯಮಣಿ ನಿಧನ

ಸೋಮವಾರಪೇಟೆ, ಆ.9– ಸಮೀಪದ ಕುಸುಬೂರು ಗ್ರಾಮದ ಕಾಟ್ನಮನೆ ಕೆ.ಕೆ. ಜಯಮಣಿ(77) ಮಂಗಳವಾರ ನಿಧನರಾದರು. ಬೇಳೂರು ಗ್ರಾಮ ಪಂಚಾಯಿತಿ



ಮಾಜಿ ಉಪಾಧ್ಯಕ್ಷ ಪ್ರದೀಪ್ ಸೇರಿದಂತೆ ಕುಟುಂಬಸ್ಥರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನಡೆಯಿತು.

ಗುಂಡ್ಲುಪೇಟೆಯಲ್ಲಿ ಕಾಂಗ್ರೆಸ್ ಪಾದಯಾತ್ರೆ

ಆ.15, ಬೆಂಗಳೂರಿನಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವ ವಿಜೃಂಭಣೆ ಆಚರಣೆ: ಆರ್. ಧ್ರುವನಾರಾಯಣ್



ಗುಂಡ್ಲುಪೇಟೆ, ಆ.9–ಪಟ್ಟಣದ ಡಿ.ದೇವರಾಜ ಅರಸು ಕ್ರೀಡಾಂಗಣದಲ್ಲಿ ಕಾಂಗ್ರೆಸ್‌ನಿಂದ 'ಭಾರತಕ್ಕಾಗಿ ಸ್ವಾತಂತ್ರ್ಯ ನಡಿಗೆ' ಪಾದಯಾತ್ರೆಗೆ ನಗಾರಿ ಬಾರಿಸುವ ಮೂಲಕ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹನೀಯರಿಗೆ ಗೌರವಾರ್ಥ ಕಾಂಗ್ರೆಸ್‌ನಿಂದ ಆ.15ರಂದು ಬೆಂಗಳೂರಿನಲ್ಲಿ ಅಮೃತ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ರಾಷ್ಟ್ರೀಯ ಭಾವೈಕ್ಯತೆ ಅಂಗವಾಗಿ ಕಾಂಗ್ರೆಸ್ ರಾಜ್ಯದ ಪ್ರತಿ ಜಿಲ್ಲೆಯಲ್ಲಿ 75 ಕಿ.ಲೋ. ಮೀಟರ್ ಪಾದಯಾತ್ರೆ ನಡೆಸುತ್ತಿದೆ. ತಾಲೂಕಿನಲ್ಲಿ ಪಟ್ಟಣದಿಂದ ಲಕ್ಕೂರು ಗೇಟ್‌ವರೆಗೆ ಪಾದಯಾತ್ರೆ ನಡೆಸಲಾಗುತ್ತಿದೆ. ಬೆಂಗಳೂರಿನ ರೈಲ್ವೇ ನಿಲ್ದಾಣದಿಂದ ನ್ಯಾಷನಲ್ ಕಾಲೇಜು ಮೈದಾನದವರೆಗೂ ನಡೆಯುವ ಪಾದಯಾತ್ರೆಯಲ್ಲಿ ಕಾಂಗ್ರೆಸ್ ರಾಷ್ಟ್ರೀಯ ಮುಖಂಡರಾದ ಪ್ರಿಯಾಂಕಾ ಗಾಂಧಿ ಭಾಗವಹಿಸುವರು. ಲಕ್ಷಕ್ಕೂ ಹೆಚ್ಚಿನ ಕಾರ್ಯಕರ್ತರು ಕೈಯಲ್ಲಿ ದೇಶದ ಬಾವುಟ ಹಿಡಿದು ಪಾದಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಬೃಹತ್ ಪಾದಯಾತ್ರೆ: ಪಟ್ಟಣದ ಡಿ.ದೇವರಾಜ ಅರಸು ಕ್ರೀಡಾಂಗಣದಿಂದ ಆರಂಭವಾದ ಬೃಹತ್ ಪಾದಯಾತ್ರೆಯಲ್ಲಿ ಸಾವಿರಾರು ಕಾರ್ಯಕರ್ತರು ದೇಶದ ಬಾವುಟ ಹಿಡಿದು ಪಾಲ್ಗೊಂಡರು. ವೀರಗಾಸೆ, ಕಂಸಾಳೆ ಮುಂತಾದ ಕಲಾ ತಂಡಗಳ ಜೊತೆ ಸಾಗಿದ ಮುಖಂಡರು ವೀರಯೋಧ ಶಿವಾನಂದ ವೃತ್ತದಲ್ಲಿ ಹುತಾತ್ಮ ಯೋಧನಿಗೆ ಗೌರವ ಸಲ್ಲಿಸಿದರು. ಪಾದಯಾತ್ರಿಗಳಿಗೆ ಪಾದಯಾತ್ರೆ ಸಾಗಿದ ಮಾರ್ಗದ ಚಿಕ್ಕತುಪ್ಪೂರು, ಶಿಂಡನಪುರ, ಕಗ್ಗಳದಹುಂಡಿ ಗೇಟ್, ಕಗ್ಗಳ ಮುಂತಾದ ಕಡೆಗಳಲ್ಲಿ ಸ್ವಾಗತ ಕೋರಿದ ಪಕ್ಷದ ಸ್ಥಳೀಯ ಕಾರ್ಯಕರ್ತರು ಹಾಗೂ ಅಭಿಮಾನಿಗಳು, ಕುಡಿಯುವ ನೀರು, ಪಾನಕ, ಉಪಹಾರ ವಿತರಿಸಿದರು.


ಈ ಸಂದರ್ಭದಲ್ಲಿ ಕೇರಳದ ಶಾಸಕ ರೋಜಿಖಾನ್, ಚಾಮರಾಜನಗರ ಶಾಸಕ ಸಿ.ಪುಟ್ಟರಂಗಶೆಟ್ಟಿ, ಹನೂರು ಶಾಸಕ ನರೇಂದ್ರ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಮರಿಸ್ವಾಮಿ, ಚಾಮುಲ್ ನಿರ್ದೇಶಕ ಹೆಚ್.ಎಸ್.ನಂಜುಂಡ ಪ್ರಸಾದ್, ಮುಖಂಡರಾದ ಹೆಚ್.ಎಂ. ಗಣೇಶ್ ಪ್ರಸಾದ್, ಬಾಲರಾಜು, ಕೆ.ಎಸ್. ಮಹೇಶ್, ಕೆರೆಹಳ್ಳಿ ನವೀನ್ ಸೇರಿದಂತೆ ಸಾವಿರಾರು ಕಾರ್ಯಕರ್ತರಿದ್ದರು.

ಪತ್ನಿ ಚುಡಾಯಿಸಿದ ಪುಂಡರಿಗೆ ಪತಿಯಿಂದ ಗೂಸಾ

ಗುಂಡ್ಲುಪೇಟೆ, ಆ.9– ಪತ್ನಿ ಚುಡಾಯಿಸಿದ ಪುಂಡರಿಗೆ ಪತಿ ಗೂಸಾ ಕೊಟ್ಟ ಪ್ರಸಂಗ ಪಟ್ಟಣದ ಚಾಮರಾಜನಗರ ರಸ್ತೆಯಲ್ಲಿ ನಡೆದಿದೆ.

ಕಂಠಪೂರ್ತಿ ಮದ್ಯ ಸೇವಿಸಿದ್ದ ಕೇರಳ ಮೂಲದ ಯುವಕರು ಕಾರಿನಲ್ಲಿ ಬಂದು ಗೃಹಿಣಿಯನ್ನು ಚುಡಾಯಿಸಿದ್ದಾರೆ. ಇದನ್ನು ಕಂಡ ಪತಿ ಕೋಪೋದ್ರಿಕ್ತನಾಗಿ ಪುಂಡರಿಗೆ ಚಪ್ಪಲಿಯಿಂದ ಥಳಿಸಿದ್ದಾನೆ. ಈ ವೇಳೆ ಪತ್ನಿಯು ಪತಿಯನ್ನು ಸಮಾಧಾನಪಡಿಸಲು ಸಾಕಷ್ಟು ಪ್ರಾಯಾಸ ಪಟ್ಟರೂ ಪತಿ ಮಾತ್ರ ಪುಂಡರಿಗೆ ತಕ್ಕ ಶಾಸ್ತಿ ಮಾಡಿದ್ದಾನೆ. ದಂಪತಿ ಮಂಡ್ಯ ಮೂಲದವರು ಎಂದು ತಿಳಿದು ಬಂದಿದೆ. ಗುಂಡ್ಲುಪೇಟೆ, ತಮಿಳುನಾಡು ಹಾಗೂ ಕೇರಳ ಗಡಿಭಾಗವಾಗಿದ್ದು, ಪ್ರವಾಸಕ್ಕೆ ಬರುವ ಯುವ ಸಮೂಹ ಕುಡಿದು ಬರುವುದು ಸಾಮಾನ್ಯವಾಗಿದೆ. ಪಟ್ಟಣ ಪೊಲೀಸರು ಇಂತಹ ಪುಂಡರಿಗೆ ತಕ್ಕ ಪಾಠ ಕಲಿಸಬೇಕಾಗಿದೆ ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಸ್ವಾತಂತ್ರ್ಯ ಅಮೃತ ಮಹೋತ್ಸವ: ಇಂದು ಜಿಲ್ಲಾ ಮಟ್ಟದ ಪಾದಯಾತ್ರೆ



ಚಾಮರಾಜನಗರ, ಆ.9– ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ ಸಂಬಂಧ ಆ.10ರಂದು ಜಿಲ್ಲಾ ಮಟ್ಟದಲ್ಲಿ ಬೃಹತ್ ಪಾದಯಾತ್ರೆ ಹಮ್ಮಿಕೊಂಡಿದ್ದು, ಕಾಂಗ್ರೆಸ್ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಮನವಿ ಮಾಡಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ ಸಂಬಂಧ ನಡೆದ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ರಾಜ್ಯ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಆದೇಶದ ಮೇರೆಗೆ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಚಾಮರಾಜನಗರ ಗುಂಡ್ಲುಪೇಟೆ ಮುಖ್ಯರಸ್ತೆಯಲ್ಲಿರುವ ಬಣ್ಣಾರಿ ಅಮ್ಮನ್ ದೇವಾಲಯದ ಆವರಣದಲ್ಲಿ ಅಂದು ಬೆಳಗ್ಗೆ ಬೃಹತ್ ಪಾದಯಾತ್ರೆಗೆ ಚಾಲನೆ ನೀಡಲಾಗುವುದು. ಪಾದಯಾತ್ರೆಯು ಶಿವಪುರ, ಉತ್ತವಳ್ಳಿ, ಮೂಡ್ಲುಪುರ ಮೂಲಕ ಸಾಗಿ ಚಾಮರಾಜನಗರ ತಲುಪಲಿದೆ. ಸಂತೇಮರಹಳ್ಳಿ ವೃತ್ತದಿಂದ ಮಸಗಾಪುರ, ಮಾದಾಪುರ, ಮಂಗಲ, ಮಹಂತಾಳಪುರ ತಲುಪಿ ಪಾದಯಾತ್ರೆ ಮುಕ್ತಾಯವಾಗಲಿದೆ. ಕಾರ್ಯಕರ್ತರಿಗೆ ಕುಡಿಯುವ ನೀರು, ತಿಂಡಿ ತಿನಿಸು, ಊಟದ ವ್ಯವಸ್ಥೆ ಮಾಡಲಾಗುವುದು. ಪಾದಯಾತ್ರೆಯಲ್ಲಿ ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಪುಟ್ಟರಂಗಶೆಟ್ಟಿ ಕೋರಿದರು. ಚಾಮರಾಜನಗರ ವೀಕ್ಷಕ ಅಕ್ಬರ್ ಆಲಿ, ಭಾಸ್ಕರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಹಮದ್ ಅಸ್ಗರ್ ಮುನ್ನಾ ಇತರರಿದ್ದರು.

ಸ್ಮಾರಕ ನಿರ್ಮಾಣದ ಬಳಿಕ ರಾಚಯ್ಯ ಜನ್ಮ ಶತಮಾನೋತ್ಸವ

ಆಲೂರಿನ ಚಿರಶಾಂತಿಧಾಮದಲ್ಲಿ ಇಂದು ಜನ್ಮದಿನದ ಸರಳ ಆಚರಣೆ



ಚಾಮರಾಜನಗರ, ಆ.9–ಜಿಲ್ಲೆಯ ಹಿರಿಯ ರಾಜಕಾರಣಿ, ಮಾಜಿ ರಾಜ್ಯಪಾಲ ಬಿ.ರಾಚಯ್ಯ ಅವರ ಜನ್ಮದಿನದ ಶತಮಾನೋತ್ಸವವನ್ನು ಆಲೂರಿನಲ್ಲಿ ಸ್ಮಾರಕ ನಿರ್ಮಾಣದ ಬಳಿಕ ವಿಜೃಂಭಣೆಯಿಂದ ಆಚರಿಸಲಾಗುವುದು. ಬುಧವಾರ (ಆ.10) ಆಲೂರಿನ ಚಿರಶಾಂತಿ ಧಾಮದಲ್ಲಿ ಎಂದಿನಂತೆ ಅವರ ಜನ್ಮದಿನವನ್ನು ಸರಳವಾಗಿ ಆಚರಣೆ ಮಾಡಲಾಗುವುದು ಎಂದು ರಾಚಯ್ಯ ಪುತ್ರ, ಮಾಜಿ ಶಾಸಕ ಎ.ಆರ್.ಕೃಷ್ಣಮೂರ್ತಿ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆ.10ಕ್ಕೆ ಬಿ.ರಾಚಯ್ಯ ಅವರು ಜನಿಸಿ 100 ವರ್ಷಗಳಾಗಲಿದೆ. ಆಲೂರಿನ ಚಿರಶಾಂತಿ ಧಾಮದಲ್ಲಿ ಸ್ಮಾರಕ ಉದ್ಘಾಟನೆ, ರಾಚಯ್ಯ ಮತ್ತು ರಾಜನೀತಿ ಪುಸ್ತಕದ ಇಂಗ್ಲಿಷ್ ಆವೃತ್ತಿ, ರಾಚಯ್ಯ ಅವರ ಕುರಿತ ಲೇಖನಗಳನ್ನು ಒಳಗೊಂಡ ಸಂಸ್ಮರಣಾ ಪುಸ್ತಕಗಳನ್ನು ಬಿಡುಗಡೆಗಳೊಂದಿಗೆ ಶತಮಾನೋತ್ಸವನ್ನು ವಿಜೃಂಭಣೆಯಿಂದ ಆಚರಿಸಲು ಸಿದ್ಧತೆ ನಡೆಸಲಾಗಿತ್ತು. ಆದರೆ ಇನ್ನೂ ಸ್ಮಾರಕ ಕೆಲಸ ಪೂರ್ಣವಾಗಿಲ್ಲ. ಅದಕ್ಕೆ ಇನ್ನೂ ಎರಡು ಮೂರು ತಿಂಗಳು ಬೇಕಾಗಬಹುದು ಎಂದರು.

2021ರ ಎಸ್‌ಆರ್ ಮೌಲ್ಯಮಾಪನ ಪ್ರಕಾರ ಇನ್ನೂ ಸ್ವಲ್ಪ ಅನುದಾನ ಬೇಕಾಗುತ್ತದೆ. ಅದನ್ನು ನಿರ್ಮಿತಿ ಕೇಂದ್ರದವರು ಅಂದಾಜಿಸಿ ಸಲ್ಲಿಸುವ ವರದಿಯನ್ನು ಜಿಲ್ಲಾಧಿಕಾರಿ ಅವರು ಸರ್ಕಾರಕ್ಕೆ ಕಳುಹಿಸಬೇಕಾಗಿದೆ ಎಂದರು. ಜಿಲ್ಲಾ ಕೇಂದ್ರದಲ್ಲಿರುವ ಬಿ.ರಾಚಯ್ಯ ಜೋಡಿ ರಸ್ತೆಗೆ ಸ್ವಾಗತ ಕಮಾನು ಹಾಗೂ ಬಿ.ರಾಚಯ್ಯ ಅವರ ಪುತ್ಥಳಿ ನಿರ್ಮಾಣ ಕಾರ್ಯ ಇನ್ನು ಆಗಿಲ್ಲ. ಈ ಹಿಂದೆ ನಗರಸಭೆ ಹಾಗೂ ಜಿಲ್ಲಾಡಳಿತ ಅನುಮೋದನೆ ಮಾಡಿರುವಂತೆ ಕೂಡಲೇ ಪುತ್ಥಳಿ ನಿರ್ಮಾಣ, ಸ್ವಾಗತ ಕಮಾನು ನಿರ್ಮಾಣ ಮಾಡಬೇಕು ಎಂದು ಒತ್ತಾಯಿಸಿದರು. ಮೈಸೂರು ವಿವಿ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಹೊಂಗನೂರು ನಂಜಯ್ಯ ಮಾತನಾಡಿದರು. ಕಿರಾತಾರ್ಜುನಮೂರ್ತಿ, ರೇವಣ್ಣ, ಮಹದೇವಪ್ರಸಾದ್ ಇದ್ದರು.

ಶತಮಾನೋತ್ಸವ ಸಂಭ್ರಮ ಕಾರ್ಯಕ್ರಮ

ಚಾಮರಾಜನಗರ: ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ



ಬುಧವಾರ(ಆ.10) ಮಧ್ಯಾಹ್ನ 2 ಗಂಟೆಗೆ ನಗರದ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿ ಮಾಜಿ ರಾಜ್ಯಪಾಲ ಬಿ.ರಾಚಯ್ಯ ಶತಮಾನೋತ್ಸವ ಸಂಭ್ರಮ ಕಾರ್ಯಕ್ರಮ ಆಯೋಜಿಸಲಾಗಿದೆ.

ಮುಡಕನಪುರ ಮಠದ ಶ್ರೀ ಷಡಕ್ಷರಿ ದೇಶಿಕೇಂದ್ರ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದು, ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸುವರು. ದಲಿತ ಮಹಾಸಭಾದ ವೆಂಕಟರಮಣಸ್ವಾಮಿ (ಪಾಪು) ಪ್ರಾಸ್ತಾವಿಕ ಭಾಷಣ ಮಾಡುವರು. ಮುಖಂಡ ಬಿ.ಬಿ.ನಿಂಗಯ್ಯ ಶತಮಾನೋತ್ಸವದ ಅಂಗವಾಗಿ ಮುಖ್ಯ ಭಾಷಣ ಮಾಡುವರು. ಕಾಡಾ ಅಧ್ಯಕ್ಷ ನಿಜಗುಣರಾಜು, ರಾಚಯ್ಯ ಪುತ್ರ, ಮಾಜಿ ಶಾಸಕ ಎ.ಆರ್.ಕೃಷ್ಣಮೂರ್ತಿ, ಎ.ಆರ್.ಬಾಲರಾಜು, ಸಿ.ಎನ್. ಬಾಲರಾಜು, ಅಂಕಣಕಾರ ಎಸ್.ಲಕ್ಷ್ಮೀನರಸಿಂಹ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಹೊಂಡಕ್ಕೆ ಬಿದ್ದು ಬಾಲಕಿ ಸಾವು



ಮಂಡ್ಯ, ಆ.9– ಕಾಲು ಜಾರಿ ಹೊಂಡಕ್ಕೆ ಬಿದ್ದು ಬಾಲಕಿಯೊಬ್ಬಳು ಸಾವನ್ನಪ್ಪಿರುವ ಘಟನೆ ತಾಲೂಕಿನ ಬಸರಾಳು ಸಮೀಪದ ತಿರುಮಲಾಪುರ ಗ್ರಾಮದಲ್ಲಿ ಮಂಗಳವಾರ ಮಧ್ಯಾಹ್ನ ನಡೆದಿದೆ.

ಗ್ರಾಮದ ನಿವಾಸಿ ದಿನೇಶ್ ಹಾಗೂ ಶಶಿಕಲಾ ದಂಪತಿಯ 2ನೇ ಪುತ್ರಿ ಸಂದ್ಯಾಶ್ರೀ (12) ಮೃತಪಟ್ಟ ಬಾಲಕಿ.

ವಿವರ: ಬಸರಾಳು ಪಬ್ಲಿಕ್ ಶಾಲೆಯಲ್ಲಿ 6ನೇ ತರಗತಿ ವ್ಯಾಸಂಗ ಮಾಡುತ್ತಿದ್ದ ಸಂದ್ಯಾಶ್ರೀ ಇಂದು ಮೊಹರಂ ಕಡೆ ದಿನ ಪ್ರಯುಕ್ತ ಶಾಲೆಗೆ ರಜಾ ಇದ್ದಿದ್ದರಿಂದ ಮನೆಯಲ್ಲಿಯೇ ಇದ್ದಳು. ಮಧ್ಯಾಹ್ನ ಆಟವಾಡಲು ಮನೆಯಿಂದ ಹೊರಹೋಗಿದ್ದ ಬಾಲಕಿ ಕಟ್ಟೆಯ ಬಳಿ ತೆರಳಿ, ಆಟವಾಡುತ್ತಿದ್ದಾಗ ಕಾಲು ಜಾರಿ ಕಟ್ಟೆಗೆ ಬಿದ್ದಿದ್ದಾಳೆ. ಬಾಲಕಿ ಕಟ್ಟೆಗೆ ಬಿದ್ದಿದ್ದನ್ನು ಗಮನಿಸಿದ ಸ್ಥಳೀಯರು ಆಕೆಯನ್ನು ರಕ್ಷಣೆ ಮಾಡಲು ಮುಂದಾದರೂ ಕೂಡ ಸಾಧ್ಯವಾಗಲಿಲ್ಲ. ಬಳಿಕ, ಗ್ರಾಮಸ್ಥರು ಬಾಲಕಿಯ ಮೃತ ದೇಹವನ್ನು ಕಟ್ಟೆಯಿಂದ ಹೊರ ತೆಗೆದರು. ದಿನೇಶ್ ಹಾಗೂ ಶಶಿಕಲಾ ದಂಪತಿಗೆ ಮೂವರು ಮಕ್ಕಳಿದ್ದು, ಸಂದ್ಯಾಶ್ರೀ 2ನೇಯವಳು. ಮಗಳ ಸಾವಿನಿಂದ ಕುಟುಂಬಸ್ಥರು ಆಘಾತಗೊಂಡಿದ್ದು, ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿದೆ. ಈ ಸಂಬಂಧ ಬಸರಾಳು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಿಎಲ್‌ಡಿ ಬ್ಯಾಂಕ್ ನಿರ್ದೇಶಕಿ ಯಮುನಾ ನಿಧನ


ಕೆ.ಆರ್.ಪೇಟೆ, ಆ.9– ತಾಲೂಕಿನ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕಿ ಯಮುನಾ(ಹೇಮಾ–36) ಮಂಗಳವಾರ ನಿಧನರಾದರು.



ಮೃತರು ಪತಿ ಕೆ.ಬಿ.ವಿವೇಕ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರು ಕಳೆದ ಹಲವು ವರ್ಷಗಳಿಂದ ತಾಲೂಕಿನ ಲಯನ್ಸ್ ಕ್ಲಬ್‌ನ ಪದಾಧಿಕಾರಿಯಾಗಿ ಹಾಗೂ ಕಳೆದ 2 ವರ್ಷಗಳಿಂದ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದರು.

ಅಂತ್ಯಕ್ರಿಯೆ ಬುಧವಾರ ಬೆಳಗ್ಗೆ 11 ಗಂಟೆಗೆ ಪಟ್ಟಣದಲ್ಲಿರುವ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ತಾಲೂಕಿನ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಸಿ. ಚಂದ್ರಪ್ಪ



ನಾಗಮಂಗಲ, ಆ.9– ತಾಲೂಕಿನ ಬ್ಯಾಡರಹಳ್ಳಿಯ ನಿವಾಸಿ ಹಾಗೂ ಹೇಮಾವತಿ ನೀರು ಬಳಕೆದಾರರ ಸಂಘದ ಅಧ್ಯಕ್ಷ ಸಿ.ಚಂದ್ರಪ್ಪ(80) ಸೋಮವಾರ ತಡರಾತ್ರಿ ನಿಧನರಾದರು.

ಮೃತರು ಪತ್ನಿ ಹೆಚ್.ಪದ್ಮಾ, ಪುತ್ರರಾದ ಬಿ.ಸಿ.ಮೋಹನ್‌ಕುಮಾರ್, ಬಿ.ಸಿ.ಬಸವರಾಜು, ಬಿ.ಸಿ.ಭಾನುಮತಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರು ನಾಗಮಂಗಲ ತಾಲೂಕಿನ ದೇವಲಾಪುರ, ಕದಬಹಳ್ಳಿ, ಮಂಡ್ಯ ತಾಲೂಕಿನ ಬಸರಾಳು, ವಿ.ಸಿ.ಫಾರಂ ಮತ್ತು ಮುನ್ಸಿಪಲ್ ಪ್ರೌಢಶಾಲೆಯಲ್ಲಿ ಸಹಶಿಕ್ಷಕರಾಗಿ, ಬೋಗಾದಿ ಪ್ರೌಢಶಾಲೆಯ ಮುಖ್ಯಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಬಳಿಕ, ಹೇಮಾವತಿ ನೀರು ಬಳಕೆದಾರರ ಸಂಘದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದರು. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಬ್ಯಾಡರಹಳ್ಳಿಯಲ್ಲಿ ಮಂಗಳವಾರ ನೆರವೇರಿತು.

ಪ್ರವಾಹ ಪೀಡಿತ ಪ್ರದೇಶಗಳಿಗೆ ಶಾಸಕ ರವೀಂದ್ರ ಶ್ರೀಕಂಠಯ್ಯ ಭೇಟಿ

ಶ್ರೀರಂಗಪಟ್ಟಣ, ಆ.9– ಪ್ರವಾಹ ಪೀಡಿತ ಪ್ರದೇಶಗಳಿಗೆ ಶಾಸಕ ರವೀಂದ್ರ ಶ್ರೀಕಂಠಯ್ಯ ಭೇಟಿ ನೀಡಿ ಬೆಳೆ ನಷ್ಟದ ಬಗ್ಗೆ ಪರಿಶೀಲಿಸಿ, ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ತಾಲೂಕಿನ ಚಿಕ್ಕಪಾಳ್ಯ, ಹಂಗರಹಳ್ಳಿ, ದೊಡ್ಡಪಾಳ್ಯ ಬಳಿಯ ಕಾವೇರಿ ನದಿ ತಗ್ಗು ಪ್ರದೇಶಗಳನ್ನು ವೀಕ್ಷಿಸಿದ ಶಾಸಕರು, ಪ್ರವಾಹದಿಂದಾಗಿ ಬೆಳೆ ನಷ್ಟದ ಜೊತೆಗೆ ಭೂಮಿ ಸವಕಳಿ ಉಂಟಾಗಿ ಅಪಾರ ಪ್ರಮಾಣ ನಷ್ಟ ಉಂಟಾಗಿದೆ. ಈಗಾಗಲೇ ಶೇ. 80 ರಷ್ಟು ರೈತರು ತಮ್ಮ ಜಮೀನುಗಳನ್ನು ಅಸನು ಮಾಡಿಕೊಂಡು ಭತ್ತ ನಾಟಿ ಕಾರ್ಯಕ್ಕೆ ಮುಂದಾಗಿದ್ದಾರೆ. ಕೆಲವರು ಈಗಾಗಲೇ ಭತ್ತದ ನಾಟಿ ಸಹ ಮಾಡಿದ್ದು, ಇದೀಗ



ಕಾವೇರಿ ನದಿಯಲ್ಲಿ ಪ್ರವಾಹ ಹೆಚ್ಚಾಗಿ ರೈತರು ನಾಟಿ ಮಾಡಿದ್ದ ಭತ್ತದ ಜಮೀನು ಹಾಗೂ ಉಳಿಮೆ ಮಾಡಿ ಸಿದ್ಧತೆ ಮಾಡಿಕೊಂಡಿದ್ದ ಜಮೀನು ಜಲಾವೃತಗೊಂಡಿವೆ. ಹಾಗಾಗಿ ಅಧಿಕಾರಿಗಳು ತಮ್ಮ ವರದಿಯಲ್ಲಿ ರೈತರಿಗೆ ಬೆಳೆ ನಷ್ಟದ ಜೊತೆಗೆ ಭೂಮಿ ಸವಕಳಿ ಬಗ್ಗೆ ಉಲ್ಲೇಖಿಸಿ ಪರಿಹಾರ ದೊರಕಿಸಿ ಕೊಡುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದರು. ಈ ವೇಳೆ ತಾಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದರು.

ಸಿದ್ದರಾಮೋತ್ಸವಕ್ಕೆ ತೆರಳಿದ್ದ ವೃದ್ಧ ಅಪಘಾತದಲ್ಲಿ ಸಾವು


ಪಾಂಡವಪುರ, ಆ.9– ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಜನ್ಮದಿನ ಅಂಗವಾಗಿ ದಾವಣಗೆರೆಯಲ್ಲಿ ಕಳೆದ ವಾರ ನಡೆದ ಸಿದ್ದರಾಮೋತ್ಸವಕ್ಕೆ ತೆರಳಿದ್ದ ಪಾಂಡವಪುರ ತಾಲೂಕಿನ ಅರಳಕುಪ್ಪೆ ಗ್ರಾಮದ ವೃದ್ಧ ಸಾವನ್ನಪ್ಪಿದ್ದು, ಇವರ ಶವ ಪತ್ತೆಯಾಗಿದೆ. ಗ್ರಾಮದ ನಿವಾಸಿ ಸ್ವಾಮಿಗೌಡ(73) ಮೃತಪಟ್ಟ ವ್ಯಕ್ತಿ. ದಾವಣಗೆರೆಯ ಹರಿಹರ ಬೈಪಾಸ್ ಬಳಿ ಅಪರಿಚಿತ ವಾಹನ ಡಿಕ್ಕಿ ಹೊಡೆದು ಇವರು ಸಾವನ್ನಪ್ಪಿರುವ ವಿಷಯ ತಡವಾಗಿ ಬೆಳಕಿಗೆ ಬಂದಿದೆ.



ವಿವರ: ಆ.3ರಂದು ಕಾರ್ಯಕ್ರಮ ಮುಗಿಸಿ ಪಾಂಡವಪುರಕ್ಕೆ ವಾಪಸ್ ಬರುವ ವೇಳೆ ಸ್ವಾಮಿಗೌಡ ಬಸ್ ತಪ್ಪಿಸಿಕೊಂಡಿದ್ದಾರೆ. ಹೆದ್ದಾರಿ ಬದಿಯಲ್ಲಿ ಬಸ್‌ಗಾಗಿ ಹುಡುಕಾಡುತ್ತಿದ್ದಾಗ ಅಪರಿಚಿತ ವಾಹನ ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಈ ಸಂಬಂಧ ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಹಿಟ್ ಅಂಡ್ ರನ್ ಪ್ರಕರಣ ದಾಖಲಾಗಿತ್ತು. ಈ ನಡುವೆ ಸ್ವಾಮಿಗೌಡ ನಾಪತ್ತೆಯಾಗಿರುವ ಸಂಬಂಧ ಅವರ ಕುಟುಂಬ ಸದಸ್ಯರು ಶ್ರೀರಂಗಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಿಸಿ, ಇವರಿಗಾಗಿ ವಾರದಿಂದ ಹುಡುಕಾಟ ನಡೆಸುತ್ತಿದ್ದರು. ಹರಿಹರ ಪೊಲೀಸರು ಕಳುಹಿಸಿದ್ದ ಭಾವಚಿತ್ರವನ್ನು ಸ್ವಾಮಿಗೌಡರ ಕುಟುಂಬ ಸದಸ್ಯರು ಗುರುತಿಸಿದ ನಂತರ ಪ್ರಕರಣ ಬೆಳಕಿಗೆ ಬಂದಿದೆ. ಮತ್ತೊಂದು ಮೃತದೇಹದ ಗುರುತು ಪತ್ತೆಯಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. 'ನಮ್ಮ ತಂದೆ ಸಿದ್ದರಾಮಯ್ಯ ಅವರ ಅಭಿಮಾನಿಯಾಗಿದ್ದರು. ಅವರ ಜನ್ಮದಿನ ಸಮಾರಂಭಕ್ಕೆ ತೆರಳುವುದಾಗಿ ತಿಳಿಸಿದ್ದರು. ಹರಿಹರ ಬಳಿ ಅಪಘಾತದಲ್ಲಿ ಮೃತಪಟ್ಟಿರುವ ಸುದ್ದಿ ಸೋಮವಾರ ರಾತ್ರಿ ತಿಳಿಯಿತು. ಮಂಗಳವಾರ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹ ಹಸ್ತಾಂತರಿಸಿದ್ದಾರೆ' ಎಂದು ಸ್ವಾಮಿಗೌಡ ಪುತ್ರ ಮಂಜುನಾಥ್ ತಿಳಿಸಿದರು.

ಅಗ್ರಹಾರ ಬಾಚಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಚುನಾವಣೆ

ಬಿಜೆಪಿ– ಕಾಂಗ್ರೆಸ್‌ನ ಒಮ್ಮತದ ಬೆಂಬಲಿತರಿಗೆ ಜಯ



ಕೆ.ಆರ್.ಪೇಟೆ, ಆ.9– ತಾಲೂಕಿನ ಕಸಬಾ ಹೋಬಳಿಯ ಅಗ್ರಹಾರ ಬಾಚಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ 11 ಸ್ಥಾನಗಳಿಗೆ ಮಂಗಳವಾರ ನಡೆದ ಚುನಾವಣೆಯಲ್ಲಿ ಬಿಜೆಪಿ–ಕಾಂಗ್ರೆಸ್‌ನ ಒಮ್ಮತದ ಬೆಂಬಲಿತ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ.

ಬಿಜೆಪಿ ಮುಖಂಡ ಎ.ಪಿ.ಕೇಶವಗೌಡ ಹಾಗೂ ಕಾಂಗ್ರೆಸ್ ಮುಖಂಡ ಎ.ಬಿ.ಕುಮಾರ್ ನೇತೃತ್ವದಲ್ಲಿ ನಡೆದ ಚುನಾವಣೆಯಲ್ಲಿ ಮೈತ್ರಿ ಕೂಟದಿಂದ ಸ್ಪರ್ಧಾ ಕಣದಲ್ಲಿದ್ದ 11 ಅಭ್ಯರ್ಥಿಗಳು ಗೆಲುವು ದಾಖಲಿಸಿದ್ದಾರೆ. ಜೆಡಿಎಸ್‌ನ ಏಕೈಕ ಅಭ್ಯರ್ಥಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನೂತನ ನಿರ್ದೇಶಕರಾಗಿ ಪ್ರಭಾವತಿ ಬಿ.ಹೆಚ್. ಅಶೋಕ್(95), ಚಂದ್ರಿಕಾ ಲಾಳಿಬೋರೇಗೌಡ(111), ಗೀತಾಕುಮಾರ್(108), ನಾಗಮ್ಮ ಕೃಷ್ಣೇಗೌಡ(88), ನಾಗಮ್ಮ ಶಂಕರೇಗೌಡ(91), ಭಾಗ್ಯ ದೇವರಾಜು (99), ರತ್ನ ನಾಗೇಂದ್ರ(96), ರೂಪಾ ವಿಜಯ ಕುಮಾರ್(93), ಶಶಿಕಲಾ ಜವರೇಗೌಡ(100), ಸವಿತಾ ರವಿ(99), ಸುನಂದಾ ಜಯರಾಂ(89) ಮತಗಳನ್ನು ಪಡೆದು ಜಯ ಸಾಧಿಸಿದ್ದಾರೆ. ಜೆಡಿಎಸ್‌ನ ಪುಟ್ಟಲಕ್ಷ್ಮಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಚುನಾವಣಾಧಿಕಾರಿಯಾಗಿ ತಾಲೂಕು ಸಹಕಾರ ಅಭಿವೃದ್ಧಿ ಅಧಿಕಾರಿ ಮುಕ್ತ ಕುಮಾರ್, ಸಹ ಚುನಾವಣಾಧಿಕಾರಿಯಾಗಿ ಸಂಘದ ಕಾರ್ಯದರ್ಶಿ ಸವಿತಾ ಬೋರೇಗೌಡ ಕಾರ್ಯನಿರ್ವಹಿಸಿದರು.

ನೂತನ ನಿರ್ದೇಶಕರನ್ನು ಮುಖಂಡರಾದ ಎ.ಬಿ. ಕುಮಾರ್, ಎ.ಪಿ.ಕೇಶವಗೌಡ, ಗ್ರಾಪಂ ಮಾಜಿ ಅಧ್ಯಕ್ಷ ನಂಜುಂಡೇಗೌಡ, ಮಾಜಿ ಉಪಾಧ್ಯಕ್ಷೆ ರೂಪಾ ದೇವರಾಜು, ವಿಎಸ್‌ಎಸ್‌ಎನ್ ಬ್ಯಾಂಕ್ ನಿರ್ದೇಶಕ ಮಹೇಂದ್ರ, ಮುಖಂಡರಾದ ಸಂತೋಷ್, ಲಾಳಿ ಬೋರೇಗೌಡ, ಎ.ಎಸ್.ಅಶೋಕ್ ವಿಶ್ವಕರ್ಮ, ಎ.ಬಿ. ಕುಮಾರ್(ಗುಂಡ), ಅರೆಕಲ್ಲಟ್ಟಿ ಬೋರೇಗೌಡ, ವಿಜಿಕುಮಾರ್ ಮತ್ತಿತರರು ಅಭಿನಂದಿಸಿದ್ದಾರೆ.

ನೂತನ ನಿರ್ದೇಶಕರ ಆಯ್ಕೆ ಘೋಷಣೆಯಾಗುತ್ತಿದ್ದಂತೆಯೇ ಕಾಂಗ್ರೆಸ್ ಮತ್ತು ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಪ್ರಯೋಜನಕಾರಿಯಲ್ಲದ ಅಗ್ನಿಪಥ್ ಕೈಬಿಡಲು ಒತ್ತಾಯಿಸಬೇಕು

● ಕ್ವಿಟ್ ಇಂಡಿಯಾ ಚಳುವಳಿ ದಿನಾಚರಣೆಯಲ್ಲಿ ನಿವೃತ್ತ ಮೇಜರ್ ಜನರಲ್ ಎಸ್.ಜಿ.ಒಂಬತ್ಕೆರೆ ಅಭಿಮತ ● 'ಅಗ್ನಿಪಥ್ ಯೋಜನೆ ಅಪಾಯಗಳು' ಕುರಿತು ವಿಚಾರ ಮಂಡಿಸಿದ ನಿವೃತ್ತ ಸೇನಾಧಿಕಾರಿ

ಮೈಸೂರು, ಆ.9(ಪಿಎಂ)– ಯಾವುದೇ ದೃಷ್ಟಿಕೋನದಿಂದ ನೋಡಿದರೂ ಸೇನಾ ನೇಮಕಾತಿ ಸಂಬಂಧ ಜಾರಿಗೆ ತಂದಿರುವ ಅಗ್ನಿಪಥ್ ಯೋಜನೆ ಪರಿಣಾಮಕಾರಿ, ಪ್ರಯೋಜನಕಾರಿಯಾಗಿ ಕಾಣುತ್ತಿಲ್ಲ. ಹಾಗಾಗಿ ಈ ಯೋಜನೆ ಕೈಬಿಡಬೇಕೆಂದು ಸರ್ಕಾರಕ್ಕೆ ಒತ್ತಾಯಿಸುವ ಅಗತ್ಯವಿದೆ ಎಂದು ನಿವೃತ್ತಮೇಜರ್ ಜನರಲ್ ಎಸ್.ಜಿ.ಒಂಬತ್ಕೆರೆ ಅಭಿಪ್ರಾಯಪಟ್ಟರು.

ಮೈಸೂರಿನ ಜೆಎಲ್‌ಬಿ ರಸ್ತೆಯ ಇಂಜಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಸಂಯುಕ್ತ ಹೋರಾಟ–ಕರ್ನಾಟಕ (ರೈತ–ದಲಿತ–ಕಾರ್ಮಿಕ–ವಿದ್ಯಾರ್ಥಿ ಯುವಜನ–ಮಹಿಳಾ ಪ್ರಗತಿಪರ ಸಂಘಟನೆಗಳ ಸಮನ್ವಯ ಸಮಿತಿ) ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಕ್ವಿಟ್ ಇಂಡಿಯಾ ಚಳುವಳಿಯ ದಿನಾಚರಣೆ ಹಾಗೂ 'ಜೈ ಜವಾನ್–ಜೈ ಕಿಸಾನ್' ಸಮ್ಮೇಳನದಲ್ಲಿ 'ಅಗ್ನಿಪಥ್ ಯೋಜನೆ ಅಪಾಯಗಳು' ಕುರಿತು ಅವರು ವಿಚಾರ ಮಂಡಿಸಿ ಮಾತನಾಡಿದರು.

ಭಾರತೀಯ ಸೇನೆಯಲ್ಲಿ 13 ಲಕ್ಷ ಯೋಧರಿದ್ದಾರೆ. ಈ ಪೈಕಿ ಶೇ.80ರಷ್ಟು ಸೇನೆಯಲ್ಲಿದ್ದರೆ (ಆರ್ಮಿ), ಉಳಿದ ಶೇ.20ರಷ್ಟು ಯೋಧರು ನೌಕಾಪಡೆ ಮತ್ತು ವಾಯುಪಡೆಯಲ್ಲಿದ್ದಾರೆ. 15 ವರ್ಷ ಸೇವೆ ಸಲ್ಲಿಸಿ ಪ್ರತಿ ವರ್ಷ 60 ಸಾವಿರ ಯೋಧರು ನಿವೃತ್ತರಾಗುತ್ತಾರೆ. ನಮ್ಮ ಸೇನೆಯಲ್ಲಿ ಯಾವುದೇ ಜಾತಿ–ಧರ್ಮ, ಭಾಷೆ–ಪ್ರದೇಶ ಹಾಗೂ ರಾಜ್ಯ ಎಂಬ ವ್ಯತ್ಯಾಸವಿಲ್ಲ. ಎಲ್ಲರೂ ಒಂದೇ ಎಂದು ತಿಳಿಸಿದರು.

1.2 ಲಕ್ಷ ಯೋಧರ ಕೊರತೆ: ನೆರೆಯ ಚೀನಾ ಮತ್ತು ಪಾಕಿಸ್ತಾನ ಎದುರಿಸುವುದು ನಮ್ಮ ಕರ್ತವ್ಯದಲ್ಲಿ ಮಹತ್ವದ್ದಾಗಿದೆ. ಹಾಗಾಗಿ ಯೋಧರ ಸಂಖ್ಯೆ ಕಾಪಾಡಬೇಕು. ಈಗ ಎರಡು ವರ್ಷಗಳಿಂದ ಕೋವಿಡ್ ಕಾರಣ ಸೇನಾ ನೇಮಕಾತಿ ನಡೆದಿಲ್ಲ. ಈ ಕಾರಣಕ್ಕೆ ಸುಮಾರು 1.2 ಲಕ್ಷ ಯೋಧರ ಕೊರತೆ ಉಂಟಾಗಿದೆ. ಇಂತಹ ಸಂದರ್ಭದಲ್ಲಿ ಹಳೆಯ ನೇಮಕಾತಿ ಪದ್ಧತಿ ಕೈಬಿಟ್ಟು ಈಗ ಅಗ್ನಿಪಥ್ ಯೋಜನೆ ಜಾರಿಗೊಳಿಸಲಾಗಿದೆ ಎಂದು ಹೇಳಿದರು.



ಮೈಸೂರಿನ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕ್ವಿಟ್ ಇಂಡಿಯಾ ಚಳುವಳಿಯ ದಿನಾಚರಣೆ, 'ಜೈ ಜವಾನ್–ಜೈ ಕಿಸಾನ್' ಸಮ್ಮೇಳನವನ್ನು ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಉದ್ಘಾಟಿಸಿದರು.

ಸೇನೆ ಬಲ ಇಳಿಮುಖ: ಅಗ್ನಿಪಥ್ ಯೋಜನೆಯಡಿ ಹದಿನೇಳೂವರೆಯಿಂದ 21 ವರ್ಷ ವಯೋಮಾನದೊಳಗಿನ ಯುವಕರು ಅಗ್ನಿವೀರರು ಎಂಬ ಹೆಸರಿನಲ್ಲಿ ಸೇನೆಯಲ್ಲಿ ಸೇರುತ್ತಾರೆ. 4 ವರ್ಷಗಳು ಸೇವೆ ಸಲ್ಲಿಸಿದ ಅಗ್ನಿವೀರರಲ್ಲಿ ಶೇ.75ರಷ್ಟು ಮಂದಿಯನ್ನು 10 ಲಕ್ಷ ಹಣದೊಂದಿಗೆ ಹೊರಕಳುಹಿಸುತ್ತಾರೆ. ಸೇನೆಯಲ್ಲಿ ಮುಂದುವರೆಯುವ ಶೇ.25ರಷ್ಟು (ಶೇ.25ಕ್ಕಿಂತಲೂ ಕಡಿಮೆಯೂ ಆಗಬಹುದು) ಯೋಧರ 4 ವರ್ಷಗಳ ಅಗ್ನಿವೀರರ ಅವಧಿ ಪರಿಗಣಿಸುವುದಿಲ್ಲ. ಪ್ರತಿ ವರ್ಷ 60 ಸಾವಿರ ಯೋಧರು ನಿವೃತ್ತರಾಗಿ ಹೊರಬಂದರೆ, 15 ಸಾವಿರ ಯೋಧರು (ಅಗ್ನಿವೀರ) ಮಾತ್ರ ಸೇನೆಗೆ ಭರ್ತಿಯಾಗುತ್ತಾರೆ. ಇದರಿಂದ ಪ್ರತಿವರ್ಷ 45 ಸಾವಿರ ಯೋಧರು ಕಡಿಮೆಯಾಗುತ್ತಾರೆ. ಆ ಮೂಲಕ ನಮ್ಮ ಸೇನೆಯ ಯೋಧರ ಸಂಖ್ಯೆ ಕಡಿಮೆಯಾಗಿ ನಮ್ಮ ಸೇನೆ ಬಲ ಇಳಿಮುಖವಾಗಲಿದೆ ಎಂದು ಪ್ರತಿಪಾದಿಸಿದರು.

ಚೀನಾ, ಪಾಕ್ ದಾಳಿ ಎದುರಿಸಲಾಗದು: ಸೇನೆಯ ಬಲ ಕುಂಠಿತವಾದರೆ, ನೆರೆಯ ಚೀನಾ ಮತ್ತು ಪಾಕಿಸ್ತಾನದ ದಾಳಿಗಳನ್ನು ಎದುರಿಸುವುದು ಕಷ್ಟವಾಗಲಿದೆ. ಹಾಗಾಗಿ ಅಗ್ನಿಪಥ್ ಯೋಜನೆ ನಮ್ಮ ಸೇನೆಗೆ ಒಳಿತಾಗಿ ಕಾಣುತ್ತಿಲ್ಲ. ಈ ಹಿನ್ನೆಲೆಯಲ್ಲಿ ಅಗ್ನಿಪಥ್ ಯೋಜನೆ ಕೈಬಿಟ್ಟು, ಹಳೇ ನೇಮಕಾತಿ ಪದ್ಧತಿಯನ್ನೇ ಪುನರ್ ಜಾರಿಗೊಳಿಸಬೇಕು. ಆದರೆ ಈ ವರ್ಷ ಅಗ್ನಿಪಥ್ ಯೋಜನೆಯಡಿ ನೇಮಕಾತಿ ಪ್ರಾರಂಭ ಆಗಿರುವ ಕಾರಣ ಪೈಲಟ್ ಯೋಜನೆಯಾಗಿ (ಪ್ರಾಯೋಗಿಕ) 1 ವರ್ಷಕ್ಕೆ ಸೀಮಿತವಾಗಿ ಉಳಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಅಗ್ನಿಪಥ್ ಯೋಜನೆಯಿಂದ ನಿರುದ್ಯೋಗ ನಿವಾರಣೆಯಾಗುತ್ತದೆ ಎನ್ನಲಾಗದು. ಏಕೆಂದರೆ ಲಕ್ಷಾಂತರ ನಿರುದ್ಯೋಗಿಗಳಿದ್ದು, ಕೇವಲ 15 ಸಾವಿರ ಅಗ್ನಿವೀರರ ನೇಮಕಾತಿಯಿಂದ ನಿರುದ್ಯೋಗ ಸಮಸ್ಯೆ ನಿವಾರಿಸಬಹುದು ಎಂಬುದು ಸರಿಯಲ್ಲ. ಈಗ ಪಿಂಚಣಿ ವೆಚ್ಚ ದುಬಾರಿಯಾಗಿದೆ ಎಂದು ಕೆಲವರು ಹೇಳುತ್ತಾರೆ. ಅದನ್ನು ಕಡಿಮೆ ಮಾಡಲು ಅಗ್ನಿಪಥ್ ಯೋಜನೆ ಸೂಕ್ತ ಎಂದು ವಾದಿಸುತ್ತಾರೆ. ಇದು ತಪ್ಪು. ನಮ್ಮ ಸೇನೆಯಲ್ಲಿ ಯುವ ಯೋಧರ ಸಂಖ್ಯೆ ಹೆಚ್ಚಳಕ್ಕೆ ಹಳೇ ನೇಮಕಾತಿ ಪದ್ಧತಿಯನ್ನೇ ಅನುಸರಿಸಬೇಕು ಎಂದು ಹೇಳಿದರು.

ಪ್ರಸ್ತುತದಲ್ಲಿ ಕ್ವಿಟ್ ಇಂಡಿಯಾ ಅಗತ್ಯವಿದೆ: ಕ್ವಿಟ್ ಇಂಡಿಯಾ ಚಳುವಳಿ ಅಂದು ಬ್ರಿಟಿಷರನ್ನು ದೇಶದಿಂದ ತೊಲಗಿಸುವ ಹೋರಾಟವಾಗಿತ್ತು. ಇಂದು ಕೂಡ ಮತ್ತೊಂದು ಕ್ವಿಟ್ ಇಂಡಿಯಾ ಚಳವಳಿ ಅಗತ್ಯವಿದ್ದು, ಆ ಮೂಲಕ ನಮ್ಮ ಸಮಾಜದೊಳಗಿರುವ ದ್ವೇಷ ಹೋಗಲಾಡಿಸಬೇಕಿದೆ ಎಂದರು. 1965ರಲ್ಲಿ ಪಾಕಿಸ್ತಾನದ ವಿರುದ್ಧ ಯುದ್ಧ ಆಯಿತು. ನಾನು ಈ ಯುದ್ಧದಲ್ಲಿ ಕ್ಯಾಪ್ಟನ್ ಆಗಿ ಭಾಗವಹಿಸಿದ್ದೆ. ನನ್ನ ಯುದ್ಧ ಪಡೆ ಪಾಕಿಸ್ತಾನದೊಳಗೆ ನುಗ್ಗಿ ಅಲ್ಲಿನ ಗ್ರಾಮವೊಂದರಲ್ಲಿ ಎದುರಾಳಿಗಳ ಸದೆಬಡಿದಿತ್ತು. ಅಲ್ಲಿಗೆ (ಪಾಕಿಸ್ತಾನದ ಗ್ರಾಮವೊಂದು) ಖುದ್ದು ಅಂದಿನ ರಾಷ್ಟ್ರಪತಿ ಡಾ.ಎಸ್.ರಾಧಾಕೃಷ್ಣನ್, ಪ್ರಧಾನಿ ಲಾಲ್ ಬಹದ್ದೂರ್‌ಶಾಸ್ತ್ರಿ ಭೇಟಿ ನೀಡಿ, ನಮ್ಮ ಪಡೆಗೆ ಉತ್ತೇಜನ ನೀಡಿದ್ದರು. ಇದೇ ವರ್ಷ ಅಂದಿನ ಪ್ರಧಾನಿ ಲಾಲ್ ಬಹದ್ದೂರು ಶಾಸ್ತ್ರಿ ಅವರು ಅಲಹಾಬಾದ್‌ನಲ್ಲಿ ಸಾರ್ವಜನಿಕ ಸಮಾವೇಶವೊಂದರಲ್ಲಿ ಮಾತನಾಡುವಾಗ 'ಜೈ ಜವಾನ್, ಜೈ ಕಿಸಾನ್' ಘೋಷವಾಕ್ಯ ನುಡಿದರು. ಈ ಘೋಷವಾಕ್ಯಕ್ಕೆ ಇಂದು ಇನ್ನೊಂದು ಸೇರಬೇಕು, ಅದುವೇ 'ಜೈ ಕಾರ್ಮಿಕ' ಎಂದರು.

ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಮಂಡ್ಯ ಜಿಲ್ಲಾಧ್ಯಕ್ಷ ಕೆಂಪುಗೌಡ, ಪಿಯುಸಿಎಲ್ ಜಿಲ್ಲಾಧ್ಯಕ್ಷ ಪಿ.ಕುಮಾರ್, ಪ್ರಾಂತ ರೈತ ಸಂಘದ ಜಗದೀಶ್ ಸೂರ್ಯ, ಸಿಐಟಿಯು ಜಿಲ್ಲಾಧ್ಯಕ್ಷ ಬಾಲಾಜಿರಾವ್, ಕಾರ್ಮಿಕರ ಸಂಘಟನೆಗಳ ಮುಖಂಡರಾದ ದೇವದಾಸ್, ಚಂದ್ರಶೇಖರ್ ಮೇಟಿ ಮತ್ತಿತರರಿದ್ದರು.

> “ **ಸಂವಿಧಾನ ರಕ್ಷಣೆಗೆ ನಾನು ಬದ್ಧ...** ನಾನು ಯಾವುದೇ ವ್ಯಕ್ತಿ–ರಾಜಕೀಯ ಪಕ್ಷದ ಪರ ಅಥವಾ ವಿರೋಧವಾಗಿಲ್ಲ. ದೇಶದ ಜನತೆ ಹಾಗೂ ಸಂವಿಧಾನದ ಪರವಾಗಿದ್ದೇನೆ. 1941ರಲ್ಲಿ ಹುಟ್ಟಿದ ನಾನು 1961ರಲ್ಲಿ ಸೇನೆಗೆ ಸೇರ್ಪಡೆಯಾದೆ. 2 ವರ್ಷ ತರಬೇತಿ ಪಡೆದು 1962ರ ಡಿ.10ರಂದು ಸೇನೆಯ ಪ್ರತಿಜ್ಞಾವಿಧಿ ಸ್ವೀಕರಿಸಿದೆ. ಅಂದಿನ ಭಾರತದ ರಾಷ್ಟ್ರಪತಿ ಡಾ.ಎಸ್.ರಾಧಾಕೃಷ್ಣನ್ ಎದುರು 'ದೇಶದ ಸಂವಿಧಾನವನ್ನು ಜೀವ ಕೊಟ್ಟು ರಕ್ಷಿಸುತ್ತೇನೆ' ಎಂದು ಪ್ರತಿಜ್ಞಾ ವಿಧಿ ಸ್ವೀಕರಿಸಿದೆ. ಆ ಪ್ರತಿಜ್ಞಾವಿಧಿಗೆ ಬದ್ಧವಾಗಿದ್ದೇನೆ. **–ನಿವೃತ್ತ ಮೇಜರ್ ಜನರಲ್ ಎಸ್.ಜಿ.ಒಂಬತ್ಕೆರೆ**
>
> “ **ಸ್ವಾತಂತ್ರ್ಯ ಹೋರಾಟದ ಆಶೋತ್ತರಗಳಿಗೆ ತಿಲಾಂಜಲಿ...** ಅಂದು ದೇಶದಲ್ಲಿ ಸ್ವಾತಂತ್ರ್ಯ ಚಳವಳಿ ಹತ್ತಿಕ್ಕಲು ಬ್ರಿಟಿಷರು ಧರ್ಮ–ಧರ್ಮ, ಜಾತಿ–ಜಾತಿಗಳ ನಡುವೆ ಎತ್ತಿ ಕಟ್ಟುತ್ತಿದ್ದರು. ಇಂದು ಅದಕ್ಕಿಂತಲೂ ವಿಕೃತವಾಗಿ ಯುವಕರ ಮನಸ್ಸಿನಲ್ಲಿ ವಿಷ ತುಂಬಿ ಸಮಾಜ ಒಡೆಯುವ ಮೂಲಕ ಸ್ವಾತಂತ್ರ್ಯದ ಆಶೋತ್ತರಗಳಿಗೆ ತಿಲಾಂಜಲಿ ಬಿಡಲಾಗುತ್ತಿದೆ. ಅಂದಿನ ಬ್ರಿಟಿಷ್ ಆಡಳಿತಕ್ಕೂ ಇಂದಿನ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಆಡಳಿತಕ್ಕೂ ವ್ಯತ್ಯಾಸವಿಲ್ಲ.
> **–ಬಡಗಲಪುರ ನಾಗೇಂದ್ರ, ಅಧ್ಯಕ್ಷರು, ರಾಜ್ಯ ರೈತ ಸಂಘ.**



ಚೀಫ್ ಇಂಜಿನಿಯರ್ ಆಗಿ ಮುಂಬಡ್ತಿ ಹೊಂದಿದ ಮುಡಾ ಅಧೀಕ್ಷಕ ಅಭಿಯಂತರ ಶಂಕರ್ ಅವರನ್ನು ಪರಿಷತ್ ಶಾಸಕ ಡಾ.ಡಿ.ತಿಮ್ಮಯ್ಯ ಅಭಿನಂದಿಸಿದರು. ಈ ವೇಳೆ ಮುಡಾ ಸದಸ್ಯ ಜಿ.ಲಿಂಗಯ್ಯ, ಕಾರ್ಯಪಾಲಕ ಅಭಿಯಂತರ ಮೋಹನ್ ಇದ್ದರು.

ಚಾಮುಂಡಿಬೆಟ್ಟದ ರಸ್ತೆ ದುರಸ್ತಿ ಕಾಮಗಾರಿ ಆರಂಭ

ನಂದಿ ಮಾರ್ಗದಲ್ಲಿ ರಸ್ತೆ ಕುಸಿದು ಸಂಚಾರ ಬಂದ್ ಆಗಿದೆ

ಮೈಸೂರು, ಆ.9(ಆರ್‌ಕೆ)–ಭಾರೀ ಮಳೆಯಿಂದಾಗಿ ಕುಸಿದಿದ್ದ ಮೈಸೂರಿನ ಚಾಮುಂಡಿಬೆಟ್ಟದ ನಂದಿ ಪ್ರತಿಮೆ ರಸ್ತೆ ದುರಸ್ತಿ ಕಾಮಗಾರಿ ಆರಂಭವಾಗಿದೆ.

ಈಗಾಗಲೇ 10 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದ್ದು, ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಜೆಸಿಬಿ ಮೂಲಕ ಮಣ್ಣು ತೆರವುಗೊಳಿಸುವ ಕೆಲಸವನ್ನು ತೀವ್ರ ಗತಿಯಿಂದ ಮಾಡುತ್ತಿದ್ದು, ಕುಸಿದಿರುವ ಜಾಗದಲ್ಲಿ ತಡೆಗೋಡೆ ನಿರ್ಮಿಸಲು ಅಡಿಪಾಯಕ್ಕೆ ಸಿದ್ಧತೆ ಮಾಡುತ್ತಿದ್ದಾರೆ.

ತೀರಾ ಇಳಿಜಾರಿನ ಪ್ರದೇಶವಾಗಿರುವುದರಿಂದ ಮೇಲಿನಿಂದ ಒಂದೊಂದಾಗಿ ಜಾರಿರುವ ಕಲ್ಲು, ಬಂಡೆ, ಮಣ್ಣನ್ನು ತೆರವುಗೊಳಿಸಿದ ನಂತರವಷ್ಟೇ ಸಿಮೆಂಟ್ ಕಾಂಕ್ರೀಟ್ ಮಾಡಬೇಕಾಗಿದೆ ಎಂದ ಲೋಕೋಪಯೋಗಿ ಇಲಾಖೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ರಾಜು, ಮಣ್ಣು ತೆರವು ಕಾರ್ಯವನ್ನು ತೀವ್ರಗತಿಯಿಂದ ನಡೆಸಲಾಗುತ್ತಿದೆ ಎಂದರು.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ವಿಜ್ಞಾನಿಗಳು ನೀಡಿರುವ ವಿನ್ಯಾಸದಂತೆ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಜಿಯೋ ಟ್ರಯಲ್ ಟೆಕ್ನಾಲಜಿ ಬಳಸಿ ತಡೆಗೋಡೆಯನ್ನು ನಿರ್ಮಿಸಲಾಗುತ್ತಿದ್ದು, ಅದಕ್ಕೆ ಬೇಕಾದ ಸಿದ್ಧತೆಯನ್ನು ಮಾಡಿಕೊಳ್ಳಲಾಗಿದೆ ಎಂದರು. ನಂದಿಗೆ ಹೋಗುವ ರಸ್ತೆಯಲ್ಲಿ 2021ರ ಅಕ್ಟೋಬರ್ 20 ಸೇರಿದಂತೆ ಮೂರು ಬಾರಿ ಭೂ ಕುಸಿತವಾಗಿದ್ದು, ಇದೀಗ ರಸ್ತೆಯಲ್ಲಿ ವಾಹನ ಸಂಚಾರವನ್ನು ಬಂದ್ ಮಾಡಿ ಕಾಮಗಾರಿ ನಡೆಸಲಾಗುತ್ತಿದೆ. ಈಗ ಕೇವಲ ಮಣ್ಣು ತೆಗೆಯುವ ಕೆಲಸ ಮಾತ್ರ ನಡೆಯುತ್ತಿದೆ. ಆದರೆ ಕೆಲವರು ಕಾಮಗಾರಿ ಗುಣಮಟ್ಟದ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ಇಂಜಿನಿಯರ್ ರಾಜು ತಿಳಿಸಿದರು.



ಮೈಸೂರಿನ ಚಾಮುಂಡಿಬೆಟ್ಟದ ನಂದಿ ಪ್ರತಿಮೆ ರಸ್ತೆ ದುರಸ್ತಿ ಕಾಮಗಾರಿ ಆರಂಭವಾಗಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಚಾಮರಾಜ ಕ್ಷೇತ್ರದಲ್ಲಿ ಕ್ವಿಟ್ ಇಂಡಿಯಾ ಚಳವಳಿ ಜ್ಞಾಪಕಾರ್ಥ ಪಾದಯಾತ್ರೆ



ಮೈಸೂರು, ಆ.9(ಎಂಟಿವೈ)– ಕ್ವಿಟ್ ಇಂಡಿಯಾ ಚಳವಳಿ ಹಾಗೂ ದೇಶಕ್ಕೆ ಸ್ವಾತಂತ್ರ್ಯ ಲಭಿಸಿ 75 ವರ್ಷ ಸಂದ ಹಿನ್ನೆಲೆಯಲ್ಲಿ ಕಾಂಗ್ರೆಸ್ ವತಿಯಿಂದ ಮಂಗಳವಾರ ಚಾಮರಾಜ ಕ್ಷೇತ್ರದಲ್ಲಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿತ್ತು. ಪಕ್ಷದ ಕಾರ್ಯಕರ್ತರು ತ್ರಿವರ್ಣ ಧ್ವಜ ಹಿಡಿದು ಪಾದಯಾತ್ರೆಯಲ್ಲಿ ಪಾಲ್ಗೊಂಡು ದೇಶಭಕ್ತಿ ಪ್ರದರ್ಶಿಸಿದರು.

ಮೈಸೂರಿನ ಕಾಂಗ್ರೆಸ್ ಕಚೇರಿ ಮುಂಭಾಗದಿಂದ ಹೊರಟ ಪಾದಯಾತ್ರೆ ವಿವಿಧ ರಸ್ತೆಗಳಲ್ಲಿ ಸಾಗಿ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನ ತಲುಪಿತು. ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದ ಮಾಜಿ ಶಾಸಕ ವಾಸು, ಮುಖಂಡರಾದ ಕೆ.ಹರೀಶ್‌ಗೌಡ, ಎಂ.ಶಿವಣ್ಣ, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ ಇನ್ನಿತರರು ಕ್ವಿಟ್ ಇಂಡಿಯಾ ಮೂವ್‌ಮೆಂಟ್‌ನಲ್ಲಿ ಕಾಂಗ್ರೆಸ್ ಹೋರಾಟ ಮಾಡಿದ್ದನ್ನು ಸ್ಮರಿಸಿದರು. ಈ ವೇಳೆ ಭಾರತಾಂಬೆಗೆ ಜಯಕಾರ ಹಾಕಿದರಲ್ಲದೆ, ಸ್ವಾತಂತ್ರ್ಯ ಹೋರಾಟದಲ್ಲಿ ಪ್ರದರ್ಶಿಸಿದ್ದ ಚರಕದ ಚಿತ್ರವುಳ್ಳ ತ್ರಿವರ್ಣ ಧ್ವಜವನ್ನು ಪ್ರದರ್ಶಿಸಿ, ಗಮನ ಸೆಳೆದರು.

ಎಪಿಎಂಸಿ ಮಾರುಕಟ್ಟೆಗೆ ಲಾರಿಗಳ ಪ್ರವೇಶ ಶುಲ್ಕ ವಸೂಲಿ ಮಾಡುತ್ತಿಲ್ಲ

ಎಪಿಎಂಸಿ ಕಾರ್ಯದರ್ಶಿ ಸ್ಪಷ್ಟನೆ

ಮೈಸೂರು,ಆ.9(ಪಿಎಂ)–ಮೈಸೂರು ಎಪಿಎಂಸಿಯ ಬಂಡಿಪಾಳ್ಯ ಮುಖ್ಯ ಮಾರುಕಟ್ಟೆಯ ಪ್ರಾಂಗಣಕ್ಕೆ ಲಾರಿಗಳು ಪ್ರವೇಶ ಪಡೆಯಲು ಲಾರಿ ಮಾಲೀಕರಿಂದ ಶುಲ್ಕ ವಸೂಲಿ ಮಾಡುತ್ತಿಲ್ಲ. ಇದನ್ನು ಲಾರಿ ಮಾಲೀಕರಿಗೂ ಮನವರಿಕೆ ಮಾಡಿಕೊಡಲಾಗಿದೆ ಎಂದು ಎಪಿಎಂಸಿ ಕಾರ್ಯದರ್ಶಿಗಳು ಸ್ಪಷ್ಟಪಡಿಸಿದ್ದಾರೆ.

ಅಧಿಸೂಚಿತ ಕೃಷಿ ಉತ್ಪನ್ನಗಳನ್ನು ಹೊರತುಪಡಿಸಿ ಇತರೇ ಉತ್ಪನ್ನಗಳನ್ನು ವಹಿವಾಟು ನಡೆಸುವ ವರ್ತಕರಿಂದ ಪ್ರವೇಶ ಶುಲ್ಕ ಪಾವತಿಗೆ ಆ.1ರಂದು ಸ್ಥಾಯಿ ಸಮಿತಿಯು ಆದೇಶ ಹೊರಡಿಸಿದೆ. ಅಗತ್ಯ ಪ್ರಚಾರ ಕೈಗೊಂಡು ಆ.8ರಿಂದ ಈ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಈ ಪ್ರವೇಶ ಶುಲ್ಕದ ದರಗಳನ್ನು ವರ್ತಕರ ಸಂಘದ ಪದಾಧಿಕಾರಿಗಳೊಡನೆ ಸಮಾಲೋಚಿಸಿ ನಿಗದಿ ಮಾಡಲಾಗಿದೆ. ಜಿಲ್ಲಾ ಲಾರಿ ಮಾಲೀಕರ ಒಕ್ಕೂಟದ ಪದಾಧಿಕಾರಿಗಳು ಆರೋಪಿಸಿದಂತೆ ಪ್ರವೇಶ ಶುಲ್ಕವನ್ನು ಯಾವುದೇ ಲಾರಿ ಮಾಲೀಕರಿಂದ ವಸೂಲಿ ಮಾಡುತ್ತಿಲ್ಲ. ಸಂಬಂಧಿಸಿದ ವರ್ತಕರು ಪಾವತಿಸುತ್ತಿದ್ದಾರೆಯೇ ಹೊರತು ಲಾರಿ ಮಾಲೀಕರಿಗೂ ಇದಕ್ಕೂ ಸಂಬಂಧವಿಲ್ಲ. ಇದನ್ನು ಸದರಿ ಒಕ್ಕೂಟದ ಪದಾಧಿಕಾರಿಗಳು ನಮ್ಮ ಕಚೇರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಮನವರಿಕೆ ಮಾಡಿಕೊಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ವೈದ್ಯಕೀಯ ತಪಾಸಣಾ ಶಿಬಿರ

ಮೈಸೂರು, ಆ.9 (ಪಿಎಂ)– ಕೇಂದ್ರ ಸರ್ಕಾರದ 'ವಿಶಿಷ್ಟ ಅಂಗವೈಕಲ್ಯ ಗುರುತಿನ ಚೀಟಿ (ಯುಡಿಐಡಿ)' ನೀಡುವ ಸಂಬಂಧ ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರದ ವತಿಯಿಂದ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಆ.10ರಿಂದ 26ರವರೆಗೆ (ವಿವಿಧ ದಿನಗಳಂದು) ಜಿಲ್ಲೆಯ ವಿವಿಧೆಡೆ ವೈದ್ಯಕೀಯ ತಪಾಸಣೆ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ. ಅದರಂತೆ ಆ.10ರಂದು ಮೈಸೂರು ನಗರದ ತಿಲಕ್‌ನಗರದಲ್ಲಿರುವ ಸರ್ಕಾರಿ ಅಂಧರ ಪಾಠಶಾಲೆ ಆವರಣದಲ್ಲಿ ಶಿಬಿರ ನಡೆಯಲಿದೆ. ಅದೇ ರೀತಿ ಆ.12ರಂದು ತಾಲೂಕಿನ ವರುಣಾ ಗ್ರಾಮದ ಸರ್ಕಾರಿ ಶಾಲೆ ಆವರಣ, ಆ.16ರಂದು ಕೆಆರ್ ನಗರ, ಆ.18ರಂದು ಹುಣಸೂರು ಪಟ್ಟಣದ ಶಿಕ್ಷಕರ ಭವನ, ಆ.23ರಂದು ಹೆಚ್‌ಡಿ ಕೋಟೆ ಹಾಗೂ ಆ.26ರಂದು ಕೆಆರ್ ನಗರ ತಾಲೂಕಿನ ಸಾಲಿಗ್ರಾಮದಲ್ಲಿ ಶಿಬಿರಗಳು (ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ) ನಡೆಯಲಿವೆ. ವಿಕಲಚೇತನರು ವೆಬ್‌ಸೈಟ್‌ನಲ್ಲಿ (https://www.swavlambancard. gov.in) ಕಾರ್ಡ್‌ಗಾಗಿ ಮೊದಲು ನೋಂದಣಿ ಮಾಡಿಕೊಂಡು ಶಿಬಿರದಲ್ಲಿ ಪಾಲ್ಗೊಳ್ಳಬೇಕು ಎಂದು ಪುನರ್ವಸತಿ ಕೇಂದ್ರದ ಸದಸ್ಯ ಕಾರ್ಯದರ್ಶಿ ಎಸ್.ಎಸ್.ವೈದ್ಯನಾಥ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಎಂ.ಅಶ್ವಿನಿಗೆ ಪಿಹೆಚ್.ಡಿ



ಮೈಸೂರು, ಆ.9–ಡಾ.ಕೆ.ಸುಮನಾ ಅವರ ಮಾರ್ಗದರ್ಶನದಲ್ಲಿ ಎಂ.ಅಶ್ವಿನಿ ಮಾಲಿಕ್ಯೂಲರ್ ಕ್ಯಾರಕ್ಟರೈಸೇಷನ್ ವಿಷಯದಲ್ಲಿ ಸಂಶೋಧಿಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೂರನೇ ಪುಟದಿಂದ

ಉಪನ್ಯಾಸಕಿ ನೇಣಿಗೆ ಶರಣು

ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಡೆತ್‌ನೋಟ್ ಬರೆದಿಟ್ಟ ಚಂದನಾ: ಆತ್ಮಹತ್ಯೆಗೂ ಮುನ್ನ ಡೆತ್‌ನೋಟ್ ಬರೆದಿರುವ ಚಂದನಾ, ಯಾಕೆ ಯಾರೂ ನನ್ನ ಅರ್ಥ ಮಾಡಿಕೊಳ್ಳುತ್ತಿಲ್ಲ ಎಂದು ಪ್ರಾರಂಭಿಸಿ, ಮನದಾಳದ ನೋವಿಗೆ ಅಕ್ಷರ ರೂಪ ನೀಡಿದ್ದಾರೆ. 'ನನ್ನ ಸಾವಿಗೆ ಯಾರೂ ಕಾರಣರಲ್ಲ. ನನ್ನ ಸಾವಿಗೆ ನಾನೇ ಕಾರಣ ಎಂದು ಪತ್ರದಲ್ಲಿ ತಿಳಿಸಿದ್ದಾರೆ. ತನ್ನ ಇಬ್ಬರು ಅಕ್ಕಂದಿರಿಗೆ ಕ್ಷಮೆ ಕೇಳಿರುವ ಚಂದನಾ, ತಂಗಿಯನ್ನು ಉದ್ದೇಶಿಸಿ, ಯಾವುದೇ ಕಾರಣಕ್ಕೂ ಉಪನ್ಯಾಸಕಿ ಹುದ್ದೆಗೆ ಬರಬೇಡ ಎಂದು ಸಲಹೆ ನೀಡಿದ್ದಾರೆ.

ತಂದೆ ಗೋಳಾಟ: ಮಗಳು ಲೆಕ್ಚರರ್ ಆಗಿ ವರ್ಕ್ ಮಾಡ್ತಾ ಇದ್ದಳು. ಮನೆ ಕಡೆಯೂ ಗಮನ ಕೊಡುತ್ತಿದ್ದಳು. ಒಳ್ಳೆ ಹುಡುಗಿ. ಇಂದು ಅವಳ ಹುಟ್ಟುಹಬ್ಬವಿತ್ತು. ಮನೆಗೆ ಕರೆದುಕೊಂಡು ಹೋಗಿ ಗ್ರ್ಯಾಂಡ್ ಆಗಿ ಹುಟ್ಟುಹಬ್ಬ ಆಚರಿಸೋಣಾ ಅಂತಾ ಅಂದುಕೊಂಡಿದ್ದೆ. ನಿನ್ನೆ ರಾತ್ರಿ 8.30ಕ್ಕೆ ನಾನು ಫೋನ್ ಮಾಡಿದ್ದೆ. ಆಗ ಫೋನ್ ಸ್ವಿಚ್ ಆಫ್ ಬರ್ತಿತ್ತು. ಪುನಃ ಬೆಳಗ್ಗೆ ವಾರ್ಡನ್‌ಗೆ ಫೋನ್ ಮಾಡಿ ವಿಚಾರಿಸಿದೆ. ಆದರೆ ಅವರು ಒಂದು ಗಂಟೆಯ ನಂತರ ನಿಮ್ಮ ಮಗಳಿಗೆ ಹುಷಾರಿಲ್ಲ ಅಂತಾ ಹೇಳಿ ಕರೆಸಿಕೊಂಡರು. ಈಗ ಹೀಗಾಗಿದೆ ಎಂದು ಮೃತಳ ತಂದೆ ಮಹದೇವಸ್ವಾಮಿ ರೋಧಿಸಿದರು.

'3ನೇ ಸಿಎಂ' ಸೀಟು ಹತ್ತುವ ಕಾಲ ಸನ್ನಿಹಿತ!

ಶುರುವಾಗಿದೆ ಎಂದರೆ ನೀವು ಕುರ್ಚಿಯಿಂದ ಇಳಿಯಲು ದಿನಗಳನ್ನಲ್ಲ, ಗಂಟೆಗಳನ್ನು ಎಣಿಸುತ್ತಿದ್ದೀರಿ ಎನಿಸುತ್ತಿದೆ! ಬಸವರಾಜ ಬೊಮ್ಮಾಯಿ ಅವರೇ, ಸಿಎಂ ಬದಲಾವಣೆ ಎಂಬ ಬೆಳವಣಿಗೆಗೆ ಕಾರಣವೇನು, ನಿಮ್ಮ ಆಡಳಿತ ವೈಫಲ್ಯವೇ? ಅಥವಾ ಬಿಜೆಪಿ, ಬಿಜೆಪಿ ಕಾದಾಟವೇ? ಅಥವಾ ಯಡಿಯೂರಪ್ಪನವರ ಕೋಪವೇ? ಎಂದು ಪ್ರಶ್ನಿಸಿದೆ.

ರಾಜ್ಯಕ್ಕೆ ಸಂಕಟ, ಬಿಜೆಪಿಗೆ ಅಧಿಕಾರದಾಟ. ಅತಿವೃಷ್ಟಿಯಿಂದ ಜನತೆ ಪರದಾಡುತ್ತಿರುವಾಗ ಸಮರೋಪಾದಿಯಲ್ಲಿ ನೆರವಿನ ಕಾರ್ಯ ಮಾಡುವುದನ್ನು ಬಿಟ್ಟು ಬಿಜೆಪಿ 3ನೇ ಸಿಎಂ ಪ್ರತಿಷ್ಠಾಪನೆಗೆ ಕಸರತ್ತು ನಡೆಸುತ್ತಿದೆ. ರಾಜ್ಯ ಸಂಕಷ್ಟಕ್ಕೆ ಎದುರಾದಾಗಲೆಲ್ಲ ಬಿಜೆಪಿ ರಾಜಕೀಯದಾಟಕ್ಕೆ ಚಾಲನೆ ಕೊಡುತ್ತದೆ ಎಂದು ದೂರಿದೆ.

ನಿಗಮ–ಮಂಡಳಿ ಅಧ್ಯಕ್ಷ ಸ್ಥಾನ ಕಲ್ಪಿಸಲು ಒತ್ತಾಯ



ಮೈಸೂರು, ಆ.9 (ಪಿಎಂ)– ಮೈಸೂರು ನಗರ ಬಿಜೆಪಿ ಎಸ್‌ಸಿ ಮೋರ್ಚಾದ ಪ್ರಧಾನ ಕಾರ್ಯದರ್ಶಿ ಎಂ.ನರಸಿಂಹಮೂರ್ತಿ ಅವರನ್ನು ಯಾವುದಾದರೂ ನಿಗಮ ಅಥವಾ ಮಂಡಳಿಯ ಅಧ್ಯಕ್ಷರಾಗಿ ನೇಮಕ ಮಾಡುವಂತೆ ವಿಶ್ವಋಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಒತ್ತಾಯಿಸಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಟ್ರಸ್ಟ್ ಅಧ್ಯಕ್ಷ ವಾಲ್ಮೀಕಿ ನಿಂಗರಾಜು, ಪಕ್ಷದ ನಿಷ್ಠಾವಂತ ಕಾರ್ಯಕರ್ತರಾದ ಎಂ.ನರಸಿಂಹಮೂರ್ತಿಯವರು ಎಲ್ಲಾ ಸಮುದಾಯ ಮತ್ತು ಸಂಘಟನೆಗಳೊಂದಿಗೆ ಉತ್ತಮ ಒಡನಾಟ ಹೊಂದಿರುವ ಮೂಲಕ ಪಕ್ಷದ ಬೆಳಗಣಿಗೆಗೆ ಪೂರಕವಾಗಿ ದುಡಿಯುತ್ತಿದ್ದಾರೆ. ಹಾಗಾಗಿ ಸರ್ಕಾರ ಅವರ ಸೇವೆಯನ್ನು ಪರಿಗಣಿಸಬೇಕು ಎಂದು ಮನವಿ ಮಾಡಿದರು. ಟ್ರಸ್ಟ್‌ನ ಕಾರ್ಯದರ್ಶಿ ಎಂ.ಡಿ.ನಾಗೇಂದ್ರ ಯಡಕೊಳ, ಸೋಮೇಶ್ವರಪುರ ಕೃಷ್ಣ, ಮಹದೇವನಾಯಕ, ಬಿ.ಮರಸ್ವಾಮಿ ನಾಯಕ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.



ತುಳಸಿ ಸಮರ್ಪಣೆ... ಮೈಸೂರಿನ ಬೆಮೆಲ್ ಬಡಾವಣೆಯ ಶ್ರೀ ರಾಜರಾಜೇಶ್ವರಿ ಭಜನಾ ಮಂಡಳಿ ವತಿಯಿಂದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಆಶ್ರಮದಲ್ಲಿ ನಡೆಯುತ್ತಿರುವ ಶ್ರೀ ಲಕ್ಷ್ಮಿ ನರಸಿಂಹ ಸ್ವಾಮಿಗೆ ಕೋಟಿ ತುಳಸಿ ಅರ್ಚನೆಗೆ 30 ಸಾವಿರ ತುಳಸಿಯನ್ನು ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿ ಅವರಿಗೆ ಸಮರ್ಪಣೆ ಮಾಡಿ, ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ ಮಾಡಲಾಯಿತು. ಮಂಡಳಿ ಅಧ್ಯಕ್ಷೆ ವಿಜಯಲಕ್ಷ್ಮಿ, ಭಾಗ್ಯ, ಸುನೀತಾ ಬಂಡೆ, ರೇವತಿ, ರೂಪ, ಅನ್ನಪೂರ್ಣ ಹಾಗೂ ಇನ್ನಿತರ ಸದಸ್ಯರು, ದೇವಸ್ಥಾನದ ಕಾರ್ಯದರ್ಶಿ ಮಲ್ಲೇಶಪ್ಪ, ಸಮಾಜ ಸೇವಕ ನಂ.ಶ್ರೀಕಂಠಕುಮಾರ್ ಉಪಸ್ಥಿತರಿದ್ದರು.

ಗೌರವಧನ ಹೆಚ್ಚಳಕ್ಕೆ ಸ್ವಾತಂತ್ರ್ಯ ಹೋರಾಟಗಾರರ ಮನವಿ

ಮೈಸೂರು,ಆ.9(ಆರ್‌ಕೆಬಿ)–ಸ್ವಾತಂತ್ರ್ಯ ಹೋರಾಟಗಾರರ ಗೌರವ ಧನವನ್ನು ಹೆಚ್ಚಳ ಮಾಡುವಂತೆ ಆಗ್ರಹಿಸಿ ಮೈಸೂರು ನಗರ ಮತ್ತು ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಸಂಘ ಮುಖ್ಯಮಂತ್ರಿಗಳನ್ನು ಒತ್ತಾಯಿಸಿದೆ.



ಸರ್ಕಾರ ಸ್ವಾತಂತ್ರ್ಯ ಹೋರಾಟಗಾರರಿಗೆ ನೀಡುತ್ತಿರುವ ಗೌರವ ಧನ 10,000ದಿಂದ 15 ಸಾವಿರಕ್ಕೆ ಏರಿಸುವಂತೆ ಮುಖ್ಯಮಂತ್ರಿಗಳನ್ನು ಮನವಿ ಮಾಡಿರುವ ಸಂಘದ ಅಧ್ಯಕ್ಷ ವೈ.ಸಿ.ರೇವಣ್ಣ, ಈ ಸಂಬಂಧ ಇತ್ತೀಚೆಗೆ ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳನ್ನು ಕಾಣಲು ಹೋಗಿದ್ದ ನಿಯೋಗಕ್ಕೆ ಸಿಎಂ ಭೇಟಿ ಸಾಧ್ಯವಾಗದೆ ನಿರಾಶರಾಗಿ ಹಿಂದಿರುಗಿದ್ದೆವು. ಹಾಗಾಗಿ ಈ ಬಾರಿಯಾದರೂ ನಮಗೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಲು ಅವಕಾಶ ಮಾಡಿಕೊಡುವಂತೆ ಅವರು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿದ್ದಾರೆ.

ಎನ್‌ಟಿಎಂ ಶಾಲೆ ಕಟ್ಟಡ ನಿರ್ಮಾಣಕ್ಕೆ ಆಗ್ರಹಿಸಿ ಧರಣಿ



ಮೈಸೂರು,ಆ.9(ಆರ್‌ಕೆಬಿ)–ರಾಮಕೃಷ್ಣ ಆಶ್ರಮ ಎನ್‌ಟಿಎಂ ಶಾಲೆಯ ಪುನರ್ ನಿರ್ಮಾಣಕ್ಕೆ ಮಾತಿನಂತೆ ನಡೆದುಕೊಳ್ಳಬೇಕು. ವಿವೇಕ ಸ್ಮಾರಕದ ಜೊತೆಗೆ ಎನ್‌ಟಿಎಂ ಶಾಲೆಯನ್ನು ನಿರ್ಮಿಸಬೇಕು ಎಂದು ಒತ್ತಾಯಿಸಿ ಮಹಾರಾಣಿ (ಎನ್‌ಟಿಎಂ) ಶಾಲೆ ಉಳಿಸಿ ಹೋರಾಟ ಒಕ್ಕೂಟದ ಸದಸ್ಯರು ಮಂಗಳವಾರ ಮೈಸೂರಿನ ಟೌನ್‌ಹಾಲ್ ಆವರಣದಲ್ಲಿರುವ ಡಾ.ಅಂಬೇಡ್ಕರ್ ಪ್ರತಿಮೆ ಬಳಿ ಧರಣಿ ನಡೆಸಿದರು.

ಶಾಲೆಯನ್ನು ಈಗಾಗಲೇ ಕೆಡವಿ ಹಾಕಲಾಗಿದ್ದು, ಅದಕ್ಕೂ ಮುಂಚೆ ಮಾಡಿಕೊಂಡ ಮೌಖಿಕ ಒಪ್ಪಂದದ ಪ್ರಕಾರ ಸ್ಮಾರಕದ ಜಾಗದಲ್ಲಿ ಶಾಲೆ ನಿರ್ಮಿಸಬೇಕೆಂದು ಘೋಷಣೆ ಕೂಗಿದರು. ಶಾಲೆಯಿದ್ದ ಅರ್ಧ ಜಾಗದಲ್ಲಿ ಹೊಸ ಶಾಲೆ ಕಟ್ಟಡ ನಿರ್ಮಿಸಿಕೊಡುವ ಬಗ್ಗೆ ಪ್ರಕಟಣೆ ಹೊರಡಿಸುವಂತೆ ರಾಮಕೃಷ್ಣ ಆಶ್ರಮವನ್ನು ಆಗ್ರಹಿಸಿ ದರು. ಪ್ರತಿಭಟನೆಯಲ್ಲಿ ಹೋರಾಟಗಾರರಾದ ಸ.ರ.ಸುದರ್ಶನ, ಎಂ.ಮೋಹನ್‌ಕುಮಾರ್ ಗೌಡ, ಮಾಜಿ ಮೇಯರ್ ಪುರುಷೋತ್ತಮ್, ಬಸವರಾಜ್, ಮಧುಮತಿ, ಸಿದ್ದಪ್ಪ, ರಾಜ್ ಕಿಶೋರ್, ಮಹದೇವ ಇನ್ನಿತರರಿದ್ದರು.

ಮೈಸೂರಲ್ಲಿ ನಾಳೆ ಯುವಜನ ಮಹೋತ್ಸವ

ಮುಖ್ಯಮಂತ್ರಿಗಳಿಂದ ಮೈಸೂರು ವಿವಿ ಇಂಜಿನಿಯರಿಂಗ್ ಕಾಲೇಜು ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ

ಮೈಸೂರು,ಆ.9(ಆರ್‌ಕೆ)–ಆಗಸ್ಟ್ 11ರಂದು ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಯುವಜನ ಮಹೋತ್ಸವ ಏರ್ಪಡಿಸಲಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಜಿ.ಹೇಮಂತಕುಮಾರ್ ತಿಳಿಸಿದ್ದಾರೆ.



ಪ್ರೊ.ಹೇಮಂತಕುಮಾರ್

ಕ್ರಾಫರ್ಡ್ ಭವನದಲ್ಲಿ ಈ ಕುರಿತು ಸುದ್ದಿಗಾರರಿಗೆ ಮಾಹಿತಿ ನೀಡಿದ ಅವರು, ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಮೈಸೂರು ವಿಶ್ವವಿದ್ಯಾನಿಲಯವು ಗುರುವಾರ ಆಯೋಜಿಸಿರುವ ಯುವಜನ ಮಹೋತ್ಸವವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅಂದು ಬೆಳಗ್ಗೆ 11 ಗಂಟೆಗೆ ಉದ್ಘಾಟಿಸುವರು ಎಂದರು.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಚಲನಚಿತ್ರ ನಟ ಯಶ್, ಸಂಸದರು, ಶಾಸಕರು, ವಿಧಾನಪರಿಷತ್ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ಖ್ಯಾತ ಸಂಗೀತ ನಿರ್ದೇಶಕ ಅರ್ಜುನ ಜನ್ಯ ಸೇರಿದಂತೆ ಹಲವು ಕಲಾವಿದರು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಡುವರು ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಕಾಲೇಜುಗಳ 25 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಕಾರ್ಯಕ್ರಮದಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ. ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು, ಸಾರ್ವಜನಿಕರೂ ಸಹ ಯುವಜನ ಮಹೋತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಮಾನಸಗಂಗೋತ್ರಿ ಆವರಣದಲ್ಲಿ ನಿರ್ಮಿಸಿರುವ ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿನ ತಂತ್ರಜ್ಞಾನ ಭವನದ ಕಟ್ಟಡ, ಕೋರ್ಸ್‌ಗಳು ಹಾಗೂ ವಿದ್ಯಾರ್ಥಿನಿಲಯ, ಫಾರ್ಮಸಿ ಕಾಲೇಜು ಕಟ್ಟಡ, ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಸುವರ್ಣ ಮಹೋತ್ಸವ ಕಟ್ಟಡ, ಭೂಗೋಳ ಶಾಸ್ತ್ರ ಮತ್ತು ಭೂ ವಿಜ್ಞಾನ ವಿಭಾಗಗಳ ವಿಸ್ತರಣಾ ಕಟ್ಟಡಗಳನ್ನು ಮುಖ್ಯಮಂತ್ರಿಗಳು ಅಂದು ಉದ್ಘಾಟಿಸುವರು.

ಗಣಕ ವಿಜ್ಞಾನ ಅಧ್ಯಯನ ವಿಭಾಗದ ನವೀಕೃತ ಸಭಾಂಗಣ, ಬಸವೇಶ್ವರ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಕಟ್ಟಡಗಳನ್ನು ಉದ್ಘಾಟಿಸಲಿರುವ ಬಸವರಾಜ ಬೊಮ್ಮಾಯಿ ಅವರು, ಪ್ರಾಚ್ಯವಿದ್ಯಾ ಸಂಶೋಧನಾಲಯ ಮತ್ತು ಮಿಥಿಕ್ ಸೊಸೈಟಿ ಕಾರ್ಯಕ್ರಮ ಹಾಗೂ ಗ್ರಹನಿಧಿ ಕೃತಿಯನ್ನು ಬಿಡುಗಡೆ ಮಾಡುವರಲ್ಲದೆ, ಸೆಂಟರ್ ಆಫ್ ಎಕ್ಸಲೆನ್ಸ್ ಕೋರ್ಸ್‌ಗಳಿಗೂ ಚಾಲನೆ ನೀಡುವರು. ಕುಲಸಚಿವ ಪ್ರೊ. ಆರ್.ಶಿವಪ್ಪ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ನೇಮಕಾತಿಗೆ ಅರ್ಜಿ ಆಹ್ವಾನ

ಮೈಸೂರು, ಆ.9– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ ವತಿಯಿಂದ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಗ್ರಾಮೀಣ ಪುನರ್ವಸತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗ್ರಾಮೀಣ ಪುನರ್ವಸತಿ ಕಾರ್ಯಕ್ರಮದಡಿಯಲ್ಲಿ ಕಾರ್ಯಕರ್ತರನ್ನು ಗೌರವಧನದ ಆಧಾರದ ಮೇಲೆ ಕರ್ತವ್ಯ ನಿರ್ವಹಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಆ.17ರೊಳಗಾಗಿ ಅರ್ಜಿ ಸಲ್ಲಿಸಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು, ಹುಣಸೂರು ಮೊ.ಸಂ:9739644342 ಸಂಪರ್ಕಿಸಬಹುದು.

ಮೈಸೂರು ಮಿತ್ರ

ಮೂರನೇ ಪುಟದಿಂದ

ಅಭಿಮನ್ಯು ನೇತೃತ್ವದ ಗಜಪಡೆ

ಪೂಜೆ ಆರಂಭವಾಗಲಿದ್ದು, ದ್ವಾರಪಾಲಕ ಪೂಜೆ, ಆನೆಗಳ ಪಾದಪೂಜೆ, ಸಂಕಲ್ಪ, ಚಾಮರಸೇವೆ, ಮಂಗಳಾರತಿ ಬಳಿಕ ಪುಷ್ಪಾರ್ಚನೆ ಮಾಡಿ ಜಯಮಾರ್ತಾಂಡ ದ್ವಾರವನ್ನು ದಾಟಿಸಲಾಗುತ್ತದೆ. ಈ ವೇಳೆ ಪೊಲೀಸ್ ಇಲಾಖೆ ವತಿಯಿಂದ ಗಜಪಡೆಗೆ 'ಗಾರ್ಡ್ ಆಫ್ ಹಾನರ್' ಗೌರವ ಸಮರ್ಪಿಸಲಾಗುತ್ತದೆ. ಬಳಿಕ ಕ್ಯಾಪ್ಟನ್ ಅಭಿಮನ್ಯು, ಅರ್ಜುನ, ಭೀಮ, ಮಹೇಂದ್ರ, ಗೋಪಾಲಸ್ವಾಮಿ, ಧನಂಜಯ, ಕಾವೇರಿ, ಚೈತ್ರ ಹಾಗೂ ಲಕ್ಷ್ಮೀ ಆನೆಗಳು ಅರಮನೆಯ ಮುಂಭಾಗದ ಪ್ರಾಂಗಣದವರೆಗೂ ಮಂಗಳವಾದ್ಯ, ಛತ್ರಿ-ಚಾಮರ ಸೇವೆಯೊಂದಿಗೆ ಆಗಮಿಸಲಿವೆ. ಬಳಿಕ ಮಾವುತ ಮತ್ತು ಕಾವಾಡಿಗಳಿಗೆ ಅರಮನೆ ಆವರಣದಲ್ಲಿ ವಾಸ್ತವ್ಯ ಹೂಡಲು ಅಗತ್ಯ ವಸ್ತುಗಳುಳ್ಳ ಕಿಟ್ ನೀಡಲಾಗುತ್ತದೆ. ಅಲ್ಲದೆ ಜಿಲ್ಲಾ ಉಸ್ತುವಾರಿ ಸಚಿವರಿಂದ ಸಂಪ್ರದಾಯದಂತೆ ದಸರಾ ಮಹೋತ್ಸವವನ್ನು ಯಶಸ್ವಿಯಾಗಿ ನಡೆಸುವಂತೆ ಮಾವುತ, ಕಾವಾಡಿಗಳಿಗೆ ಫಲತಾಂಬೂಲ ನೀಡಿ ಗೌರವಿಸಲಾಗುತ್ತದೆ. ಬೆ.10.30ರಿಂದ 10.45ರೊಳಗೆ ಅರಮನೆಯ ಗೊಂಬೆ ತೊಟ್ಟಿಯಲ್ಲಿ ಚಾಮುಂಡೇಶ್ವರಿ ದೇವಿಗೆ ಪೂಜೆ ಸಲ್ಲಿಸುವ ಮೂಲಕ ಗಜಪಯಣದ ಕಾರ್ಯಕ್ರಮಕ್ಕೆ ತೆರೆ ಬೀಳಲಿದೆ.

ಟೆಂಟ್ ನಿರ್ಮಾಣ: ಈಗಾಗಲೇ ಅರಮನೆ ಆವರಣದಲ್ಲಿ ಮಾವುತ ಮತ್ತು ಕಾವಾಡಿಗಳ ವಾಸ್ತವ್ಯಕ್ಕೆ 30 ಟೆಂಟ್ ನಿರ್ಮಿಸಲಾಗಿದೆ. ಅಲ್ಲದೆ, ದಸರಾ ಗಜಪಡೆಯ ನಾಯಕ ಅಭಿಮನ್ಯು ಹಾಗೂ ಕುಮ್ಕಿ ಆನೆ ವಾಸ್ತವ್ಯಕ್ಕೆ ಪ್ರತ್ಯೇಕವಾಗಿ ಕೋಡಿ ಸೋಮೇಶ್ವರ ದೇವಾಲಯದ ಬಳಿ ಟೆಂಟ್ ನಿರ್ಮಿಸಲಾಗಿದೆ. ಗುರುವಾರದ ದಸರಾ ಗಜಪಡೆಗೆ ತೂಕ ಮಾಡಿಸಲಾಗುತ್ತದೆ. ಶುಕ್ರವಾರದಿಂದ ಜಂಬೂಸವಾರಿ ಸಾಗುವ ಮಾರ್ಗದಲ್ಲಿ ತಾಲೀಮು ಆರಂಭವಾಗಲಿದೆ.

ಅಪ್ರಾಪ್ತ ಮಗನಿಂದಲೇ ತಂದೆಯ ಬರ್ಬರ ಹತ್ಯೆ

ಘಟನೆಯ ವಿವರ: ಮನೆಯನ್ನು ಬಾಡಿಗೆಗೆ, ಭೋಗ್ಯಕ್ಕೆ ಕೊಡಿಸುವ ವೃತ್ತಿ ಮಾಡುತ್ತಿದ್ದ ಸಂಪತ್‌ಕುಮಾರ್, ಅದರಲ್ಲಿ ಬಂದ ಕಮಿಷನ್ ಹಣವನ್ನು ಮನೆಗೆ ಕೊಡದೇ ಕಾಲ ಕಳೆಯುತ್ತಿದ್ದು, ಸೋಮವಾರ ಪತ್ನಿ ಗಾಯತ್ರಿ ಎಂದಿನಂತೆ ಶಾಲೆಗೆ ಹೋಗಿದ್ದರು. ಕಾಲೇಜೊಂದರಲ್ಲಿ ಡಿಪ್ಲೊಮಾ ಓದುತ್ತಿದ್ದ ಪುತ್ರ, ನಿತ್ಯ ಮಧ್ಯಾಹ್ನ ಶಾಲೆಗೆ ಹೋಗಿ ತಾಯಿಯೊಂದಿಗೆ ಊಟ ಮಾಡಿ ಕಾಲೇಜಿಗೆ ಹೋಗಿ ಸಂಜೆ ಮನೆಗೆ ಹಿಂದಿರುಗುತ್ತಿದ್ದವನು, ತನ್ನ ಸ್ನೇಹಿತನ ಹುಟ್ಟುಹಬ್ಬವಿದ್ದ ಕಾರಣ ಅಲ್ಲಿಯೇ ಊಟ ಮಾಡಿಕೊಂಡು ಸೋಮವಾರ ಮಧ್ಯಾಹ್ನ 2.40ಕ್ಕೆ ಮನೆಗೆ ಹಿಂದಿರುಗಿದ್ದ. ಆ ವೇಳೆ ಹಾಲ್‌ನಲ್ಲಿ ಚೇರ್ ಮೇಲೆ ಕುಳಿತು, ವಾಲ್ಯೂಂ ಜೋರಾಗಿ ಹಾಕಿಕೊಂಡು ಟಿವಿ ನೋಡುತ್ತಿದ್ದ ತಂದೆ ಬಳಿ ಹೋಗಿ ಟಿವಿ ವಾಲ್ಯೂಂ ಕಡಿಮೆ ಮಾಡುವಂತೆ ಹೇಳಿದರೂ ಕೇಳದೇ ಜಗಳ ಆರಂಭಿಸಿದ ಸಂಪತ್‌ಕುಮಾರ್ ಅವರ ತಲೆಗೆ ಕೊಠಡಿಯಲ್ಲಿದ್ದ ರಾಡ್ ತಂದು ಕುಳಿತಲ್ಲೇ ಏಳೆಂಟು ಬಾರಿ ಬಲವಾಗಿ ಹೊಡೆದು ಕೊಲೆ ಮಾಡಿದ ಪುತ್ರ, ನಂತರ ರಕ್ತದ ಕಲೆಗಳಾಗಿದ್ದ ತನ್ನ ಶರ್ಟ್, ಪ್ಯಾಂಟ್ ಅನ್ನು ಬದಲಾಯಿಸಿಕೊಂಡಿದ್ದಾನೆ. ನಂತರ ಮೊದಲು ತನ್ನ ತಾಯಿಗೆ ಕರೆ ಮಾಡಿ ಯಾರೋ ಒಬ್ಬ ಬಂದು ಅಪ್ಪನನ್ನು ಕೊಲೆ ಮಾಡಿ ಓಡಿ ಹೋದ ಎಂದು ಮಾಹಿತಿ ನೀಡಿ, ಆಕೆ ಬರುವಷ್ಟರಲ್ಲಿ ನೆರೆಹೊರೆಯವರಿಗೂ ವಿಷಯ ತಿಳಿಸಿದ ಪುತ್ರ, ರಕ್ತಸಿಕ್ತ ತಂದೆ ಮೃತದೇಹದ ಬಳಿಯೇ ಅಳುತ್ತಾ ಕುಳಿತಿದ್ದ.

ಸುಳ್ಳು ಹೇಳಿದ: ವಿಷಯ ತಿಳಿಯುತ್ತಿದ್ದಂತೆಯೇ ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಡಿಸಿಪಿಗಳು, ಎಸಿಪಿ ಹಾಗೂ ಇನ್ಸ್‌ಪೆಕ್ಟರ್‌ಗಳು, ಮಹಜರು ನಡೆಸಿದ ನಂತರ ಕೊಲೆ ಹೇಗಾಯಿತು ಎಂದು ಪ್ರಶ್ನಿಸಿದಾಗ ಅಪ್ರಾಪ್ತ ಮಗ ತೊದಲುತ್ತಾ ನೀಡಿದ ಹೇಳಿಕೆಯಿಂದ ಹಲವು ಅನುಮಾನ ಮೂಡಿದ್ದವು. ಮಧ್ಯಾಹ್ನ ನಾನು ಮನೆಗೆ ಬಂದಾಗ ಅಪ್ಪ ಇದ್ದರು. ನನ್ನ ಹಿಂದೆಯೇ ಯಾರೋ ಒಬ್ಬ ಬಂದು ಏಕಾಏಕಿ ರಾಡಿನಿಂದ ಅಪ್ಪನ ತಲೆಗೆ ಹೊಡೆದು ಓಡಿ ಹೋದ. ತಡೆಯಲು ಹೋದ ನನಗೂ ಹೊಡೆದು ಕೊಲೆ ಮಾಡುತ್ತೇನೆಂದು ಹೆದರಿಸಿದ್ದರಿಂದ ನಾನು ಬಿಡಿಸಲು ಆಗಲಿಲ್ಲ ಎಂದು ಹೇಳಿದ್ದ.

ಬೇರೆ ಯಾರೂ ಬಂದಿರಲಿಲ್ಲ: ಸಂಶಯಗೊಂಡ ಪೊಲೀಸರು ಮನೆ ಸುತ್ತಲಿನ ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಪರಿಶೀಲಿಸಿದಾಗ ಸೋಮವಾರ ಬೆಳಗ್ಗೆಯಿಂದಲೂ ಯಾರೂ ಆ ಮನೆಗೆ ಬಂದು ಹೋಗಿಲ್ಲ ಎಂಬುದು ದೃಢಪಟ್ಟಿತಾದರೂ, ಅಪ್ಪ ಕೊಲೆಯಾಗಿದ್ದರಿಂದ ದುಃಖದಲ್ಲಿರುವ ಮಗನಿಗೆ ಘಾಸಿ ಮಾಡಬಾರದೆಂದು ಆತನನ್ನು ಸಮಾಧಾನಪಡಿಸಿ ದೇಹವನ್ನು ಶವಾಗಾರಕ್ಕೆ ಸ್ಥಳಾಂತರಿಸಿದ ಪೊಲೀಸರು, ಗಾಯತ್ರಿ ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದರು.

ನಾನೇ ಅಪ್ಪನನ್ನು ಕೊಂದೆ: ಮಧ್ಯಾಹ್ನದಿಂದಲೂ ಯಾರೋ ಒಬ್ಬ ಬಂದು ಏಕಾಏಕಿ ಹೊಡೆದು ಕೊಲೆ ಮಾಡಿ ಪರಾರಿಯಾದ ಎಂದು ಹೇಳುತ್ತಿದ್ದ ಅಪ್ರಾಪ್ತ, ಠಾಣೆಗೆ ಕರೆಸಿ ನಯವಾಗಿ ಪ್ರಶ್ನಿಸಿದಾಗ, ತಡರಾತ್ರಿ 11.45 ಗಂಟೆ ವೇಳೆಗೆ ನಾನೇ ಅಪ್ಪನನ್ನು ರಾಡಿನಿಂದ ತಲೆಗೆ ಹೊಡೆದು ಕೊಲೆ ಮಾಡಿದೆ ಎಂದು ಒಪ್ಪಿಕೊಂಡಿದ್ದಾನೆ.

ಮುಂದೆಯೇ ನಿಂತು ಹೊಡೆದ: ನಮ್ಮ ತಾಯಿಗೆ ನೀಡುತ್ತಿದ್ದ ಹಿಂಸೆ, ಕಿರುಕುಳದಿಂದ ರೋಸಿ ಹೋಗಿದ್ದೆ ಸಾರ್. ನಮ್ಮ ಮನೆಯಲ್ಲಿ ನೆಮ್ಮದಿ ಇಲ್ಲದಂತೆ ಮಾಡಿದ್ದ ನನ್ನಪ್ಪನನ್ನು ಚೇರ್ ಮೇಲೆ ಕುಳಿತಿದ್ದಾಗ ಹಿಂದಿನಿಂದ ಹೋಗಿ ತಲೆಗೆ ಏಳೆಂಟು ಬಾರಿ ಮನಸೋ ಇಚ್ಛೆ ಹೊಡೆದು ಸಾಯಿಸಿದೆ ಸಾರ್ ಎಂದು ಬಾಲಕ ಪೊಲೀಸರಿಗೆ ಹೇಳಿಕೆ ನೀಡಿದ್ದಾನೆ.

15 ದಿನದ ಹಿಂದೆಯೇ ಪ್ಲಾನ್ ಮಾಡಿದ್ದ: ಗರ್ಭಿಣಿಯಾಗಿದ್ದಾಗಿನಿಂದಲೇ ಸರಿಯಾಗಿ ಊಟ, ತಿಂಡಿ ಕೊಡದೇ ಹೊಡೆದು ಹಿಂಸೆ ನೀಡುತ್ತಿದ್ದನೆಂದು ನನ್ನ ತಾಯಿ ನನಗೆ ಹೇಳಿದ್ದರು. ನಂತರವೂ ನಿತ್ಯ ಹೊಡೆದು-ಬಡಿದು ತೊಂದರೆ ನೀಡುತ್ತಿದ್ದ ತಂದೆ, ನಾನು ಬುದ್ಧಿ ಬಂದಾಗಿನಿಂದ ಮನೆ ಕಸ ಗುಡಿಸಲು ಅವಕಾಶ ಕೊಟ್ಟಿಲ್ಲ. ನಿತ್ಯ ಟಿವಿ ಮತ್ತು ಟೇಪ್‌ರೆಕಾರ್ಡರ್ ಎರಡನ್ನೂ ಒಟ್ಟಿಗೇ ಆನ್ ಮಾಡಿಕೊಂಡು ಹೆಚ್ಚುವರಿ ಸ್ಪೀಕರ್ ಹಾಕಿ ಜೋರಾಗಿ ವಾಲ್ಯೂಂ ಕೊಟ್ಟು ಹಾಡು ಕೇಳುತ್ತಿದ್ದರಿಂದ ನಮಗೆ ತಲೆ ಚಿಟ್ಟು ಹಿಡಿದುಹೋಗುತ್ತಿತ್ತು. ಅವನ ಈ ಅಸಹಜ ಮನಸ್ಥಿತಿಯಿಂದ ನಮ್ಮ ಮನೆ ದನದ ಕೊಟ್ಟಿಗೆಯಂತಿದ್ದರಿಂದ ಯಾರೂ ನಮ್ಮ ಮನೆಗೆ ಬರುತ್ತಿರಲಿಲ್ಲ. ಇನ್ನೂ ಆತನ ಉಪಟಳ ಸಹಿಸಲು ಸಾಧ್ಯವಿಲ್ಲ ಎಂದು ಕಳೆದ 15 ದಿನಗಳ ಹಿಂದೆಯೇ ಅಪ್ಪನನ್ನು ಮುಗಿಸಲೇಬೇಕೆಂದು ತೀರ್ಮಾನಿಸಿ ಕಬ್ಬಿಣದ ರಾಡ್ ತಂದು ರೂಂನಲ್ಲಿ ಬಚ್ಚಿಟ್ಟು ಸಮಯಕ್ಕಾಗಿ ಕಾಯುತ್ತಿದ್ದೆ ಎಂದು ಹೇಳಿಕೆಯಲ್ಲಿ ಬಾಯ್ಬಿಟ್ಟಿದ್ದಾನೆ.

ಹಣಕ್ಕಾಗಿ ಪೀಡಿಸುತ್ತಿದ್ದ: ಇತ್ತೀಚೆಗೆ ಏನೂ ಕೆಲಸ ಮಾಡದೇ ಸದಾ ಮನೆಯಲ್ಲೇ ಇರುತ್ತಿದ್ದ ಅಪ್ಪ ನಮ್ಮ ತಾಯಿ ಶಾಲೆಯಲ್ಲಿ ಪಾಠ ಮಾಡಿ ತರುತ್ತಿದ್ದ 10,000 ರೂ.ಗಳನ್ನೂ ಕೊಡುವಂತೆ ಪೀಡಿಸುತ್ತಿದ್ದ. ಹಣ ಕೊಡದಿದ್ದರೆ ಜಗಳ ತೆಗೆದು ಹೊಡೆಯುತ್ತಿದ್ದರಿಂದ ಮನೆಯಲ್ಲಿ ನೆಮ್ಮದಿ ಎಂಬುದೇ ಇರಲಿಲ್ಲ. ನಾನೂ ಎಷ್ಟೂ ಅಂತ ಸಹಿಸಲಿ. ಅಮ್ಮನ ಸ್ಥಿತಿ ಕಂಡು ತುಂಬಾ ಬೇಜಾರಾಗಿತ್ತು. ಇಂತಹ ಅಪ್ಪ ಇರಲೇಬಾರದೆಂದು ತೀರ್ಮಾನಿಸಿ ಮುಗಿಸಿಬಿಟ್ಟೆ ಎಂದು ಆತ ಪೊಲೀಸರಿಗೆ ಸವಿವರವಾಗಿ ತನ್ನ ಅಳಲು ತೋಡಿಕೊಂಡಿದ್ದಾನೆ. ಮಧ್ಯರಾತ್ರಿಯೇ ಅಪ್ರಾಪ್ತನನ್ನು ವಶಕ್ಕೆ ಪಡೆದ ಪೊಲೀಸರು, ಇಂದು ಬೆಳಗ್ಗೆ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ, ಆತನನ್ನು ಸರ್ಕಾರಿ ಬಾಲಕರ ಬಾಲಮಂದಿರಕ್ಕೆ ಒಪ್ಪಿಸಿದರು. ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಂತರ ಸಂಪತ್‌ಕುಮಾರ್ ದೇಹವನ್ನು ವಾರಸುದಾರರಿಗೆ ಒಪ್ಪಿಸಲಾಯಿತು.

ದೊಣ್ಣೆ ಇಟ್ಟುಕೊಂಡು ಮಲಗುತ್ತಿದ್ದ ಸಂಪತ್‌ಕುಮಾರ್

ನರಕಯಾತನೆಯಾಗುತ್ತಿತ್ತು. ನಮ್ಮಮ್ಮ, ನಾನು ಪ್ರತಿನಿತ್ಯ ಕಣ್ಣೀರಲ್ಲಿ ಕೈತೊಳೆಯುತ್ತಿದ್ದೆವು ಎಂದು ತಿಳಿಸಿದ್ದಾನೆ. ಮನೆಯಲ್ಲಿ ಒಂದು ದಿನವೂ ಕಸ ಗುಡಿಸಲು ಬಿಡುತ್ತಿರಲಿಲ್ಲ. ಯಾವ ವಸ್ತುವನ್ನೂ ಮುಟ್ಟುವಂತಿರಲಿಲ್ಲವಾದ್ದರಿಂದ ನಮ್ಮ ಮನೆ ದನದ ಕೊಟ್ಟಿಗೆಯಂತಿತ್ತು. ಸ್ನಾನ ಮಾಡಬಾರದು, ಬಟ್ಟೆ ಒಗೆಯಬಾರದು, ಕಸ ಗುಡಿಸಿದರೆ ಸಂಪತ್ತು ಹೋಗುತ್ತದೆ, ವಸ್ತುಗಳ ಕದಲಿಸಿದರೆ ನಮಗೆ ಕೆಟ್ಟದ್ದಾಗುತ್ತದೆ ಎಂದು ಏನು ಮಾಡಲೂ ಬಿಡುತ್ತಿರಲಿಲ್ಲ ಎಂದು ಅಪ್ರಾಪ್ತ ಪೊಲೀಸ್ ಹೇಳಿಕೆಯಲ್ಲಿ ಹೇಳಿದ್ದಾನೆ. ಮನೆ ತುಂಬಾ ಕಸ, ಇಸ್ಸತ್ತ ವಸ್ತುಗಳು ಅಸ್ತವ್ಯಸ್ತವಾಗಿ ಬಿದ್ದಿವೆ. ಮನೆಗೆ ಪೇಂಟ್ ಮಾಡಿ ಅದೆಷ್ಟೋ ವರ್ಷಗಳಾಗಿವೆ. ಮನೆ ಸುತ್ತ ಗಿಡಗಂಟಿಗಳು ಬೆಳೆದುಕೊಂಡಿವೆ. ನಮ್ಮ ಈ ಸ್ಥಿತಿ ಕಂಡು ಸ್ನೇಹಿತರು, ಸಂಬಂಧಿಕರ್ಯಾರೂ ಈವರೆಗೆ ಮನೆಗೆ ಬಂದಿದ್ದನ್ನು ನಾನು ನೋಡೇ ಇಲ್ಲ. ಇಂತಹ ಹೀನಾಯ ಪರಿಸ್ಥಿತಿಯಲ್ಲಿ ಬದುಕುವಂತೆ ಮಾಡಿದ ಅಪ್ಪನ ಮೇಲೆ ಅಸಹ್ಯ ಉಂಟಾಗಿತ್ತು ಎಂದು ತಿಳಿಸಿದ್ದಾನೆ. ಯಾವಾಗಲೂ ಟಿವಿ, ಟೇಪ್‌ರೆಕಾರ್ಡರ್ ಅನ್ನು ಒಟ್ಟಿಗೇ ಆನ್ ಮಾಡಿ ಜೋರಾಗಿ ವಾಲ್ಯೂಂ ಕೊಟ್ಟು ಹಾಡು ಕೇಳುತ್ತಾ ಕುಳಿತುಕೊಳ್ಳುತ್ತಿದ್ದುದು, ಸೌಂಡ್ ಕಡಿಮೆ ಮಾಡಿ ಎಂದರೆ ಹರಿಹಾಯುತ್ತಿದ್ದ ಅಪ್ಪ, ಒಮ್ಮೆಯೂ ನಾವು ನೆಮ್ಮದಿಯಿಂದ ಬದುಕಲು ಬಿಡಲಿಲ್ಲ. ನೆರೆಹೊರೆಯವರಿಗೂ ಕಿರಿಕಿರಿ ಉಂಟಾಗುತ್ತಿತ್ತು. ಅದರಿಂದ ನಮಗೆ ತೀವ್ರ ತೊಂದರೆ ಉಂಟಾಗುತ್ತಿತ್ತು ಎಂದು ಅಪ್ರಾಪ್ತ ಹೇಳಿಕೊಂಡಿದ್ದಾನೆ. ದೆವ್ವಗಳು ಬರುತ್ತವೆ ಎಂದು ತನ್ನ ಪಕ್ಕದಲ್ಲೇ ದೊಣ್ಣೆ ಇರಿಸಿಕೊಂಡು ಮಲಗುತ್ತಿದ್ದ ಸಂಪತ್ ಕುಮಾರ್, ಮಧ್ಯರಾತ್ರಿ ಎದ್ದು ಬಾಗಿಲು ತೆಗೆದು ಓಡಾಡುತ್ತಿದ್ದರಿಂದ ನೆರೆಹೊರೆಯವರಿಗೂ ತೊಂದರೆ ಆಗುತ್ತಿತ್ತು. ಎಷ್ಟೋ ಸಲ ಬೇರೆಯವರ ಮನೆ ಗೇಟ್ ಕುಟ್ಟಿ ಎಬ್ಬಿಸಿ ಅವರಿಂದ ಬೈಸಿಕೊಂಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ನಾವು ಬದುಕುವುದಾದರೂ ಹೇಗೆ ನೀವೇ ಹೇಳಿ, ಸಾರ್ ಎಂದು ಅಪ್ರಾಪ್ತ ಪೊಲೀಸರನ್ನೇ ಪ್ರಶ್ನಿಸಿದ್ದಾನೆ. ನಮ್ಮಮ್ಮ ಗರ್ಭಿಣಿಯಾಗಿದ್ದಾಗ ನಮ್ಮಪ್ಪ ಸರಿಯಾಗಿ ಊಟ-ತಿಂಡಿ ಕೊಡದೇ, ಚಿಕಿತ್ಸೆಯನ್ನೂ ಕೊಡಿಸದೇ ಹಿಂಸೆ ನೀಡಿದ್ದರೆಂದು ಆಗಾಗ ನನಗೆ ಹೇಳಿದ್ದರು. ಅವರ ವರ್ತನೆಯಿಂದ ಸಂಬಂಧಿಕರೆಲ್ಲಾ ದೂರವಾಗಿದ್ದಾರೆ. ಪ್ರಾಣಿಗಳಿಗಿಂತಲೂ ಕೀಳಾಗಿ ಬದುಕುವ ಪರಿಸ್ಥಿತಿಗೆ ಕಾರಣನಾದ ನಮ್ಮಪ್ಪನನ್ನು ಮುಗಿಸಬೇಕೆಂದು ತೀರ್ಮಾನಿಸಿದ್ದೆ. ಇಂದು ಅವಕಾಶ ಸಿಕ್ಕಿತು ಮನಸ್ಸೋ ಇಚ್ಛೆ ಹೊಡೆದು ಹತ್ಯೆ ಮಾಡಿಬಿಟ್ಟೆ ಸಾರ್ ಎಂದು ಹೇಳಿಕೆ ನೀಡಿದ್ದಾನೆ.

ಇನ್ನೂ ಆರು ತಿಂಗಳು ಬೇಕು

ಮುಗಿಸುವಂತೆ ಒತ್ತಡ ತಂದಿದ್ದೇವೆ. ಮಳೆ ನೀರು ಸರಾಗವಾಗಿ ಹೋಗಲು ಮತ್ತೆ ಕೆಲವೆಡೆ ಭೂ ಸ್ವಾಧೀನ ಮಾಡಬೇಕಾಗಿದೆ. ಭೂಸ್ವಾಧೀನದ ನಂತರ ರಾಷ್ಟ್ರೀಯ ಹೆದ್ದಾರಿ ಮತ್ತು ಸರ್ವೀಸ್ ರಸ್ತೆಯೂ ಸುರಂಗ ಮಾರ್ಗಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಲಾಗುವುದು ಎಂದು ಮಾಹಿತಿ ನೀಡಿದ್ದಾರೆ. ಹೆದ್ದಾರಿ ಸುರಕ್ಷತೆ ಬಗ್ಗೆ ಈ ವಾರದಲ್ಲಿ ದೆಹಲಿಯಿಂದ ಅಧಿಕಾರಿಗಳು ಬಂದು ಪರಿಶೀಲನೆ ನಡೆಸಲಿದ್ದಾರೆ. ಆನಂತರ ಮೊದಲ ಹಂತದ ಒಂದು ಭಾಗದಲ್ಲಿ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಗುವುದಾಗಿ ಹೇಳಿದ್ದಾರೆ. ಬಹುತೇಕ ಬೈಪಾಸ್ ರಸ್ತೆಗಳ ಕಾಮಗಾರಿ ಪೂರ್ಣಗೊಂಡಿದೆ. ಮೇಲ್ಸೇತುವೆ ಕಾಮಗಾರಿ ಭರದಿಂದ ನಡೆಯುತ್ತಿವೆ. ದಶಪಥ ರಸ್ತೆ ಕಾಮಗಾರಿ ಪೂರ್ಣಗೊಂಡ ನಂತರ ಈ ನಗರಗಳ ನಡುವೆ 90 ನಿಮಿಷಗಳಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಪ್ರಯಾಣ ಮಾಡಬಹುದಾಗಿದೆ ಎಂದಿದ್ದಾರೆ.

ಆಯಿಷ್ 75ನೇ ವಾರ್ಷಿಕ ದಿನಾಚರಣೆ

ಮಕ್ಕಳು, ಹಿರಿಯರ ಸಂವಹನ ಅಸ್ವಸ್ಥತೆ ಪರಿಹಾರಕ್ಕೆ ಕೇಂದ್ರ ಬದ್ಧ

ಕೇಂದ್ರ ಆರೋಗ್ಯ-ಕುಟುಂಬ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್

ಮೈಸೂರು, ಆ. 9 (ಆರ್‌ಕೆಬಿ)– ಭಾರತ ಸರ್ಕಾರವು ಮಕ್ಕಳು ಮತ್ತು ಹಿರಿಯರ ಸಂವಹನ ಅಸ್ವಸ್ಥತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಬದ್ಧವಾಗಿದೆ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ ತಿಳಿಸಿದರು.

ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ (ಆಯಿಷ್)ಯ ನಾಲೆಡ್ಜ್ ಪಾರ್ಕ್ ಸೆಮಿನಾರ್ ಹಾಲ್‌ನಲ್ಲಿ ಮಂಗಳವಾರ 57ನೇ ವಾರ್ಷಿಕ ದಿನಾಚರಣೆಯಲ್ಲಿ ವರ್ಚುವಲ್ ಮೂಲಕ ಮಾತನಾಡಿದರು. ಭಾರತ ಸರ್ಕಾರವು ಮಕ್ಕಳು ಮತ್ತು ವಯಸ್ಕರಲ್ಲಿ ಸಂವಹನ ಅಸ್ವಸ್ಥತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಬದ್ಧವಾಗಿದೆ. 1965ರಲ್ಲಿ ಸ್ಥಾಪನೆಯಾದ ಮೈಸೂರಿನ ಆಯಿಷ್ ಸಂಸ್ಥೆ ವಾಕ್ ಮತ್ತು ಶ್ರವಣ ದೋಷಗಳ ಕ್ಷೇತ್ರದಲ್ಲಿ ಒಂದು ಪ್ರಮುಖ ಸಂಸ್ಥೆಯಾಗಿದೆ. ಕಳೆದ 57 ವರ್ಷಗಳಿಂದ, ಸಂಸ್ಥೆಯು ಸಂವಹನ ಅಸ್ವಸ್ಥತೆ ಹೊಂದಿರುವ ವ್ಯಕ್ತಿಗಳಿಗೆ ಸೇವೆಗಳನ್ನು ಒದಗಿಸಲು ಯಶಸ್ವಿಯಾಗಿ ಕೆಲಸ ಮಾಡುತ್ತಿದೆ ಎಂದರು.



ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ 57ನೇ ವಾರ್ಷಿಕ ದಿನಾಚರಣೆಯನ್ನು ಉದ್ಘಾಟಿಸಿ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿದರು. ಚಿತ್ರದಲ್ಲಿ ಆಯಿಷ್ ನಿರ್ದೇಶಕಿ ಡಾ.ಎಂ.ಪುಷ್ಪಾವತಿ, ವಾಕ್-ಭಾಷಾ ವಿಭಾಗದ ಮುಖ್ಯಸ್ಥ ಡಾ.ಎಂ.ಸಂತೋಷ್ ಅವರನ್ನು ಕಾಣಬಹುದು.

ಮೈಸೂರಿನಲ್ಲಿ ಸಂವಹನ ಅಸ್ವಸ್ಥತೆ ಹೊಂದಿರುವ ವ್ಯಕ್ತಿಗಳಿಗಾಗಿ ವಿಶ್ವ ದರ್ಜೆಯ ಕೇಂದ್ರವನ್ನು ದೇಶದಲ್ಲಿ ಸ್ಥಾಪಿಸುವ ಗುರಿಯೊಂದಿಗೆ ಅತ್ಯಾಧುನಿಕ ಚಿಕಿತ್ಸೆಗಳನ್ನು ಒದಗಿಸಲು ಹೊಸ 'ಸೆಂಟರ್ ಆಫ್ ಎಕ್ಸಲೆನ್ಸ್' ಅನ್ನು ಸ್ಥಾಪಿಸಲಾಗಿದೆ. 2008ರ ಜನವರಿಯಲ್ಲಿ ಆಯಿಷ್‌ನಲ್ಲಿ ಮೊದಲ ಎರಡು ಔಟ್‌ರೀಚ್ ಸೇವಾ ಕೇಂದ್ರಗಳನ್ನು ಆರಂಭಿಸಿ, ರಾಜ್ಯ ಸರ್ಕಾರಿ ಆಸ್ಪತ್ರೆಗಳು ಮತ್ತು ಎನ್‌ಜಿಓಗಳ ಸಹಯೋಗದೊಂದಿಗೆ ಚಟುವಟಿಕೆಯನ್ನು ಇನ್ನೂ ಹನ್ನೊಂದು ಕೇಂದ್ರಗಳಿಗೆ ವಿಸ್ತರಿಸಲಾಯಿತು ಎಂದು ತಿಳಿಸಿದರು.

ಸಾರ್ವಜನಿಕ ಉಪನ್ಯಾಸಗಳು, ಲೈವ್ ಫೋನ್-ಇನ್ ಕಾರ್ಯಕ್ರಮ, ರೇಡಿಯೋ ಮತ್ತು ಟಿವಿ ಕಾರ್ಯಕ್ರಮಗಳು ಇನ್ನಿತರೆ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಸಂವಹನ ಅಸ್ವಸ್ಥತೆಗಳ ಬಗ್ಗೆ ಸಾರ್ವಜನಿಕರಿಗೆ ಶಿಕ್ಷಣ ನೀಡುತ್ತಿರುವ ಸಂಸ್ಥೆಯ ಕಾರ್ಯವನ್ನು ಅವರು ಶ್ಲಾಘಿಸಿದರು.

ಇದಕ್ಕೂ ಮುನ್ನ ಕಾರ್ಯಕ್ರಮಕ್ಕೆ ಸಾಂಪ್ರದಾಯಿಕ ದೀಪ ಬೆಳಗಿಸಿ ಚಾಲನೆ ನೀಡಿದ ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಮಾತನಾಡಿ, 1965ರಲ್ಲಿ ಮೈಸೂರಿನಲ್ಲಿ ಆಯಿಷ್ ಸ್ಥಾಪನೆಯಲ್ಲಿ ಜಯಚಾಮರಾಜ ಒಡೆಯರ್ ಅವರ ಕೊಡುಗೆಯನ್ನು ಸ್ಮರಿಸಿದರು.

ಜಯಚಾಮರಾಜ ಒಡೆಯರ್ ಅವರು 1959 ರಲ್ಲಿ ಅಮೆರಿಕಾ ಪ್ರವಾಸದ ಸಮಯದಲ್ಲಿ ವಿವಿಧ ವಾಕ್ ಮತ್ತು ಶ್ರವಣ ಕೇಂದ್ರ ಗಳನ್ನು ಕಂಡಿದ್ದರು. ಅಲ್ಲಿಂದ ಹಿಂದಿರುಗಿದ ನಂತರ ಮೈಸೂರಿನಲ್ಲಿಯೂ ಅಂತಹ ಒಂದು ಕೇಂದ್ರವನ್ನು ಹೊಂದುವ ಆಲೋಚನೆ ಮಾಡಿದರು. ಅದಕ್ಕಾಗಿ 22 ಎಕರೆ ಭೂಮಿಯನ್ನು ದಾನವಾಗಿ ನೀಡಿದ್ದನ್ನು ಸ್ಮರಿಸಿದರು.

ಚಿಕಿತ್ಸೆ ಮತ್ತು ಸಹಾಯ ಕೋರಿ ಬರುವ ಎಲ್ಲ ಜನರಿಗೆ ಆಯಿಷ್ ಒದಗಿಸುತ್ತಿರುವ ಸೇವೆಯನ್ನು ಶ್ಲಾಘಿಸಿದ ಅವರು, ರಾಜಮನೆತನ ಮತ್ತು ಆಯಿಷ್ ಉತ್ತಮ ಸಂಬಂಧ ಹೊಂದಿದೆ ಎಂದರು. ನಗರದಲ್ಲಿ ಆಗಿನ ರಾಜರು ಸ್ಥಾಪಿಸಿದ ಅನೇಕ ಶಿಕ್ಷಣ ಸಂಸ್ಥೆಗಳು 100 ವರ್ಷಗಳು ಮತ್ತು ಅದಕ್ಕಿಂತ ಹೆಚ್ಚಿನದ್ದು ಪೂರ್ಣಗೊಳಿಸುವುದನ್ನು ನೋಡಲು ಹೆಮ್ಮೆ ಮತ್ತು ಸಂತೋಷದ ವಿಷಯವಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಪಿಎಚ್.ಡಿ ಪಡೆದ ಡಾ.ಮೇಘಾ, ಡಾ.ರೂಬಿನ್ ಥಾಮಸ್ ವರ್ಗೀಸ್, ಡಾ.ಎಂ.ಎನ್.ಮಮತಾ, ಡಾ.ಕೆ.ಅರುಣ್ ರಾಜ್, ಡಾ.ಎಂ.ಬಿ.ವಿಕಾಸ್ ಮತ್ತು ಡಾ.ಸಿ.ಜವಾಹರ್ ಅಂತೋನಿ ಅವರನ್ನು ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಅಭಿನಂದಿಸಿದರು.

ಈ ಸಂದರ್ಭದಲ್ಲಿ ಸ್ಪೀಚ್ ಲ್ಯಾಂಗ್ವೇಜ್ ಪೆಥಾಲಜಿಯಲ್ಲಿ ವಿದ್ಯಾರ್ಥಿ ವೈದ್ಯರಿಗಾಗಿ ಕ್ಲಿನಿಕಲ್ ಟ್ರೈನಿಂಗ್ ಮಾಡ್ಯೂಲ್ ಮತ್ತು ಹೊಸ ಪರೀಕ್ಷೆಗಳು ಮತ್ತು ಥೆರಪಿ ಸಂಪನ್ಮೂಲ ಸಾಮಗ್ರಿಗಳನ್ನು ಬಿಡುಗಡೆ ಮಾಡಲಾಯಿತು. ಆಯಿಷ್ ನಿರ್ದೇಶಕಿ ಡಾ.ಎಂ.ಪುಷ್ಪಾವತಿ, ವಾಕ್-ಭಾಷಾ ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ.ಎಂ.ಸಂತೋಷ್ ಉಪಸ್ಥಿತರಿದ್ದರು.

ಸದಾಶಿವ ಆಯೋಗದ ವರದಿ ಜಾರಿ ಸಂಬಂಧ

ಕೇಂದ್ರ ಸಚಿವ ನಾರಾಯಣಸ್ವಾಮಿ ಸಂಶಯದ ನುಡಿಗೆ ಖಂಡನೆ

ಮೈಸೂರು, ಆ.9(ಎಸ್‌ಬಿಡಿ)– ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಅವರು ಸದಾಶಿವ ಆಯೋಗದ ಜಾರಿ ಬಗ್ಗೆ ಸಂಶಯ ವ್ಯಕ್ತಪಡಿಸಿರುವುದು ಖಂಡನಾರ್ಹ ಎಂದು ರಾಜ್ಯ ಆದಿಜಾಂಬವ ಸಂಘದ ಮೈಸೂರು ವಿಭಾಗೀಯ ಸಮಿತಿ ತಿಳಿಸಿದೆ. ಮೈಸೂರಿನಲ್ಲಿ 2 ದಿನಗಳ ಹಿಂದೆ 'ಆದಿದ್ರಾವಿಡ ಸಮಾಜದ ಸಮಾವೇಶ'ದಲ್ಲಿ ಮಾತನಾಡಿದ ಸಚಿವ ಎ.ನಾರಾಯಣಸ್ವಾಮಿ ಅವರು, ಬಿಜೆಪಿ ಅಧಿಕಾರಕ್ಕೆ ಬಂದರೆ 24 ಗಂಟೆಯೊಳಗೆ ಸದಾಶಿವ ಆಯೋಗದ ವರದಿಯನ್ನು ಜಾರಿಗೊಳಿಸುತ್ತೇವೆ ಎಂಬ ತಮ್ಮದೇ ಪಕ್ಷದ ನಾಯಕರ ಭರವಸೆಯನ್ನು ಮರೆತು ಈ ವರದಿ ಜಾರಿಗೆ ಬರುವುದು ಕಷ್ಟ ಎಂದಿದ್ದಾರೆ. ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದರೂ ಈ ರೀತಿ ಹೇಳಿಕೆ ನೀಡುವ ಮೂಲಕ ಒಳ ಮೀಸಲಾತಿ ಬಗ್ಗೆ ತಮ್ಮಲ್ಲಿರುವ ಅಜ್ಞಾನವನ್ನು ಪ್ರದರ್ಶಿಸಿದ್ದಾರೆ ಎಂದು ಸಂಘದ ಪದಾಧಿಕಾರಿಗಳು ಬೇಸರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸದಾಶಿವ ಆಯೋಗದ ವರದಿ ಜಾರಿಗೆ ಆಗ್ರಹಿಸಿ ಆದಿಜಾಂಬವ ಸಮುದಾಯ 30 ವರ್ಷಗಳಿಂದ ನಿರಂತರ ಹೋರಾಟ ನಡೆಸಿಕೊಂಡು ಬಂದಿದೆ. ಆದರೆ ಸಚಿವ ಎ.ನಾರಾಯಣಸ್ವಾಮಿ ಅವರು ಸಂವಿಧಾನದತ್ತ ಮೀಸಲಾತಿ ಪರಿಕಲ್ಪನೆ ಹಾಗೂ ಸಮುದಾದ ಸುಧೀರ್ಘ ಹೋರಾಟಕ್ಕೆ ವಿರುದ್ಧವಾಗಿದೆ. ಈ ಸಂಬಂಧ ಕೇಂದ್ರ ಸರ್ಕಾರದ ಮನವೊಲಿಸಲು ಅಸಮರ್ಥರಾಗಿದ್ದಾರೆ. ಸಮುದಾಯದ ಬಗ್ಗೆ ಕಾಳಜಿ ಇದ್ದಿದ್ದರೆ ಈ ರೀತಿಯಲ್ಲಿ ನಿರಾಶಾವಾದ ಹೇಳಿಕೆ ನೀಡುತ್ತಿರಲಿಲ್ಲ. ಹಿಂದುಳಿದ ವರ್ಗಗಳಿಗೆ ವರ್ಗೀಕರಣ ಮಾಡಿ ಮೀಸಲಾತಿ ಕಲ್ಪಿಸಿರುವ ಮಾದರಿಯಲ್ಲೇ ನಮ್ಮ ಸಮುದಾಯಕ್ಕೆ ನ್ಯಾಯ ಕಲ್ಪಿಸಬಹುದು. ಮುಂದಾದರೂ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ, ಸರ್ಕಾರಗಳ ಮೇಲೆ ಸಚಿವರು ಒತ್ತಡ ತಂದು ಸದಾಶಿವ ಆಯೋಗದ ವರದಿ ಜಾರಿಗೆ ಮುಂದಾಗಬೇಕೆಂದು ಸಂಘದ ಮೈಸೂರು ವಿಭಾಗೀಯ ಸಮಿತಿ ಅಧ್ಯಕ್ಷ ಎಡತೊರೆ ಎಂ.ನಿಂಗರಾಜ್, ಉಪಾಧ್ಯಕ್ಷ ಸಿ.ಕೆ.ಪಾಪಯ್ಯ, ಕಾರ್ಯದರ್ಶಿ ಎಂ.ಲೋಕೇಶ್, ಸಹ ಕಾರ್ಯದರ್ಶಿ ನಿಟ್ರೆ ಮಹದೇವಯ್ಯ, ಖಜಾಂಚಿ ಗೋವಿಂದರಾಜ್ ದಾಸ್ ಅವರು ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿ ಬದಲಾವಣೆ ಛಾನ್ಸೇ ಇಲ್ಲ

● ಮೈಸೂರು ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಖಡಕ್ ನುಡಿ ● ಕಾಂಗ್ರೆಸ್ ಒಳ ಜಗಳ ಮರೆ ಮಾಚಲು ವದಂತಿ ಹರಡುತ್ತಿದ್ದಾರೆ



ಮೈಸೂರು, ಆ.9(ಎಸ್‌ಬಿಡಿ)– ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆಯ ಪ್ರಶ್ನೆಯೇ ಇಲ್ಲ ಎಂದು ಸಹಕಾರ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಸ್ಪಷ್ಟಪಡಿಸಿದ್ದಾರೆ.


ಬಿಜೆಪಿಯ ಮೂರನೇ ಮುಖ್ಯಮಂತ್ರಿ ವಿಚಾರ ಮತ್ತೆ ಚರ್ಚೆಯಾಗುತ್ತಿರುವ ಬಗ್ಗೆ ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಮಂಗಳವಾರ ಸಂಜೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಸಚಿವರು, ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಅತ್ಯುತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ಮಳೆ ಅನಾಹುತದ ಸ್ಥಳಗಳಿಗೆ ವೈಯಕ್ತಿಕವಾಗಿ ಭೇಟಿ ನೀಡಿ ತಕ್ಷಣ ಪರಿಹಾರ ಬಿಡುಗಡೆಗೆ ಸೂಚಿಸಿದ್ದಾರೆ. ಯಾವುದೇ ಕಾರಣಕ್ಕೂ ಮುಖ್ಯಮಂತ್ರಿ ಬದಲಾವಣೆ ಪ್ರಶ್ನೆಯೇ ಇಲ್ಲ. ಇದೆಲ್ಲಾ ಕಾಂಗ್ರೆಸ್ ಸೃಷ್ಟಿ ಅಷ್ಟೇ. 2023ರ ಸಾರ್ವತ್ರಿಕ ಚುನಾವಣೆಯಲ್ಲೂ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಹಾಗೂ ಎಲ್ಲಾ ನಾಯಕರ ನೇತೃತ್ವದಲ್ಲೇ ಚುನಾವಣೆ ಎದುರಿಸಲಿದ್ದೇವೆ ಎಂದು ತಿಳಿಸಿದರು.

ಕಾಂಗ್ರೆಸ್‌ನವರಿಗೆ ಬೇರೆ ಕೆಲಸ ಇಲ್ಲ. ಬಸವರಾಜ್ ಬೊಮ್ಮಾಯಿ ಅವರ ಅಭಿವೃದ್ಧಿ ಕಾರ್ಯ, ನೆರೆ ನಿರ್ವಹಣೆ, ಸರ್ಕಾರದ ಸಾಧನೆ ಸಹಿಸಿಕೊಳ್ಳಲು ಸಾಧ್ಯವಾಗದೆ ಈ ರೀತಿ ಸುಳ್ಳು ಹರಡುವ ಪ್ರಯತ್ನ ಮಾಡಿದ್ದಾರೆ. ಸಿದ್ದರಾಮೋತ್ಸವದ ನಂತರ ಕಾಂಗ್ರೆಸ್‌ನಲ್ಲಿ ಹೊತ್ತಿಕೊಂಡಿರುವ ಬೆಂಕಿ ಆರಿಸಲಾಗದೆ ಮೂರನೇ ಮುಖ್ಯಮಂತ್ರಿ, 40 ಪರ್ಸೆಂಟ್ ಕಮಿಷನ್ ಎಂದೆಲ್ಲಾ ಹೇಳುತ್ತಿದ್ದಾರೆ. ಈ ರೀತಿಯ ಸುಳ್ಳು ಸುದ್ದಿ ಹಬ್ಬಿಸುವಲ್ಲಿ ಕಾಂಗ್ರೆಸ್ ನಂಬರ್ ಒನ್. ಕಾಂಗ್ರೆಸ್ ತಟ್ಟೆಯಲ್ಲಿ ಹೆಗ್ಗಣ ಸತ್ತುಬಿದ್ದಿದ್ದರೂ ನಮ್ಮ ಪಕ್ಷದ ಬಗ್ಗೆ ಇಲ್ಲಸಲ್ಲದ ಮಾತುಗಳನ್ನಾಡುತ್ತಿದ್ದಾರೆ. ಅವರಲ್ಲಿರುವ ಗುಂಪುಗಾರಿಕೆ ಇನ್ನಿತರ ಸಮಸ್ಯೆಗಳನ್ನು ಮರೆಮಾಚಲು ಹೀಗೆ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಮುಖ್ಯಮಂತ್ರಿ ಅವರ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಯಾವುದೇ ರೀತಿಯಲ್ಲೂ ಬೇಸರ ವ್ಯಕ್ತಪಡಿಸಿಲ್ಲ. ಪ್ರಧಾನಮಂತ್ರಿಗಳು ಕೂಡ ಮುಖ್ಯಮಂತ್ರಿಗಳ ಕಾರ್ಯವೈಖರಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ತಿಂಗಳಿಂದೀಚೆಗೆ ಪಕ್ಷ ಹಾಗೂ ಸರ್ಕಾರಕ್ಕೆ ಸಂಬಂಧಿಸಿದಂತೆ ಮೂರ್‍ನಾಲ್ಕು ಸಭೆ ನಡೆದಿವೆ. ಪಕ್ಷದ ರಾಜ್ಯಾಧ್ಯಕ್ಷರಾದ ನಳೀನ್‌ಕುಮಾರ್ ಕಟೀಲ್ ಅವರು ಸಭೆ ಮಾಡಿದ್ದಾರೆ. ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರೂ ಸಭೆ ಮಾಡಿದ್ದಾರೆ. ಯಾವ ಸಭೆಯಲ್ಲೂ ಅಸಮಾಧಾನ ವ್ಯಕ್ತವಾಗಿಲ್ಲ. ಪಕ್ಷದ ಒಳ-ಹೊರ ವಿಚಾರಗಳ ಬಗ್ಗೆ ನನಗೂ ತಿಳಿದಿರುವುದರಿಂದ ಖಚಿತವಾಗಿ ಹೇಳುತ್ತಿದ್ದೇನೆ ಎಂದರು.

ಸಿದ್ದರಾಮಯ್ಯರ ವಿರುದ್ಧ ವಾಗ್ದಾಳಿ: ಕಾಂಗ್ರೆಸ್ ಪಕ್ಷಕ್ಕೆ ಸಿದ್ದರಾಮಯ್ಯ ಕೊಡುಗೆ ಏನು? ಅವರೇನು ಪಕ್ಷ ಕಟ್ಟಿದ್ದಾರೆಯೇ? ಹೊರಗಿನಿಂದ ಕಾಂಗ್ರೆಸ್ ಸೇರಿ ಸಿಎಂ ಆದವರು. ಕಾಂಗ್ರೆಸ್ ಸೇರುವ ಮೊದಲು ಸೋನಿಯಾಗಾಂಧಿ, ರಾಹುಲ್ ಗಾಂಧಿ ಬಗ್ಗೆ ಬಾಯಿಗೆ ಬಂದಂತೆ ಮಾತನಾಡುವುದು, ಕಾಂಗ್ರೆಸ್ ವಿರುದ್ಧ ನಿರಂತರ ಟೀಕೆ ಮಾಡುತ್ತಿದ್ದನ್ನು ನನ್ನ ಕಿವಿಯಾರೆ ಕೇಳಿದ್ದೇನೆ. ಅಂತಹವರು ಕಾಂಗ್ರೆಸ್ ಸೇರಿಕೊಂಡು ಮಲ್ಲಿಕಾರ್ಜುನ ಖರ್ಗೆ ಅವಕಾಶ ಕಸಿದುಕೊಂಡರಲ್ಲದೆ, ಪರಮೇಶ್ವರ್ ಸಿಎಂ ಆಗಬಹುದೆಂದು ಅವರನ್ನು ಚುನಾವಣೆಯಲ್ಲಿ ಸೋಲಿಸಿದರು. ನಂತರ ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಸಮ್ಮಿಶ್ರ ಸರ್ಕಾರ ಉರುಳಿಸಿ ಪ್ರತಿಪಕ್ಷ ನಾಯಕನ ಸ್ಥಾನ ಪಡೆದುಕೊಂಡರು. ಕಾಂಗ್ರೆಸ್ ಸ್ವಾತಂತ್ರ್ಯ ಪೂರ್ವದ ಪಕ್ಷ ಎಂದು ಹೇಳಲು ಅವರಿಗೆ ನೈತಿಕತೆ ಇಲ್ಲ. ಸಿದ್ದರಾಮೋತ್ಸವದಲ್ಲಿ ಎಷ್ಟು ಕುರ್ಚಿ ಹಾಕಿದ್ದರು, ಎಷ್ಟು ಜನ ಬಂದರು ಎಲ್ಲವೂ ಗೊತ್ತಿದೆ. ಅದರ ಬಗ್ಗೆ ಅವರು ನಿಖರವಾಗಿ ಹೇಳದಿದ್ದರೂ ನಮ್ಮ ಬಳಿ ಮಾಹಿತಿ ಇದೆ. ಸಿದ್ದರಾಮಯ್ಯನವರು ಈಗ ಮತ್ತೊಮ್ಮೆ ಸಿಎಂ ಆಗಬೇಕೆಂದು ಹವಣಿಸುತ್ತಿದ್ದಾರೆ. ಇದರಿಂದ ಕಾಂಗ್ರೆಸ್‌ನಲ್ಲಿ ಬೆಂಕಿ ಹೊತ್ತಿಕೊಂಡಿದೆ. ಅದನು ಶಮನ ಮಾಡಲಾಗದೆ ಮುಖ್ಯಮಂತ್ರಿ ಬದಲಾವಣೆ ಎಂಬ ಅಪಪ್ರಚಾರದೊಂದಿಗೆ ವಿಷಯಾಂತರ ಮಾಡುವ ಪ್ರಯತ್ನ ನಡೆಸುತ್ತಿದ್ದಾರೆ ಎಂದು ಸಚಿವ ಎಸ್.ಟಿ.ಸೋಮಶೇಖರ್ ವಾಗ್ದಾಳಿ ನಡೆಸಿದರು.

ಅಪಘಾತದಲ್ಲಿ ಮಾಜಿ ಅಂಪೈರ್ ರೂಡಿ ಕರ್ಟ್ಜನ್ ಸಾವು



ಕೇಪ್‌ಟೌನ್, ಆ.9– ದಕ್ಷಿಣ ಆಫ್ರಿಕಾದ ಮಾಜಿ ಅಂತರರಾಷ್ಟ್ರೀಯ ಅಂಪೈರ್ ರೂಡಿ ಕರ್ಟ್ಜನ್(73) ಮಂಗಳವಾರ ಬೆಳಗ್ಗೆ ರಿವರ್ಸ್‌ಡೇಲ್ ಪಟ್ಟಣದ ಬಳಿ ಸಂಭವಿಸಿದ ಕಾರು ಅಪಘಾತದಲ್ಲಿ ಮೃತಪಟ್ಟಿದ್ದು, ಪತ್ನಿ ಮತ್ತು ನಾಲ್ವರು ಮಕ್ಕಳನ್ನು ಅಗಲಿದ್ದಾರೆ. 1990 ರಿಂದ 2010 ರವರೆಗೆ ವಿಶ್ವ ಕ್ರಿಕೆಟ್‌ನಲ್ಲಿ ಅತ್ಯಂತ ಗೌರವಾನ್ವಿತ ಅಂಪೈರ್‌ಗಳಲ್ಲಿ ಒಬ್ಬರಾಗಿದ್ದ ರೂಡಿ ಕರ್ಟ್ಜನ್ ಮತ್ತು ಇತರ ಮೂವರು ಮಂಗಳವಾರ ಬೆಳಗ್ಗೆ ರಿವರ್ಸ್‌ಡೇಲ್ ಬಳಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಕೇಪ್‌ಟೌನ್‌ನಲ್ಲಿ ನಡೆದಿದ್ದ ವಾರಾಂತ್ಯದ ಗಾಲ್ಫ್‌ನಲ್ಲಿ ಭಾಗವಹಿಸಿ ಅವರು ಮನೆಗೆ ಹಿಂದಿರುಗುತ್ತಿದ್ದರು' ಎಂದು 'ಅಲ್ಗೋವಾ' ಎಫ್‌ಎಂ ನ್ಯೂಸ್ ವರದಿ ಮಾಡಿದೆ.

23 ಗ್ರ್ಯಾಂಡ್ ಸ್ಲಾಮ್ ಗೆದ್ದ ಟೆನಿಸ್ ದಂತಕಥೆ ಸೆರೆನಾ ವಿಲಿಯಮ್ಸ್ ನಿವೃತ್ತಿ ಘೋಷಣೆ



ವಾಷಿಂಗ್ಟನ್: 23 ಬಾರಿಯ ಗ್ರ್ಯಾಂಡ್ ಸ್ಲಾಮ್ ಚಾಂಪಿಯನ್ ಸೆರೆನಾ ವಿಲಿಯಮ್ಸ್ ಶೀಘ್ರದಲ್ಲೇ ಟೆನಿಸ್‌ನಿಂದ ನಿವೃತ್ತಿ ಹೊಂದಲಿದ್ದಾರೆ. ಈ ಅನುಭವಿ ಆಟಗಾರ್ತಿ ಮಂಗಳವಾರ ಸಾಮಾಜಿಕ ಜಾಲತಾಣದಲ್ಲಿ ಈ ಮಾಹಿತಿ ನೀಡಿದ್ದಾರೆ. ವರ್ಷದ ಅಂತಿಮ ಗ್ರ್ಯಾಂಡ್ ಸ್ಲಾಮ್ ಪಂದ್ಯಾವಳಿಯಾದ ಯುಎಸ್ ಓಪನ್ ನಂತರ ಟೆನಿಸ್ ತ್ಯಜಿಸಲು ಯೋಚಿಸುತ್ತಿರುವುದಾಗಿ ವಿಲಿಯಮ್ಸ್ ಹೇಳಿದ್ದಾರೆ. ಸೆರೆನಾ 1999 ರಲ್ಲಿ ಮೊದಲ ಬಾರಿಗೆ ಯುಎಸ್ ಓಪನ್ ಪಂದ್ಯಾವಳಿಯನ್ನು ಗೆದ್ದರು. ವಿಲಿಯಮ್ಸ್ ಬಹಳ ದಿನಗಳಿಂದ ತನ್ನ ಹಳೆಯ ಶೈಲಿಯಲ್ಲಿ ಟೆನಿಸ್ ಆಡುತ್ತಿಲ್ಲ. ಆಕೆ ನಿರಂತರವಾಗಿ ಟೆನಿಸ್ ಪಂದ್ಯಾವಳಿಗಳನ್ನೂ ಆಡುತ್ತಿರಲಿಲ್ಲ. "ನಿವೃತ್ತಿ ಎಂಬ ಪದ ನನಗೆ ಇಷ್ಟವಿಲ್ಲ. ನಾನು ಅದನ್ನು ಜೀವನದ ವಿಕಾಸ ಎಂದು ಕರೆಯುತ್ತೇನೆ. ನಾನು ಮುಂದಿನ ಹೆಜ್ಜೆಯ ಬಗ್ಗೆ ಯೋಚಿಸುತ್ತಿದ್ದೇನೆ ಎಂದು ಇನ್ಸ್ಟಾಗ್ರಾಮ್‌ನಲ್ಲಿ ಪೋಸ್ಟ್‌ನಲ್ಲಿ ಹೇಳಿದ್ದಾರೆ.

ದಸರಾ ಮಹೋತ್ಸವದಲ್ಲಿ ಆದಿವಾಸಿಗಳ ನೃತ್ಯ ಪ್ರದರ್ಶನ

● ಶಾಸಕ ನಾಗೇಂದ್ರ ಭರವಸೆ ● ದ್ರೌಪದಿ ಮುರ್ಮು ರಾಷ್ಟ್ರಪತಿ ಆಗುವುದರೊಂದಿಗೆ ಆದಿವಾಸಿಗಳಿಗೆ ವಿಶೇಷ ಹಿರಿಮೆ



ಮೈಸೂರು,ಆ.8(ಜಿಎ)– ಈ ಬಾರಿಯ ದಸರಾ ಮಹೋತ್ಸವದಲ್ಲಿ ದೇಶದ ವಿವಿಧ ಭಾಗಗಳ ಆದಿವಾಸಿಗಳ ನೃತ್ಯ ಪ್ರದರ್ಶನವನ್ನು ಆಯೋಜಿಸಲಾಗುವುದು ಎಂದು ಶಾಸಕ ಎಲ್.ನಾಗೇಂದ್ರ ಭರವಸೆ ನೀಡಿದರು.

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಹಾಗೂ ವಿಶ್ವ ಆದಿವಾಸಿ ದಿನದ ಹಿನ್ನೆಲೆಯಲ್ಲಿ ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯ ನಾಗ್ಪುರದ ದಕ್ಷಿಣ ಕೇಂದ್ರ ವಲಯ ಸಾಂಸ್ಕೃತಿಕ ಕೇಂದ್ರ ಮತ್ತು ಅಖಿಲ ಭಾರತ ಜಾನಪದ ಮತ್ತು ಬುಡಕಟ್ಟು ಕಲಾ ಪರಿಷತ್ತು ಮೈಸೂರು ಘಟಕ ಕರ್ನಾಟಕ ರಾಜ್ಯ ಮುಕ್ತ ವಿವಿ, ಮೈಸೂರು ರಂಗಾಯಣ, ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ ಸಹಯೋಗದೊಂದಿಗೆ ಕರ್ನಾಟಕ ರಾಜ್ಯ ಮುಕ್ತ ವಿವಿಯ ಆವರಣದ ಕಾವೇರಿ ಸಭಾಂಗಣದಲ್ಲಿ ಆಯೋಜಿಸಿದ್ದ 3 ದಿನಗಳ ಆದಿವಾಸಿ ನೃತ್ಯ ಮಹೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಆದಿವಾಸಿಗಳ ಜೀವನ ಶೈಲಿ, ಆರೋಗ್ಯ, ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ಅವರೊಟ್ಟಿಗೆ ವಿಚಾರ ಸಂಕಿರಣಗಳು ನಡೆಯಲಿದೆ ಆದಿವಾಸಿ ಮಕ್ಕಳಿಗೆ ದ್ವಿಭಾಷೆಯನ್ನು ಅಳವಡಿಸಿಕೊಂಡು ಬುಡಕಟ್ಟು ಭಾಷೆ ಮತ್ತು ಸ್ಥಳೀಯ ಭಾಷೆಯನ್ನು ಕಲಿಸುವುದೇ ಮೂರು ದಿನಗಳು ನಡೆಯುವ ಮಹೋತ್ಸವದ ಉದ್ದೇಶವಾಗಿದೆ ಎಂದರು.

ನಾಗರಿಕತೆ ಬೆಳೆಯುತ್ತಿದ್ದಂತೆ ಎಲ್ಲವೂ ಬದಲಾಗುತ್ತಿದೆ. ಆದರೆ, ಆದಿವಾಸಿಗಳು ಇಂದಿಗೂ ಬದಲಾಗಿಲ್ಲ. ಅದಕ್ಕೆ ಉದಾಹರಣೆ; ಮೈಸೂರಿನ ಹೆಚ್.ಡಿ. ಕೋಟೆ ತಾಲೂಕಿನಲ್ಲಿರುವ ಆದಿವಾಸಿಗಳು ಕಾಡು ಬಿಟ್ಟು ಇಂದಿಗೂ ಹೊರಗೆ ಬರುವುದಿಲ್ಲ. ಆದಿವಾಸಿಗಳು ಕಾಡಿನಲ್ಲಿ ವಾಸವಿರುವುದರಿಂದಲ್ಲೇ ಇನ್ನೂ ಕಾಡುಗಳು ಉಳಿದಿವೆ. ಇವರ ಉತ್ಪನ್ನಗಳಿಗೂ ಬೆಲೆ ಸಿಗಬೇಕು ಎಂಬ ನಿಟ್ಟಿನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈ ಹಿಂದೆ ಗೃಹಮಂತ್ರಿಗಳಾಗಿದ್ದಾಗ ಲ್ಯಾನ್ಸ್ ಎಂಬ ಯೋಜನೆ ತಂದಿದ್ದು, ಆದಿವಾಸಿಗಳ ಉತ್ಪನ್ನಗಳಿಗೆ ವೇದಿಕೆಯನ್ನು ಸೃಷ್ಟಿ ಮಾಡಿದ್ದರು. ಅದು ಈಗಾಗಲೇ ಮೈಸೂರಿನಲ್ಲಿ ಆರಂಭವಾಗಿದೆ ಎಂದರು.

ಆದಿವಾಸಿಗಳಿಗೆ ಗೌರವ ಸಿಗಬೇಕು ಎಂಬ ಉದ್ದೇಶದಿಂದ ಪ್ರಧಾನಮಂತ್ರಿ ಮೋದಿ ಅವರು ರಾಷ್ಟ್ರಪತಿ ಹುದ್ದೆಗೆ ಆದಿವಾಸಿ ಮುಖಂಡರಾದ ದ್ರೌಪತಿ ಮುರ್ಮು ಅವರನ್ನು ಆಯ್ಕೆ ಮಾಡುವ ಮೂಲಕ ಆದಿವಾಸಿಗಳಿಗೆ ವಿಶೇಷ ಗೌರವ ದೊರೆಯುವಂತೆ ಮಾಡಿದ್ದಾರೆ. ಈ ಬದಲಾವಣೆಯಿಂದ ವಿದೇಶಗಳು ನಮ್ಮ ರಾಷ್ಟ್ರದತ್ತ ನೋಡುತ್ತಿವೆ. ಅದಕ್ಕೆ ವೈಯಕ್ತಿಕವಾಗಿ ಪ್ರಧಾನ ಮಂತ್ರಿಗಳಿಗೆ ಧನ್ಯವಾದ ಸಲ್ಲಿಸುತ್ತೇನೆ ಎಂದರು.

ಈ ಬಾರಿಯ ದಸರಾ ಮಹೋತ್ಸವದಲ್ಲಿ ಆದಿವಾಸಿಗಳು ನೃತ್ಯ ಪ್ರದರ್ಶನ ಮಾಡಲು ಅವಕಾಶ ನೀಡುವಂತೆ ಮನವಿ ಮಾಡಿದ್ದಾರೆ. ಅದಕ್ಕೆ ನಾನು ಎಲ್ಲಾ ರೀತಿಯ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ವಿ. ನಾಗೇಶ್ ಬೆಟ್ಟಕೋಟೆ, ಅಖಿಲ ಭಾರತ ಜನಪದ ಹಾಗೂ ಬುಡಕಟ್ಟು ಪರಿಷತ್ತು ರಾಷ್ಟ್ರೀಯ ಅಧ್ಯಕ್ಷ ನಿರ್ಮಲ್ ವೈದ್, ಎಐಎಫ್‌ಟಿಎ ಪ್ರಧಾನ ಕಾರ್ಯದರ್ಶಿ ಹಾಸನ್ ರಘು, ಎಐಎಫ್‌ಟಿಎ ಮೈಸೂರು ವಿಭಾಗ ಸಂಘಟನಾ ಕಾರ್ಯದರ್ಶಿ ಡಾ.ಕೆ. ವಸಂತಕುಮಾರ್ ಹಾಗೂ ದೀಪಕ್ ಪಟೇಲ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಛತೀಸ್ ಘಡದ ಆದಿವಾಸಿಗಳಿಂದ ಅಬುಜ್ಮದೀಯ ನೃತ್ಯ, ಮಹಾರಾಷ್ಟ್ರ ಆದಿವಾಸಿಗಳು ಬಂಜಾರ ನೃತ್ಯ, ಮಧ್ಯಪ್ರದೇಶದ ಆದಿವಾಸಿಗಳಿಂದ ಶೈಲಾ ಕರ್ಮ ನೃತ್ಯ, ತೆಲಂಗಾಣದ ಆದಿವಾಸಿಗಳು ಮಾಥುರಿ ನೃತ್ಯ, ಕರ್ನಾಟಕದ ಆದಿವಾಸಿಗಳು ದಮಾನಿ ಸಿದ್ಧಿ ಮತ್ತು ಜೇನು ಕುರುಬ ನೃತ್ಯ ಮತ್ತು ಡೊಳ್ಳು ಕುಣಿತ ಮಾಡಿದರೆ, ರಾಮನಗರದ ಪಾರ್ಥಸಾರತಿ ಜನಪದ ಕಲಾ ತಂಡಗಳಿಂದ ಜನಪದ ಕಲೆಗಳ ಪ್ರದರ್ಶನ ಮಾಡಲಾಯಿತು.

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ ಸಭಾಂಗಣದಲ್ಲಿ ನೆರೆದಿದ್ದವರಿಗೆ ತ್ರಿವರ್ಣದ ರಾಷ್ಟ್ರಧ್ವಜ ನೀಡಲಾಯಿತು. ಈ ವೇಳೆ ಭಾರತ್ ಮಾತಾಕಿ ಜೈ ಎಂಬ ಘೋಷ ವಾಕ್ಯಗಳು ಮೊಳಗಿದವು.



ಅಪಾಯದ ಮಟ್ಟ ಮೀರಿದ ಕಪಿಲೆ

● ಸ್ನಾನಘಟ್ಟಗಳು ಮುಳುಗಡೆ ● ಭಕ್ತರ ಪುಣ್ಯಸ್ನಾನ ನಿಷೇಧ ● ತಾಲೂಕು ಆಡಳಿತದಿಂದ ಮುನ್ನೆಚ್ಚರಿಕಾ ಕ್ರಮ





ಹಳ್ಳದಕೇರಿ ಬಡಾವಣೆಯ ಮನೆಗಳ ಮುಂದೆ ಗುಂಡ್ಲು ನದಿ ನೀರು ಚಾಚಿ ನಿಂತಿರುವುದು.

ನಂಜನಗೂಡು, ಆ.9– ಒಳಹರಿವು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಕಬಿನಿ ಜಲಾಶಯದಿಂದ ನದಿಗೆ 43 ಸಾವಿರ ಕ್ಯೂಸೆಕ್ ನೀರು ಬಿಟ್ಟಿರುವುದರಿಂದ ಕಪಿಲೆ ಅಪಾಯ ಮಟ್ಟ ಮೀರಿ ಹರಿಯುತ್ತಿದ್ದು, ನದಿ ಪಾತ್ರದಲ್ಲಿ ಅನಾಹುತ ಸಂಭವಿಸದಂತೆ ತಾಲೂಕು ಆಡಳಿತ ಮುನ್ನೆಚ್ಚರಿಕೆ ವಹಿಸಿದೆ.

ಕೇರಳದ ವೈನಾಡು ಸೇರಿದಂತೆ ಕಪಿಲಾ ನದಿ ಪಾತ್ರದಲ್ಲಿ ನಿರಂತರ ಮಳೆ ಹಿನ್ನೆಲೆಯಲ್ಲಿ ಕಬಿನಿ ಜಲಾಶಯದಿಂದ ಮುನ್ನೆಚ್ಚರಿಕಾ ಕ್ರಮವಾಗಿ ನದಿಗೆ ನೀರು ಬಿಡಲಾಗುತ್ತಿದೆ. ಇದರಿಂದ ಕಪಿಲಾ ನದಿ ಅಪಾಯ ಮಟ್ಟ ಮೀರಿ ಹರಿಯುತ್ತಿದ್ದು, ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಸ್ನಾನಘಟ್ಟ, ಮಲ್ಲನಮೂಲೆ ಗುರುಕಂಬಳೀಶ್ವರ ಮಠ, ಪವಾಡ ಪುರುಷ ಶ್ರೀ ಮಹದೇವ ತಾತಾ ಐಕ್ಯಸ್ಥಳ ಸಂಗಮ ಕ್ಷೇತ್ರ, ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಮಠದ ಸ್ನಾನಘಟ್ಟಗಳು ಸಂಪೂರ್ಣ ಮುಳುಗಡೆಗೊಂಡಿವೆ.

ಪಾರಂಪರಿಕ ಹದಿನಾರು ಕಾಲು ಮಂಟಪ ಭಾಗಶಃ ಮುಳುಗಡೆಯಾಗಿದೆ. ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಆಗಮಿಸುವ ಭಕ್ತರು ಪುಣ್ಯಸ್ನಾನ ಮಾಡಲು ನಿರ್ಬಂಧಹೇರಲಾಗಿದೆ ನದಿ ಪಾತ್ರದಲ್ಲಿ ಭಕ್ತರು ತೆರಳದಂತೆ ಸ್ನಾನ ಘಟ್ಟದ ಸುತ್ತ ಬ್ಯಾರಿಕೇಡ್ ಅಳವಡಿಸಿ ಬಿಗಿ ಭದ್ರತೆ ಕೈಗೊಳ್ಳಲಾಗಿದ್ದು, ಪೊಲೀಸ್ ಸಿಬ್ಬಂದಿ ನಿಯೋಜನೆ ಮಾಡಲಾಗಿದೆ. ಧ್ವನಿವರ್ಧಕದ ಮೂಲಕ ಎಚ್ಚರಿಕೆ ನೀಡಲಾಗುತ್ತಿದೆ.

ನದಿ ಪಾತ್ರದ ಕತ್ವಾಡಿಪುರ, ಬೊಕ್ಕಹಳ್ಳಿ, ಹಳ್ಳದಕೇರಿ, ಕುಳ್ಳಂಕಯ್ಯನಹುಂಡಿ, ಹೆಜ್ಜಿಗೆ, ಸರಸ್ವತಿ ಕಾಲೋನಿ ಸೇರಿದಂತೆ ಬಹುತೇಕ ಗ್ರಾಮಗಳಲ್ಲಿ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇನ್ನು ನದಿ ಪಾತ್ರದ ಅಚ್ಚುಕಟ್ಟು ಪ್ರದೇಶಗಳಲ್ಲಿ ರೈತರು ಕೃಷಿ ಕೈಗೊಳ್ಳದಂತೆ ಗ್ರಾಮ ಮಟ್ಟದಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ನದಿ ತೀರದಲ್ಲಿ ಬೀಡುಬಿಟ್ಟಿದ್ದ ಮೀನುಗಾರರನ್ನು ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಸೂಚಿಸಲಾಗುತ್ತಿದೆ. ಪ್ರವಾಹ ಇನ್ನೂ ಹೆಚ್ಚಾದರೆ ಮುಳುಗಡೆಯಾಗುವ ಪ್ರದೇಶಗಳ ನಿವಾಸಿಗಳಿಗೆ ನೆರವಾಗಲು ಕಾಳಜಿ ಕೇಂದ್ರ ತೆರೆಯಲು ಈಗಾಗಲೇ ತಾಲೂಕು ಆಡಳಿತ ಸಿದ್ಧತೆ ಕೈಗೊಂಡಿದೆ.

ಇನ್ನು ಸುತ್ತೂರು ಸೇತುವೆ, ಹರದನಹಳ್ಳಿ ಸೇತುವೆ ಮುಳುಗಡೆಯಾಗುವ ಸಾಧ್ಯತೆ ಇದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸ್ ಭದ್ರತೆ ಒದಗಿಸಲಾಗಿದೆ. ಇನ್ನು ಕಪಿಲೆ ಹಿನ್ನೀರು ಗುಂಡ್ಲು ನದಿಯಲ್ಲೂ ಪ್ರವಾಹ ಹೆಚ್ಚಾಗಿದೆ. ನದಿಯ ಪ್ರವಾಹದಿಂದಾಗಿ ತಾಲೂಕಿನ ಮುಳ್ಳೂರು, ನಗರ್ಲೆ, ಸರಗೂರು, ಸುತ್ತೂರು, ಕುಪ್ಪರವಳ್ಳಿ, ಬಿಳುಗಲಿ ಸೇರಿದಂತೆ ನಾನಾ ಕಡೆ ನದಿ ಪಾತ್ರದ ಜಮೀನುಗಳು ಜಲಾವೃತವಾಗಿವೆ ಹೀಗಾಗಿ ಮುಂಗಾರು ಬಿತ್ತನೆ ಕಾರ್ಯದಲ್ಲಿ ತೊಡಗಿದ್ದ ನದಿ ಪಾತ್ರದ ರೈತರು ಕೈಕಟ್ಟಿ ಕೂರುವಂತಾಗಿದೆ.

28ನೇ ವಿಶ್ವ ಆದಿವಾಸಿ ದಿನಾಚರಣೆ



ಹುಣಸೂರು, ಆ.9– ಪ್ರಕೃತಿ ಆದಿವಾಸಿ ಫೌಂಡೇಶನ್ ಟ್ರಸ್ಟ್, ಓಲ್ಡ್ ಏಜ್ ಹೋಮ್, ಮೈಸೂರು ವಿಶ್ವವಿದ್ಯಾನಿಲಯ ಕಾನೂನು ವಿಭಾಗದ ಸಹಯೋಗದೊಂದಿಗೆ ತಾಲೂಕಿನ ಮಂಗಳೂರು ಮಾಳ ಮತ್ತು ಬೀರನ ತಮ್ಮಡಹಳ್ಳಿ ಹಾಡಿಯಲ್ಲಿ ಮಂಗಳವಾರ 28ನೇ ವಿಶ್ವ ಆದಿವಾಸಿ ದಿನಾಚರಣೆ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಕಾನೂನು ಅರಿವಿನ ಬಗ್ಗೆ ಉಪನ್ಯಾಸ ನೀಡಿ ಮಾತನಾಡಿದ ಮೈಸೂರು ವಿವಿ ಕಾನೂನು ವಿಭಾಗದ ಪ್ರೊಫೆಸರ್ ಮಾರುತಿ, ಆದಿವಾಸಿಗಳು ಸರ್ಕಾರದ ಯೋಜನೆಗಳನ್ನು ಸದುಪಯೋಗಪಡಿಸಿಕೊಂಡು ಸಮಾಜದ ಮುಖ್ಯವಾಹಿನಿಗೆ ಬರಬೇಕೆಂದು ಕರೆ ನೀಡಿದರು.

ಟ್ರಸ್ಟ್ ಅಧ್ಯಕ್ಷ ಎಂ.ಕೃಷ್ಣಯ್ಯ ಮಾತನಾಡಿ, ದೇಶದ ಪ್ರಥಮ ಪ್ರಜೆಯಾಗಿ ದ್ರೌಪದಿ ಮುರ್ಮು ಆಯ್ಕೆಯಾಗಿರುವುದು ಆದಿವಾಸಿಗಳ ಹೆಮ್ಮೆಯ ವಿಷಯವಾಗಿದೆ. ಅದಕ್ಕಾಗಿ ಭಾರತ ಸರ್ಕಾರವನ್ನು ಅಭಿನಂದಿಸುತ್ತೇನೆ. ಆದಿವಾಸಿ ಮಹಿಳೆಯರ ಸಬಲೀಕರಣ ಹಾಗೂ ಪಾರಂಪರಿಕ ಜ್ಞಾನ, ನಮ್ಮ ಔಷಧಿ ಪದ್ಧತಿಗಳನ್ನು ಉಳಿಸಿ ಬೆಳೆಸಿಕೊಂಡು ಹೋಗುವುದು ಅನಿವಾರ್ಯ ಎಂದರು. ಬೀರನ ತಮ್ಮನಹಳ್ಳಿ ಹಾಡಿಯಲ್ಲಿ ಪ್ರಕೃತಿ ಆದಿವಾಸಿ ಫೌಂಡೇಶನ್‌ನಿಂದ ಮಹಿಳೆಯರಿಗೆ ಸೀರೆಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಮುಖಂಡರಾದ ಧರ್ಮರಾಜ್, ಶಿವಾಜಿ, ಯಶವಂತ, ಶ್ರೀಮಂತ ಕಮಲಾಬಾಯಿ, ಕಲ್ಪನಾಬಾಯಿ ಸೇರಿದಂತೆ ಬೀರನತಮ್ಮಡಹಳ್ಳಿ ಹಾಡಿಯ 100, ಮಂಗಳೂರು ಮಾಳ ಹಾಡಿಯ 200ಕ್ಕೂ ಹೆಚ್ಚು ಆದಿವಾಸಿಗಳು, ಗ್ರಾಪಂ ಸದಸ್ಯರಾದ ವೆಂಕಟೇಶ್, ಕಾನೂನು ವಿದ್ಯಾರ್ಥಿಗಳಾದ ಪ್ರಜ್ವಲ್ ಹಾಗೂ ನವೀನ್ ಇನ್ನಿತರರಿದ್ದರು.



ದಾವಣಗೆರೆಯಲ್ಲಿ ನಡೆದ ಸಿದ್ದರಾಮೋತ್ಸವಕ್ಕೆ ತೆರಳಿ ವಾಪಸ್ಸಾಗುತ್ತಿದ್ದ ವೇಳೆ ಅಪಘಾತದಲ್ಲಿ ಮೃತಪಟ್ಟ ಪಿರಿಯಾಪಟ್ಟಣ ತಾಲೂಕಿನ ಹಲಗನಹಳ್ಳಿ ಗ್ರಾಮದ ಕಾಂಗ್ರೆಸ್ ಮುಖಂಡ ಫಸಿಯುದ್ದೀನ್ ಹಾಗೂ ಹೆಚ್.ಡಿ.ಕೋಟೆ ತಾಲೂಕಿನ ಚಿಕ್ಕಕಾಳೇಗೌಡನಪುರ ನಿವಾಸಿಗಳಾದ ಪ್ರಭು, ಸಣ್ಣಸ್ವಾಮಿ, ಸಿದ್ದರಾಜು ಅವರ ಮನೆಗೆ ಮಂಗಳವಾರ ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿದರು. ಈ ವೇಳೆ ಹುಣಸೂರು ತಾಲೂಕು ಕುರುಬರ ಸಂಘದ ಅಧ್ಯಕ್ಷ ಕುನ್ನೇಗೌಡ, ಹೆಚ್.ಡಿ.ಕೋಟೆ ತಾಲೂಕು ಕುರುಬರ ಸಂಘದ ಅಧ್ಯಕ್ಷ ಆನಂದ್, ಮುಖಂಡರಾದ ಮಲ್ಲೇಶ್, ಲೋಹಿತ್, ಪುಟ್ಟರಾಜು, ಗಣೇಶ್, ಶಷಿ, ಜಯಣ್ಣ, ಪುಟ್ಟರಾಜು, ಬೆಟ್ಟದಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಾಬು, ಮಹದೇವ್, ಮಂಜಣ್ಣ, ರಾಜೇಶ್, ಗೋವಿಂದ, ರಾಜೇಗೌಡ, ಕೌಮಾರೇಗೌಡ, ಬೀರೇಗೌಡ, ಮಲ್ಲೇಶ್, ಸಂತೋಷ್, ಗ್ರಾಪಂ ಸದಸ್ಯರಾದ ಕುಮಾರ್, ಅನಿಲ್, ಕಾಂಜೀಗೌಡ, ಕಾರ್ತಿಕ್, ಬಸಪ್ಪ, ಕುಮಾರಸ್ವಾಮಿ ಪ್ರಭು, ರಾಮು ಇನ್ನಿತರರಿದ್ದರು.

ನವವಿವಾಹಿತೆ ಆತ್ಮಹತ್ಯೆಗೆ ಶರಣು

ನಂಜನಗೂಡು, ಆ.9– ನವವಿವಾಹಿತೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇವರು ಮದುವೆಯಾಗಿ ಕೇವಲ 3 ತಿಂಗಳಾಗಿತ್ತು. ಮಂಗಳವಾರ ಶ್ರೀರಾಂಪುರ ಗ್ರಾಮದ ತನ್ನ ತಾತನ ಮನೆಯಲ್ಲಿ ನೇಣಿಗೆ ಶರಣಾಗಿದ್ದಾರೆ. ತಾಲೂಕಿನ ಕಾರ್ಯ ಗ್ರಾಮದ ಕೆ.ಜಿ.ಸೋಮಶೇಖರ್ ಅವರ ಪುತ್ರಿ ಕೆ.ಎಸ್.ವರ್ಷಿತಾ(20) ಆತ್ಮಹತ್ಯೆ ಮಾಡಿಕೊಂಡಿದ್ದು, ಇವರನ್ನು ಚಾಮರಾಜನಗರದ ಅಭಿಷೇಕ್ ಎಂಬಾತನೊಂದಿಗೆ ಕಳೆದ ಮೇ 8ರಂದು ವಿವಾಹ ಮಾಡಿಕೊಡಲಾಗಿತ್ತು. ಆಷಾಢ ಮಾಸದ ಅಂಗವಾಗಿ ಕೆ.ಎಸ್.ವರ್ಷಿತಾ ಜುಲೈನಲ್ಲಿ ತನ್ನ ತವರು ಮನೆಗೆ ಬಂದು, ನಾಪತ್ತೆಯಾಗಿದ್ದ ಸಂಬಂಧ ಆಕೆಯ ತಂದೆ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಜು.29ರಂದು ದೂರು ದಾಖಲಿಸಿದ್ದರು. ಇದಾದ ಬಳಿಕ ವರ್ಷಿತಾ ರಾಂಪುರ ಗ್ರಾಮದಲ್ಲಿರುವ ತನ್ನ ತಾತ ಶಿವರಾಜಪ್ಪ ಮನೆಗೆ ಬಂದು ನೆಲೆಸಿದ್ದಾಳೆ ಎನ್ನಲಾಗಿದೆ. ವರ್ಷಿತಾ ಮಂಗಳವಾರ ಬೆಳಗ್ಗೆ ಸ್ನಾನಕ್ಕೆಂದು ಹೋಗಿ ಸ್ನಾನದ ಮನೆಯಲ್ಲೇ ನೇಣಿಗೆ ಶರಣಾಗಿದ್ದಾಳೆ. ಸಾಕಷ್ಟು ಸಮಯವಾದರೂ ಹೊರಬಾರದಿರುವುದನ್ನು ಕಂಡು ಬಾಗಿಲು ಮುರಿದು ಒಳಹೋಗಿ ನೋಡಿದಾಗ ನೇಣಿಗೆ ಶರಣಾಗಿರುವುದು ಬೆಳಕಿಗೆ ಬಂದಿದೆ. ಕೂಡಲೇ ಮೈಸೂರಿನ ಖಾಸಗಿ ಆಸ್ಪತ್ರೆಗೆ ಸಾಗಿಸಲಾಯಿತಾದರೂ ಅಲ್ಲಿ ವೈದ್ಯರು ಮೃತಪಟ್ಟಿರುವುದಾಗಿ ಘೋಷಿಸಿದ್ದಾರೆ. ನಂತರ ದೇಹವನ್ನು ಮರಣೋತ್ತರ ಪರೀಕ್ಷೆಗೆ ಕೆ.ಆರ್.ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಲಾಗಿದೆ. ಈ ಸಂಬಂಧ ಹುಲ್ಲಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚರಂಡಿ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ



ಸರಗೂರು, ಆ.9– ಪಟ್ಟಣದ ನಿವಾಸಿಗಳ ಮೂಲ ಸೌಕರ್ಯಕ್ಕೆ ಹೆಚ್ಚು ಒತ್ತು ನೀಡಲಾಗುವುದು ಎಂದು 1ನೇ ವಾರ್ಡ್ ಪಟ್ಟಣ ಪಂಚಾಯಿತಿ ಸದಸ್ಯೆ ಹೇಮಾವತಿ ರಮೇಶ್ ತಿಳಿಸಿದರು. ಪಟ್ಟಣ ಪಂಚಾಯಿತಿ ವ್ಯಾಪ್ತಿಗೊಳಪಡುವ 1ನೇ ವಾರ್ಡ್‌ನಲ್ಲಿ 14ನೇ ಹಣಕಾಸು ಯೋಜನೆಯಡಿ ಚರಂಡಿ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ವಾರ್ಡ್‌ನಲ್ಲಿ ಹತ್ತು ಹಲವು ಸಮಸ್ಯೆಗಳಿವೆ. ಈ ಬಗ್ಗೆ ಪಟ್ಟಣ ಪಂಚಾಯಿತಿ ಸಭೆಯಲ್ಲಿ ಚರ್ಚಿಸಿದ್ದು, ಶಾಸಕ ಅನಿಲ್ ಚಿಕ್ಕಮಾದು ಅವರ ಗಮನಕ್ಕೆ ತರುವ ಮೂಲಕ ವಾರ್ಡ್ ಅಭಿವೃದ್ಧಿಗೆ ಸರ್ಕಾರದಿಂದ ಅನುದಾನ ತಂದು ಶ್ರಮಿಸಲಾಗುವುದು. ವಾರ್ಡ್‌ನಲ್ಲಿ ಚರಂಡಿ ಹೊಂದಿಕೊಂಡಂತೆ ಕಬಿನಿ ನಾಲೆ ಹಾದು ಹೋಗಿದ್ದು, ಚರಂಡಿ ನೀರು ನಾಲೆ ಸೇರುತ್ತಿದೆ. ಇದನ್ನು ತಪ್ಪಿಸಲು ತಡೆಗೋಡೆ, ಚರಂಡಿ ನಿರ್ಮಿಸಲು ಕ್ರಮವಹಿಸಲಾಗುವುದು ಎಂದರು.

ಪಟ್ಟಣ ಪಂಚಾಯಿತಿ ಮಾಜಿ ಸದಸ್ಯ ರಮೇಶ್ ಮಾತನಾಡಿ, 1ನೇ ವಾರ್ಡ್ ಅಭಿವೃದ್ಧಿಗೆ ಶಾಸಕರಾದ ಅನಿಲ್ ಚಿಕ್ಕಮಾದು ಅವರು ನಗರೋತ್ಥಾನ ಯೋಜನೆಯಡಿ 60 ಲಕ್ಷ ರೂ. ಅನುದಾನ ನೀಡಿ ಹೆಚ್ಚಿನ ಕಾಳಜಿ ವಹಿಸಿದ್ದಾರೆ. ಮುಂದಿನ ದಿನಗಳಲ್ಲಿ ಶಾಸಕರು ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಲಿದ್ದಾರೆ ಎಂದು ಹೇಳಿದರು.

ಈ ವೇಳೆ ವಾರ್ಡ್ ಮುಖಂಡರಾದ ರಾಘವೇಂದ್ರ, ಡ್ರೈವರ್ ಕಾಳಪ್ಪ, ಆಟೋ ಮಹೇಶ್, ಚಾಮರಾಜು, ಎಸ್.ಕೆ.ಕುಮಾರ, ಬಸವ, ರಾಜಣ್ಣ, ರಾಜು, ಶಿವು, ನಂದೀಶ್, ಗುರುಸ್ವಾಮಿ, ಚೇತನ್, ಸತೀಶ್, ಚಂದು, ನವೀನ್, ಪದ್ಮಾನಂದ ಜೋಯಿಸ್ ಸೇರಿದಂತೆ ವಾರ್ಡ್ ನಿವಾಸಿಗಳು ಹಾಜರಿದ್ದರು.

ಗ್ರಾಮಾಭಿವೃದ್ಧಿ ಯೋಜನೆ ಸದುಪಯೋಗಪಡಿಸಿಕೊಳ್ಳಿ



ಕಂಪಲಾಪುರ, ಆ.9– ಶ್ರೀಕ್ಷೇತ್ರ ಧರ್ಮ ಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಗ್ರಾಮೀಣರಿಗೆ ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದು, ಅವುಗಳನ್ನು ಸದುಪಯೋಗಪಡಿಸಿಕೊಳ್ಳುವಂತೆ ಯೋಜನೆ ಮೇಲ್ವಿಚಾರಕ ಸುಧಾಕರ್ ತಿಳಿಸಿದರು.

ಇಲ್ಲಿಗೆ ಸಮೀಪದ ಬಸಲಾಪುರದಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಒಕ್ಕೂಟದ ಸಹಯೋಗದಲ್ಲಿ ಸೋಮವಾರ ಶ್ರೀಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಧಾರ್ಮಿಕ ಕೇಂದ್ರ ಸ್ವಚ್ಛತಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮ್ಮ ಯೋಜನೆ ವತಿಯಿಂದ ಗ್ರಾಮೀಣ ಭಾಗದ ದೇವಸ್ಥಾನ, ಸಮುದಾಯ ಭವನ ನಿರ್ಮಾಣಕ್ಕೆ ಸಹಾಯಧನ ನೀಡಲಾಗುತ್ತಿದೆ. ಅದಕ್ಕಾಗಿ ದೇವಸ್ಥಾನದ ಕಮಿಟಿ ಇರಬೇಕು, ಬ್ಯಾಂಕ್ ಖಾತೆ ಇರಬೇಕು, ಶೇ.75 ರಷ್ಟು ಕಾಮಗಾರಿ ಮುಗಿದಿರಬೇಕು. ಸಾರ್ವಜನಿಕ ಸೇವೆ ಮಾಡುವುದೇ ಯೋಜನೆ ಮುಖ್ಯ ಉದ್ದೇಶವಾಗಿದ್ದು, ಪಾನ್‌ಕಾರ್ಡ್, ಆಧಾರ್ ಕಾರ್ಡ್ ತಿದ್ದುಪಡಿ ಹೀಗೆ ಹಲವಾರು ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಸಾರ್ವಜನಿಕರು ಇದರ ಸದುಪಯೋಗಪಡಿಸಿಕೊಳ್ಳಿ ಎಂದರು. ಈ ವೇಳೆ ಸಹಕಾರ ಸಂಘದ ಮಾಜಿ ಅಧ್ಯಕ್ಷ ಪುಟ್ಟೇಗೌಡ, ಮಾಜಿ ಉಪಾಧ್ಯಕ್ಷ ಮಹೇಶ್, ಕಂಪಲಾಪುರ ಸರ್ಕಾರಿ ಪ್ರೌಢ ಶಾಲೆ ಎಸ್‌ಡಿಎಂಸಿ ಅಧ್ಯಕ್ಷ ಸದಾಶಿವ, ಸದಸ್ಯರಾದ ಶಹಜಾನ್, ರಾಣಿ, ಒಕ್ಕೂಟದ ಅಧ್ಯಕ್ಷೆ ಚಂದನ, ತಾಸಿನಾ, ಶಿವಮ್ಮ, ಸುಮತಿ, ಗಣೇಶ್ ಸೇರಿದಂತೆ ಸ್ವಸಹಾಯ ಸಂಘದ ಸದಸ್ಯರು ಹಾಜರಿದ್ದರು.

ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ತರಲು ಶ್ರಮಿಸಿ

ಅರಣ್ಯ ವಸತಿ ಮತ್ತು ವಿಹಾರಧಾಮಗಳ ಮಾಜಿ ಅಧ್ಯಕ್ಷ ಎಂ.ಅಪ್ಪಣ್ಣ ಕರೆ



ಹೆಚ್.ಡಿ.ಕೋಟೆ, ಆ.9– ರಾಜ್ಯದಲ್ಲಿ ಮತ್ತೆ ಬಿಜೆಪಿಯನ್ನು ಅಧಿಕಾರಕ್ಕೆ ತರಲು ಕಾರ್ಯಕರ್ತರು ಶ್ರಮಿಸಬೇಕು ಎಂದು ಅರಣ್ಯ ವಸತಿ ಮತ್ತು ವಿಹಾರಧಾಮಗಳ ಮಾಜಿ ಅಧ್ಯಕ್ಷ ಎಂ.ಅಪ್ಪಣ್ಣ ಕರೆ ನೀಡಿದರು.


ಪಟ್ಟಣದ ಖಾಸಗಿ ಸಮುದಾಯ ಭವನದಲ್ಲಿ ನಡೆದ ಮಂಡಲ ಕಾರ್ಯಕಾರಿಣಿ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಕಾರ್ಯಕರ್ತರು ಗ್ರಾಮಗಳಿಗೆ ಭೇಟಿ ನೀಡಿ ಜನರಿಗೆ ಪಕ್ಷದ ಅಭಿವೃದ್ಧಿ ಕಾರ್ಯಗಳ ಬಗ್ಗೆ ತಿಳಿಸಿ ಮನದಟ್ಟು ಮಾಡಿ ಎಂದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಬಡವರಿಗೆ, ರೈತರಿಗೆ ನೀಡಿರುವ ವಿಶೇಷ ಯೋಜನೆಗಳ ಬಗ್ಗೆ ತಿಳಿಸಬೇಕು. ಆಯಾ ಗ್ರಾಮಗಳಲ್ಲಿ ರೈತರಿಗೆ ಯೋಜನೆ ತಲುಪುತ್ತಿವೆಯೇ ಎಂದು ಗಮನಹರಿಸಬೇಕು. ಗ್ರಾಮಗಳಲ್ಲಿರುವ ಸಮಸ್ಯೆಗಳ ಬಗ್ಗೆ ಜನರಿಂದ ಮಾಹಿತಿ ಪಡೆದು ಅವುಗಳನ್ನು ಬಗೆಹರಿಸಬೇಕು ಎಂದರು.

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಗಳನ್ನು ಜನರಿಗೆ ತಿಳಿಸುವ ಜೊತೆಗೆ ತೀವ್ರ ಮಳೆ ಹಿನ್ನೆಲೆಯಲ್ಲಿ ಗ್ರಾಮೀಣ ಭಾಗದಲ್ಲಿ ಸಾಕಷ್ಟು ಮನೆ ಬಿದ್ದು ಹೋಗಿವೆ. ಅಂತಹ ಕಡುಬಡವರಿಗೆ ಮನೆ ಕೊಡಿಸುವ ಮೂಲಕ ಸರ್ಕಾರದ ಯೋಜನೆಯನ್ನು ತಲುಪಿಸುವಲ್ಲಿ ಕಾರ್ಯಕರ್ತರು ಶ್ರಮಿಸಬೇಕು ಎಂದರು.

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ ತಾಲೂಕಿನ ಪ್ರತಿ ಮನೆ ಮನೆಯಲ್ಲೂ 13, 14, ಮತ್ತು 15 ರಂದು ತ್ರಿವರ್ಣ ಧ್ವಜ ಹಾರಿಸುವಂತೆ ಪಕ್ಷದ ಕಾರ್ಯಕರ್ತರು ಶ್ರಮಿಸಬೇಕು ಎಂದರು.

ಸಭೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಕಾರ್ಯಕಾರಣಿ ಸದಸ್ಯ ಸೂರ್ಯ ಕುಮಾರ್, ತಾಲೂಕು ಘಟಕದ ಅಧ್ಯಕ್ಷ ಗುರುಸ್ವಾಮಿ, ಮಾಜಿ ಅಧ್ಯಕ್ಷ ಸಿ.ಕೆ.ಗಿರೀಶ್, ವೆಂಕಟಸ್ವಾಮಿ, ಬಸವ ರಾಜಪ್ಪ, ಬೋರೇಗೌಡ ವೈ.ಟಿ.ಮಹೇಶ್, ನಂದೀಶ್, ವಿನಯ್, ಸಿದ್ದನಾಯ್ಕ ನಂದೀಶ್, ಮಂಜುನಾಥ್, ಸೈಯದ್ ಅಕ್ರಂ, ರಾಧಿಕಾ, ಸುನಂದಾರಾಜ್, ಜೆ.ಸಿ.ಯೋಗೀಶ್, ಸತೀಶ್, ಸಿದ್ದರಾಜು, ಪುನಿ, ಚಂದ್ರಮೌಳಿ, ಸುರೇಷ ಮಹೇಶ, ನಾಗೇಶ, ರಾಜು ಇದ್ದರು.



ಜಯಪುರ ಹೋಬಳಿ ಸೋಲಿಗರ ಕಾಲೋನಿ ಸರ್ಕಾರಿ ಹಿರಿಯ ಪ್ರಾಥಮಿಕ ಗಿರಿಜನ ಶಾಲಾ ಮಕ್ಕಳಿಗೆ ಜಯಪುರದ ಎಸ್.ಆರ್ ವೈನ್ಸ್ ಮಾಲೀಕ ಎಸ್.ಶ್ರೀಕಾಂತ್ ಸಮವಸ್ತ್ರಗಳನ್ನು ವಿತರಿಸಿದರು.

ದೇಶಕ್ಕೆ ರಾಷ್ಟ್ರಧ್ವಜ, ಸಂವಿಧಾನ, ರಾಷ್ಟ್ರಗೀತೆ ನೀಡಿದ್ದು ಕಾಂಗ್ರೆಸ್

ಎಐಸಿಸಿ ಆದೇಶದ ಮೇರೆಗೆ ಪಾದಯಾತ್ರೆ: ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ



ತಿ.ನರಸೀಪುರ, ಆ.9– ದೇಶಕ್ಕೆ ರಾಷ್ಟ್ರಧ್ವಜ, ಸಂವಿಧಾನ ಮತ್ತು ರಾಷ್ಟ್ರಗೀತೆ ಕೊಡುಗೆ ನೀಡಿದ್ದು ಕಾಂಗ್ರೆಸ್ ಪಕ್ಷ. ಈ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕೆಂಬ ಉದ್ದೇಶದೊಂದಿಗೆ ಎಐಸಿಸಿ ಆದೇಶದ ಮೇರೆಗೆ ಫ್ರೀಡಂ ಮಾರ್ಚ್ (ಸ್ವಾತಂತ್ರ್ಯ ನಡಿಗೆ) ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ತಾಲೂಕಿನ ರಂಗಸಮುದ್ರ ಗ್ರಾಮದಲ್ಲಿ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಕಾಂಗ್ರೆಸ್ ಪಕ್ಷದಿಂದ ಹಮ್ಮಿಕೊಂಡಿರುವ ಪಾದಯಾತ್ರೆಗೆ ಚಾಲನೆ ನೀಡಿ ಮಾತನಾಡಿದ ಅವರು, ಎಐಸಿಸಿ ಆದೇಶದ ಮೇರೆಗೆ ಕರ್ನಾಟಕದ ಎಲ್ಲಾ ಕ್ಷೇತ್ರಗಳಲ್ಲೂ 75 ಕಿಮೀ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಅದರಂತೆ ರಂಗ ಸಮುದ್ರ ಹಿಟ್ಟುವಳ್ಳಿ, ತುಂಬಲ, ಮುತ್ತತ್ತಿ, ಆರ್.ಪಿ.ಹುಂಡಿ, ಯಡದೊರೆ ಮೂಲಕ ಗರ್ಗೇಶ್ವರಿ ಗ್ರಾಮದ ತನಕ 12 ಕಿಮೀ ಪಾದಯಾತ್ರೆ ಮಾಡಲಾಗಿದ್ದು, ಈವರೆಗೆ 17 ಕಿಮೀ ಪಾದಯಾತ್ರೆ ಪೂರೈಸಲಾಗಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸ್ ಪಕ್ಷ ಹಾಗೂ ನಾಯಕರು ಯಾವ ರೀತಿ ಹೋರಾಟ ಮಾಡಿದ್ದಾರೆ. ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನವನ್ನೇ ಮುಡುಪಿಟ್ಟು, ತ್ಯಾಗ, ಬಲಿದಾನ ಮಾಡಿದ್ದನ್ನು ಜನರಿಗೆ ತಿಳಿಸಿಕೊಡಬೇಕೆಂಬುದೇ ಈ ಕಾರ್ಯಕ್ರಮದ ಉದ್ದೇಶ. ಆ ನಿಟ್ಟಿನಲ್ಲಿ ಜನರಲ್ಲಿ ಮತ್ತೆ ದೇಶಭಕ್ತಿ ಮೂಡಿಸಲು ಪಾದಯಾತ್ರೆ ಮಾಡಲಾಗುತ್ತಿದೆ ಎಂದರು.

ರಾಷ್ಟ್ರಧ್ವಜ ಹಿಡಿದು ಎಡೆಬಿಡದೆ ಸುರಿಯುತ್ತಿದ್ದ ಮಳೆಯನ್ನೂ ಲೆಕ್ಕಿಸದೇ ಶಾಸಕ ಡಾ.ಯತೀಂದ್ರ ರಾಷ್ಟ್ರಪ್ರೇಮ ಮೂಡಿಸುವ ಘೋಷಣೆ ಕೂಗುತ್ತಾ ಫ್ರೀಡಂ ಮಾರ್ಚ್ ನಡೆಸಿದರು. ನೂರಾರು ಮಂದಿ ಕಾರ್ಯಕರ್ತರು ಸ್ವಾತಂತ್ರ್ಯ ನಡಿಗೆ ಕಾರ್ಯಕ್ರಮಕ್ಕೆ ಶಾಸಕರೊಂದಿಗೆ ಹೆಜ್ಜೆ ಹಾಕಿ ಅವರಿಗೆ ಸಾಥ್ ನೀಡಿದರು. ಶಾಸಕರು 'ಬೋಲೋ ಭಾರತ್ ಮಾತಾ ಕಿ ಜೈ' ಎಂಬ ಘೋಷಣೆ ಕೂಗುತ್ತಾ ಕಾರ್ಯಕರ್ತರೊಂದಿಗೆ 12 ಕಿಮೀ ಪಾದಯಾತ್ರೆ ಪೂರೈಸಿದರು. ಈ ವೇಳೆ ಪ್ರತಿ ಗ್ರಾಮದಲ್ಲೂ ಪಟಾಕಿ ಸಿಡಿಸಿ ಶಾಸಕರಿಗೆ ಅದ್ದೂರಿ ಸ್ವಾಗತ ಕೋರಲಾಯಿತು.

ಪಾದಯಾತ್ರೆಯಲ್ಲಿ ಪಿಕಾರ್ಡ್ ಮಾಜಿ ಅಧ್ಯಕ್ಷ ಮಾದೇವಣ್ಣ, ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ್, ಕುರುಬರ ಸಂಘದ ಮಾಜಿ ಅಧ್ಯಕ್ಷ ಪ್ರಶಾಂತ್ ಬಾಬು, ವರುಣಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುದ್ದೇಗೌಡ, ಜಿಪಂ ಮಾಜಿ ಸದಸ್ಯ ಮಹದೇವ್, ಎಪಿಎಂಸಿ ಮಾಜಿ ಅಧ್ಯಕ್ಷ ಅನಿಲ್ ಕುಮಾರ್, ಪುರಸಭೆ ಮಾಜಿ ಅಧ್ಯಕ್ಷ ಸೋಮು, ಸದಸ್ಯ ಬಾದಾಮಿ ಮಂಜು, ಟಿ.ಎಂ.ನಂಜುಂಡಸ್ವಾಮಿ, ಶ್ರೀಕಂಠ, ಡಿಕೆಶಿ ಅಭಿಮಾನಿ ಬಳಗದ ಅಧ್ಯಕ್ಷ ಚೇತನ್, ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ವಕ್ತಾರ ಬಸವಣ್ಣ, ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕ ಅಮ್ಜದ್ ಖಾನ್, ವೈದ್ಯಕೀಯ ವಿಭಾಗದ ಜಿಲ್ಲಾಧ್ಯಕ್ಷ ಡಾ.ಪ್ರದೀಪ್, ಗ್ರಾಪಂ ಸದಸ್ಯರಾದ ಕಂಬಯ್ಯ, ನಾಗರತ್ನಮ್ಮ, ಲಕ್ಷ್ಮಿ, ಮಹದೇವಮ್ಮ, ಆರ್.ಪಿ.ಹುಂಡಿ ನಾಗರಾಜು, ಮಲ್ಲಹಳ್ಳಿ ರವಿ, ಬಿಲಿಗೆರೆಹುಂಡಿ ನಾಗರಾಜು ಮತ್ತಿತರರಿದ್ದರು.

ಮೈಸೂರು ಬೇಸಿಗೆ ರೇಸುಗಳು

13ನೇ ದಿನ, ಬುಧವಾರ 10-8-2022

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 12.30 ಗಂಟೆಗೆ)

I. ಅಂಬಾವಿಲಾಸ ಪ್ಯಾಲೇಸ್ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮ.12.30ಕ್ಕೆ
1. ಗೋಲ್ಡ್ ಚಾರ್ಮ್ 2. ಶಿವಾಲಿಕ್ ಎಂಪರರ್ 3. ಗೇಮ್ ಬಾಯ್

II. ಕರಿಘಟ್ಟ ಸ್ಟೇಕ್ಸ್–1600 ಮೀ. ರೇಟೆಡ್ 20 ರಿಂದ 45. ಮ.1.00ಕ್ಕೆ
1. ವಂದನ್ 2. ಮಿಸ್ಟಿಕ್ ಮೌಂಟೇನ್ 3. ವಿಸ್ಕಿ ಸೋರ್

III. ನಾದಿರ್ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45. ಮ.1.30ಕ್ಕೆ
1 ಕ್ಯಾಲಿಫೋರ್ನಿಯಾ ಗೋಲ್ಡ್ 2 ಹೈಲ್ಯಾಂಡ್ ಪಾರ್ಕ್ 3 ಫೆಸ್ಟಿವ್ ಸ್ಟಾರ್

IV. ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ ಟ್ರೋಫಿ–1200 ಮೀ. 3 ವರ್ಷ (ಟರ್ಮ್ಸ್). ಮ.2.00ಕ್ಕೆ
1. ಮಿಲೋಸ್ 2. ಮೆಡೌವ್ ಫ್ಲವರ್ 3. ಮೇಬರಿ

V. ಅರಸು ಜಮಖಾನ ಕ್ಲಬ್ ಟ್ರೋಫಿ–1400 ಮೀ. ರೇಟೆಡ್ 40 ರಿಂದ 65. ಮ.2.30ಕ್ಕೆ
1. ಮುಟಾಂಟ್ 2. ಡಿ ಥರ್ಟಿನ್ ಟ್ವೆಲ್ವ್ 3. ನಾವೆಲ್ ವೆಹ್ಲರ್

VI. ಕಂಠೀರವ ನರಸಿಂಹರಾಜ ಸ್ಪೋರ್ಟ್ಸ್ ಕ್ಲಬ್ ಟ್ರೋಫಿ ಡಿ1–1100 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ಪ್ಲೈಯಿಂಗ್ ಫಾಲ್ಕನ್ 2. ಸೂಪರ್ ಸೆಕ್ಸಿ 3. ಡಾಲ್ ಹೌಸಿ

VII. ಈಕ್ವೈನ್ ವೆಟರಿನರಿಯನ್ಸ್ ಟ್ರೋಫಿ –1600 ಮೀ. ರೇಟೆಡ್ 60 ರಿಂದ 85. ಮ.3.30ಕ್ಕೆ
1. ಫ್ಲಾಷ್ ಬಾಂಡ್ 2. ಸಾದಿಕ್ 3. ರೈಸ್‌ಯಿಂಗ್ ಸನ್


VIII. ಹೇಮಾವತಿ ಮಿಲಿಯನ್ 2022 –2000 ಮೀ. 4 ವರ್ಷ (ಟರ್ಮ್ಸ್). ಸಂ.4.00ಕ್ಕೆ
1. ಮೈ ಒಪಿನಿಯನ್ 2. ಏಂಜಲಿನೊ

IX. ಮೈಸೂರು ರೇಸ್ ಕ್ಲಬ್ ಮಿಲಿಯನ್ 2022–1600 ಮೀ. 3 ವರ್ಷ (ಟರ್ಮ್ಸ್). ಸಂ.4.30ಕ್ಕೆ
1. ಅಶ್ವ ಯದುವೀರ್ 2. ರಾಪಿಡಸ್ 3. ಫಾರ್‌ಸೆಟಿ

X. ಕಂಠೀರವ ನರಸಿಂಹರಾಜ ಸ್ಪೋರ್ಟ್ಸ್ ಕ್ಲಬ್ ಟ್ರೋಫಿ ಡಿ2–1100 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1. ದಿ ಪ್ರೈರ್ 2. ಕಾಲಾಹರಿ ಗೋಲ್ಡ್ 3. ಈವಾಂಡರ್

ದಿನದ ಅತ್ಯುತ್ತಮ	ಮೈ ಒಪಿನಿಯನ್
ಡಬ್ಬಲ್	ಫ್ಲಾಷ್ ಬಾಂಡ್, ಅಶ್ವ ಯದುವೀರ್
ಜಾಕ್‌ಪಾಟ್	6, 7, 8, 9 ಮತ್ತು 10
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5, 6 ಮತ್ತು 7
III ಟ್ರಿಬಲ್	8, 9 ಮತ್ತು 10
ಎಕ್ಸ್‌ಆಕ್ಟ್	9 ಮತ್ತು 10

ಟಿಪ್‌ಸ್ಟರ್ ಪಿಜಿಸಿ













ಶ್ರದ್ಧಾಂಜಲಿ



ಲೇ||ಜಸ್ಟಿಸ್ ದೊಡ್ಡಕಾಳೇಗೌಡರ ಧರ್ಮಪತ್ನಿ

ಶ್ರೀಮತಿ ಯಶೋದಮ್ಮನವರು

ಅಂತ್ಯಕ್ರಿಯೆ: 10ನೇ ಆಗಸ್ಟ್ ಬುಧವಾರದಂದು ಬೆಳಿಗ್ಗೆ 10 ಗಂಟೆಗೆ

**ಸ್ಥಳ: ದೇವೇಗೌಡನಕೊಪ್ಪಲು,
ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ**

ಇಂತಿ ದುಃಖಿಸ್ತರು: ಸುಂಕಾತೊಣ್ಣೂರು ಹಾಗೂ
ದೇವೇಗೌಡನಕೊಪ್ಪಲು ಗ್ರಾಮಸ್ಥರು ಮತ್ತು ಪಾಂಡವಪುರ
ತಾಲ್ಲೂಕಿನ ನಾಗರೀಕ ಬಂಧುಗಳು